
ಬಸವಕಲ್ಯಾಣದ ವಸ್ತುಸಂಗ್ರಹಾಲಯದಲ್ಲಿನ ಶಿಲ್ಪಗಳು

(ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ೨೦೧೬-೧೭ನೇ ಸಾಲಿನ ಪರಿಶಿಷ್ಟ ಜಾತಿ/ ಪಂಗಡ ವಿಶೇಷ ಘಟಕ ಯೋಜನೆಯಡಿಯ ಫೆಲೋಷಿಪ್‌ಗಾಗಿ ಸಲ್ಲಿಸುತ್ತಿರುವ ಸಂಶೋಧನಾ ಪ್ರಬಂಧ)





ಸಂಶೋಧಕರು

ಡಾ. ವೈಶಾಲಿಬಾಯಿ ಕಾಂಬಳೆ

ಮಾರ್ಗದರ್ಶಕರು

ಶ್ರೀ. ಎಲ್. ಶಿವಲಿಂಗಪ್ಪ

ಕರ್ನಾಟಕ ಶಿಲ್ಪಕಲಾ ಅಕಾಡೆಮಿ

ಕನ್ನಡ ಭವನ, ಮೇಲ್ಮನೆ, ಚಾಲುಕ್ಯ ವಿಭಾಗ

ಜೆ.ಸಿ. ರಸ್ತೆ, ಬೆಂಗಳೂರು

೨೦೧೬-೧೭

ಬಸವಕಲ್ಯಾಣದ
ವಸ್ತುಸಂಗ್ರಹಾಲಯದಲ್ಲಿನ ಶಿಲ್ಪಗಳು

(ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ೨೦೧೬-೧೭ನೇ ಸಾಲಿನ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ವಿಶೇಷ ಘಟಕ ಯೋಜನೆಯಡಿಯ ಫೆಲೋಷಿಪ್‌ಗಾಗಿ ಸಲ್ಲಿಸುತ್ತಿರುವ ಸಂಶೋಧನಾ ಪ್ರಬಂಧ)

ಸಂಶೋಧಕರು

ಡಾ. ವೈಶಾಲಿಬಾಯಿ ಕಾಂಬಳೆ

ಮಾರ್ಗದರ್ಶಕರು

ಶ್ರೀ. ಎಲ್. ಶಿವಲಿಂಗಪ್ಪ

ಹಿರಿಯ ಕಲಾವಿದರು

ಮೈಸೂರು

ಕರ್ನಾಟಕ ಶಿಲ್ಪಕಲಾ ಅಕಾಡೆಮಿ

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು – 02

೨೦೧೬-೧೭

ಪ್ರಮಾಣ ಪತ್ರ

ಡಾ. ವೈಶಾಲಿಬಾಯಿ ಕಾಂಬಳೆ ಎಂಬ ನಾನು ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ವಿಶೇಷ ಘಟಕ ಯೋಜನೆಯ ಫೆಲೋಶಿಪ್ ಅಂಗವಾಗಿ ಸಂಶೋಧನಾ ಪ್ರಬಂಧವನ್ನು ಮೈಸೂರಿನ ಹಿರಿಯ ಚಿತ್ರ, ಶಿಲ್ಪಕಲಾವಿದರು ಹಾಗೂ ಸಾಹಿತಿಗಳಾದ ಶ್ರೀ. ಎಲ್. ಶಿವಲಿಂಗಪ್ಪ ಅವರ ಮಾರ್ಗದರ್ಶನದಲ್ಲಿ **"ಬಸವಕಲ್ಯಾಣದ ವಸ್ತುಸಂಗ್ರಹಾಲಯದಲ್ಲಿನ ಶಿಲ್ಪಗಳು"** ಎಂಬ ಪ್ರಬಂಧವನ್ನು ಸಿದ್ಧಪಡಿಸಿದ್ದೇನೆ.

ಇದು ನನ್ನ ಮೂಲ ಸಂಶೋಧನಾ ಕೃತಿಯಾಗಿದ್ದು, ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಇನ್ನಿತರ ಯಾವುದೇ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ವಂದನೆಗಳೊಂದಿಗೆ,

ದಿನಾಂಕ :

ಸಂಶೋಧನಾ ವಿದ್ಯಾರ್ಥಿ

ಸ್ಥಳ : ಬೆಂಗಳೂರು

(ಡಾ. ವೈಶಾಲಿಬಾಯಿ ಕಾಂಬಳೆ)
ಮಹಾದೇವಿ ಕಾಲೋನಿ, ಶಿವಪುರ ರಸ್ತೆ,
ಮಸೀದಿ ಎದುರುಗಡೆ, ತ್ರಿಪುರಾಂತ,
ಬಸವಕಲ್ಯಾಣ–೫೮೫ ೩೨೭, ಬೀದರ ಜಿಲ್ಲೆ

L. Shivalingappa
Artist, Sculptor, Writer
State Shilpakala academy Awardee
Suvarna Karnataka Year
State Lalithakala Academy Awardee
☎ : 0821-2331128 Cell : 9986881128
www.shivalingappa-mysoreartgallery.in

MYSORE ART GALLERY

12th Cross Ramanuja Road,
MYSURU-570004

ಎಲ್. ಶಿವಲಿಂಗಪ್ಪ
ಕಲಾವಿದ - ಶಿಲ್ಪಿ - ಲೇಖಕ
ರಾಜ್ಯ ಶಿಲ್ಪ ಕಲಾ ಅಕಾಡಮಿ ಸದಸ್ಯ
ಸುವರ್ಣ ಕರ್ನಾಟಕ ವರ್ಷ ಪ್ರಶಸ್ತಿ ಪುರಸ್ಕೃತ
ರಾಜ್ಯ ಲಲಿತ ಕಲಾ ಅಕಾಡಮಿ ಪ್ರಶಸ್ತಿ ಪುರಸ್ಕೃತ
E-Mail : shivalingappa m.a.g@gmail.com

ಕಲಾವಿದರನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಪ್ರದರ್ಶನಕ್ಕೆ ಉಚಿತವಾಗಿ ನೀಡುವ ರಾಜ್ಯದ ಏಕೈಕ ಮೈಸೂರು ಆರ್ಟ್ ಗ್ಯಾಲರಿ.

ಸಂಬಂಧವಾಗಿ : ದಿನಾಂಕ 17/3/2018.

ರಿಜಿಸ್ಟ್ರಾರ್ ಅವರಿಗೆ
ಕರ್ನಾಟಕ ಶಿಲ್ಪಕಲಾ ಅಕಾಡಮಿ
ಕನ್ನಡ ಭವನ, ಬೆಂಗಳೂರು-02

ಮಾನ್ಯರೇ

ದೃಢೀಕರಣ ಪತ್ರ

ನನ್ನ ಮಾರ್ಗದರ್ಶನದಲ್ಲಿ ಡಾ. ವೈಶಾಲಿಬಾಯಿ ಕಾಂಬಳೆ ಅವರು ಬಸವಕಲ್ಯಾಣದ ವಸ್ತುಸಂಗ್ರಹಾಲಯದಲ್ಲಿನ ಶಿಲ್ಪಗಳು ಎಂಬ ವಿಷಯ ಕುರಿತು ಸಂಶೋಧನಾ ಪ್ರಬಂಧವನ್ನು ಪೂರ್ಣಗೊಳಿಸಿದ್ದು ಅವರು ಹಸ್ತಪ್ರತಿಯನ್ನು ಶಿಲ್ಪಕಲಾ ಅಕಾಡಮಿಗೆ ಸಲ್ಲಿಸುತ್ತಿದ್ದಾರೆ. ಇವರಿಗೆ ಪಿಹೆಚ್‌ಡಿ ನಿಯಮಾನುಸಾರ ನೀಡಲು ಈ ಮೂಲಕ ಶಿಫಾರಸ್ಸು ಮಾಡುತ್ತೇನೆ.

ಪ್ರಕಟಣೆಯ ಹಂತದಲ್ಲಿ ಮತ್ತೊಮ್ಮೆ ಪರಿಷ್ಕರಿಸಿ ಪ್ರಸ್ತುತದ ಪ್ರಬಂಧವನ್ನು ಮುದ್ರಣ ಮಾಡಬಹುದಾಗಿದೆ.

ವಂದನೆಗಳೊಂದಿಗೆ

ತಮ್ಮ ವಿಶ್ವಾಸಿ

ಶಿವಲಿಂಗಪ್ಪ
ಮೈಸೂರು ಆರ್ಟ್ ಗ್ಯಾಲರಿ
ರಾಮಾನುಜ ರಸ್ತೆ, 12ನೇ ಕ್ರಾಸ್,
ಮೈಸೂರು-570 004
9986881128

ಪರಿವಿಡಿ

ಅಧ್ಯಾಯ - ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಚಾರಿಕತೆ

ಅಧ್ಯಾಯ - ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ

ಕಲೆಗೆ ಅರ್ಥ ಋಗ್ವೇದದಲ್ಲಿ ಅಂಶ ಎಂಬ ಅರ್ಥ ಛಾಯೆಯಿದೆ. ಕಲೆ ಎಂಬುದು ಆದಿವ್ಯಕ್ತಿಯ ಕಾಂತಿಯ ಒಂದು ಕಿರಣ ಕಲೆ ಎಂಬುದರ ಸಾಮಾನ್ಯ ಅರ್ಥ, ಉಪಾಯ ಅಥವಾ ಕೌಶಲ ಎಂಬುದು ಯಾವ ಉಪಾಯದಿಂದ ಅಥವಾ ಕೌಶಲದಿಂದ ನಮ್ಮ ಭಾವನೆಗಳನ್ನು ಆಲೋಚನೆಗಳನ್ನು ಮನಮುಟ್ಟುವ ರೀತಿಯಲ್ಲಿ ತಿಳಿಸುವುದೋ ಅಂಥ ಈ ವಿಧಾನವೇ ಕಲೆ ಕಲೆಯನ್ನು ಲಲಿತಕಲೆಯೆಂದು ಮತ್ತು ಲಲಿತೇತರ ಕಲೆಯೆಂದು ಎರಡು ರೀತಿಯಲ್ಲಿ ಕರೆಯುತ್ತಾರೆ.

ಲಲಿತಕಲೆಯಲ್ಲಿ ಚಿತ್ರಕಲೆ ಮತ್ತು ಶಿಲ್ಪಕಲೆಗಳಿಗೆ ಗಮನಾರ್ಹ ಸ್ಥಾನವಿದೆ. ಆದರೆ ಇವು ಒಂದನ್ನು ಒಂದು ಬಿಟ್ಟು ಇನ್ನೊಂದಿಲ್ಲಾ ಎನ್ನುವುದು ಅಷ್ಟೇ ಮುಖ್ಯವಾಗಿದೆ. ಚಿತ್ರ ಮತ್ತು ಶಿಲ್ಪಗಳನ್ನು ದೇವಾಲಯಗಳನ್ನು ಒಳಗೊಂಡಂತೆ ಎಲ್ಲಾ ರೀತಿಯ ಕಟ್ಟಡಗಳ ಅಲಂಕಾರಕ್ಕಾಗಿ ಉಪಯೋಗಿಸುತ್ತಿದ್ದುದರಿಂದ ಚಿತ್ರ ಮತ್ತು ಶಿಲ್ಪ ರಚನೆ ಕ್ಷೇತ್ರಗಳು ವಾಸ್ತು ಶಾಸ್ತ್ರದ ಒಂದು ಅಂಗವೇ ಆಗಿದ್ದವು. ವಿವಿಧ ಚಿತ್ರ ಮತ್ತು ಶಿಲ್ಪ ವಿಗ್ರಹಗಳನ್ನು ಬೇರೆ ಬೇರೆ ಭಂಗಿ ಮತ್ತು ಭಾಗಗಳಲ್ಲಿ ಒಡಮೂಡಿಸಬೇಕಾದಾಗ ಸಹಜವಾಗಿ ಅದಕ್ಕೆ ಸಂಗೀತ ಮತ್ತು ನೃತ್ಯದ ಸಹಾಯ ಪ್ರೇರಣೆ ಅವಶ್ಯವಾಗಿರುತ್ತದೆ. ಹೀಗಾಗಿ ವಾಸ್ತು

ಶಾಸ್ತ್ರವೆನ್ನುವುದನ್ನು ವಾಸ್ತು, ಚಿತ್ರ, ಶಿಲ್ಪ, ಸಂಗೀತ, ನೃತ್ಯ ಇವೆಲ್ಲವುಗಳ ಪರಸ್ಪರ ಪ್ರಭಾವಗಳ ಒಟ್ಟಾರೆ ಅಧ್ಯಯನವಾಗಿದೆ. ಆದ್ದರಿಂದಲೇ "ವಿಷ್ಣುಧರ್ಮೋತ್ತರ ಗ್ರಂಥದಲ್ಲಿ ಚಿತ್ರಕಲೆ ಗೊತ್ತಿಲ್ಲದವನು ವಿಗ್ರಹಗಳನ್ನು ಅರಿಯಲಾರ ನೃತ್ಯಗೊತ್ತಿಲ್ಲದವನು ಚಿತ್ರ ಕಲೆಯನ್ನು ತಿಳಿಯಲಾರ, ಸಂಗೀತ ಗೊತ್ತಿಲ್ಲದವನು ನೃತ್ಯವನ್ನೇ ಅರಿಯಲಾರ" ಎಂದು ಸ್ಪಷ್ಟವಾಗಿ ಈ ಲಲಿತಕಲೆಗಳ ಪರಸ್ಪರ ಅವಲಂಬನೆಯನ್ನು ಕುರಿತು ಮಾಹಿತಿಯನ್ನು ನೀಡುತ್ತದೆ.

ಇಲ್ಲಿ ಶಿಲ್ಪ ವಾಸ್ತುಶಿಲ್ಪದ ಜ್ಞಾನ ಚಿತ್ರಕಾರನಿಗೆ ಇರಬೇಕು. ಹಾಗೆಯೇ ರೇಖೆ, ಚಿತ್ರಕಲೆಯ ಜ್ಞಾನವೂ ಇರಬೇಕು ಅಂದಾಗ ಮಾತ್ರ ಒಳ್ಳೆಯ ಕಲಾಕೃತಿ ಬರಲು ಸಾಧ್ಯವಾಗುತ್ತದೆ. ದೃಶ್ಯಕಲೆಯಲ್ಲಿ ಶಿಲ್ಪ ಮತ್ತು ಚಿತ್ರಕಲೆಯಲ್ಲಿ ಬಹುಮುಖ್ಯವಾದ ಎರಡು ಅಂಗಳಾಗಿವೆ. ಪ್ರಾಚೀನ ಕಾಲದಿಂದಲೂ ಅನೇಕ ದೇವಾಲಯಗಳಲ್ಲಿ ಭಿತ್ತಿಚಿತ್ರಕಲೆ ಶಿಲ್ಪಕಲಾಕೃತಿಗಳು ಜೊತೆ ಜೊತೆಯಲ್ಲಿ ಬೆಳೆದುಕೊಂಡು ಬಂದಿರುವುದನ್ನು ಕಾಣುತ್ತೇವೆ.

"ಮಾನವನು ಈ ಭೂಮಿಯ ಮೇಲೆ ಕಾಣಿಸಿಕೊಂಡಾಗಿನಿಂದಲೂ ಕಾಲಾನುಕ್ರಮದಲ್ಲಿ ಅವನಿಂದ ತನ್ನ ಜೀವನೋಪಾಯಕ್ಕೆ ಹಾಗು ತನ್ನ ಭಾವನೆಗಳನ್ನು ವ್ಯಕ್ತಪಡಿಸಲು ಉದ್ದೇಶಪೂರ್ವಕವಾಗಿ ಉಪಯೋಗಿಸಲ್ಪಟ್ಟ, ರಚಿಸಲ್ಪಟ್ಟ ವಸ್ತುಗಳ ಅವಶೇಷಗಳೇ "ಪ್ರಾಚ್ಯವಸ್ತು"ಗಳು. ಆದುದರಿಂದ ಕೇವಲ ಇತಿಹಾಸ ಪ್ರಸಿದ್ಧ ಧಾರ್ಮಿಕ ಕಟ್ಟಡಗಳು, ಅರಮನೆಗಳು, ಶಾಸನಗಳು, ನಾಣ್ಯಗಳು ಮುಂತಾದವುಗಳಲ್ಲದೆ, ಸಾಮಾನ್ಯವಾದ ಗಡಿಗೆ, ಮಡಿಕೆಯ ಚೂರುಗಳು, ಕಲ್ಲಿನ ಚಕ್ಕೆಗಳು, ಮಣಿಗಳು, ಮಣ್ಣಿನ ಗೊಂಬೆಗಳು, ಎಲುಬು ಇವೇ ಮೊದಲಾದವುಗಳೂ ಕೂಡ ಮಾನವ ಇತಿಹಾಸದ ರೋಮಾಂಚಕಾರಿ ವಿಷಯಗಳನ್ನು ತಿಳಿಯಲು ನೆರವಾಗುವುವು. ಇಂತಹ ಪ್ರಾಚ್ಯವಸ್ತುಗಳ ಆಧಾರದಿಂದ ಮಾನವನ ಸಂಸ್ಕೃತಿ, ಇತಿಹಾಸ ತಿಳಿಸುವುದೇ ಪ್ರಾಚ್ಯವಸ್ತು ಶಾಸ್ತ್ರ (*Archaeology*)."

ಮಾನವನ ಇತಿಹಾಸ ತಿಳಿಯಲು ಅವನು ಬಿಟ್ಟುಹೋದ ಕುರುಹು, ಮುದ್ರೆಗಳು, ಶಿಲ್ಪಗಳು, ರೇಖಾಚಿತ್ರಗಳು, ವರ್ಣಚಿತ್ರಗಳು ಆಧಾರವಾಗಿರುತ್ತವೆ. ಈ ಕುರುಹುಗಳನ್ನು ಆಧರಿಸಿ, ಆಯಾ ಕಾಲದ ಕಲೆ ಸಂಸ್ಕೃತಿ, ಜೀವನ ವಿಧಾನ ತಿಳಿಯಬಹುದು. ನಮ್ಮ

ಪೂರ್ವಜರ ಈ ಆಧಾರಗಳನ್ನು ಮುಂದಿನ ಜನಾಂಗಕ್ಕೆ ಉಳಿಸಿಕೊಂಡು ಹೋಗುವುದು ಅವಶ್ಯವಾಗಿದೆ. ಈ ಹಿನ್ನೆಲೆಯಲ್ಲಿ ಒಂದು ರಾಷ್ಟ್ರ, ದೇಶ, ರಾಜ್ಯದ ಚಾರಿತ್ರಿಕ, ಧಾರ್ಮಿಕ, ಸಾಮಾಜಿಕ, ಆರ್ಥಿಕ, ವೈಜ್ಞಾನಿಕ ಸಾಧನಗಳನ್ನು ತೋರಿಸುವ ಅಮೂಲ್ಯ ವಸ್ತುಗಳನ್ನು, ನಮ್ಮ ಪೂರ್ವಜರ ಜೀವನ ಸಾಧನೆಯ ಕುರುಗಳನ್ನು ಒಂದು ಕಡೆಗೆ ವ್ಯವಸ್ಥಿತವಾಗಿ ಕಾಯ್ದಿಡುವ, ಶಾಸ್ವತವಾಗಿ ಪ್ರದರ್ಶಿಸುವ ಹಿನ್ನೆಲೆಯಲ್ಲಿ ರೂಪುಗೊಂಡ ಸ್ಥಳಗಳು "ವಸ್ತುಸಂಗ್ರಹಾಲಯ"ಗಳಾಗಿವೆ. ಈ ವಸ್ತುಸಂಗ್ರಹಾಲಯಗಳ ಮೂಲಕ ಮಾನವ ಕುಲಶಾಸ್ತ್ರ, ಪ್ರಾಕೃತಿಕ ಚರಿತ್ರೆ, ಚಿತ್ರಕಲೆ, ವಾಸ್ತುಶಿಲ್ಪಗಳ ಬಗ್ಗೆ ಅಧ್ಯಯನ ಹಾಗೂ ಸಮಗ್ರ ಮಾಹಿತಿಯನ್ನು ಪಡೆಯಲು ಅನುಕೂಲ ಕಲ್ಪಿಸಲಾಗಿದೆ.

ಒಂದು ಕಾಲದಲ್ಲಿ ವೈಭವದಿಂದ ಆರಾಧಿಸಲ್ಪಟ್ಟ ವಿವಿಧ ಮಾಧ್ಯಮದ ಶಿಲ್ಪಕಲಾಕೃತಿಗಳು ಸೌಂದರ್ಯದ ಕಲಾತ್ಮಕವಾದ ಭಾಗವಾಗಿಯೂ ಜನಮನ್ನಣೆಯನ್ನು ಪಡೆದಿದ್ದವು ಹಾಗೆಯೇ ಚಿತ್ರಕಲೆಯು ಕೂಡಾ ಮಹತ್ವದ ಸ್ಥಾನವನ್ನು ಪಡೆದುಕೊಂಡು ಈ ಚಿತ್ರ ಮತ್ತು ಶಿಲ್ಪಕಲೆಯಲ್ಲಿ ಪರಂಪರಾಗತರಾದ ಅನೇಕ ಕಲಾವಿದರ ಹೆಸರುಗಳು, ಶಾಸನ, ಸಾಹಿತ್ಯ ಕೃತಿಗಳಲ್ಲಿ ಈಗಲು ಕಂಡು ಬರುತ್ತದೆ.

ಆದರೆ ಪ್ರಕೃತಿಯ ವಿಕೋಪ ಮತ್ತು ಯುದ್ಧ, ಮತೀಯ ಸಂಘರ್ಷ ಮುಂತಾದವುಗಳ ಕಾರಣವಾಗಿ ಅನೇಕ ಮೌಲಿಕ ಕಲಾಕೃತಿಗಳು ಇಂದಿಗೂ ಭಗ್ನಗೊಂಡು ಅಲ್ಲಲ್ಲಿ ಬಿದ್ದಿರುವುದನ್ನು ಅನೇಕ ದೇವಾಲಯಗಳಲ್ಲಿ ಇಂದಿಗೂ ಕಾಣಬಹುದಾಗಿದೆ. ಅವುಗಳ ರಕ್ಷಣೆಗೆ ಸರ್ಕಾರ ಸಾಕಷ್ಟು ಯೋಜನೆಗಳನ್ನು ಹಾಕಿಕೊಂಡು ಕಾರ್ಯ ನಿರ್ವಹಿಸುತ್ತದೆ. ಇವುಗಳ ರಕ್ಷಣಾ ಜವಾಬ್ದಾರಿಯನ್ನು ಭಾರತ ಸರ್ಕಾರ ಪುರಾತತ್ವ ಸರ್ವೇಕ್ಷಣಾಲಯ ಕರ್ನಾಟಕ ಸರ್ಕಾರದ ಪುರಾತತ್ವ ಇಲಾಖೆ ಪ್ರಾಚ್ಯವಸ್ತು ಪರಂಪರೆಯ ನಿರ್ದೇಶನಾಲಯಗಳ ಕಾರ್ಯ ನಿರ್ವಹಿಸುತ್ತವೆ. ಇಲ್ಲಿ ಬಸವಕಲ್ಯಾಣ ಮುಖ್ಯವಾಗಿ ಕೇಂದ್ರಸರ್ಕಾರ ಸಂಗ್ರಹಾಲಯದಲ್ಲಿರುವ ಪ್ರಮುಖ ಶಿಲ್ಪಕಲಾಕೃತಿಗಳ ಸ್ಥೂಲ ಅಧ್ಯಾಯನವನ್ನು ಕೈಗೊಳ್ಳಲಾಗಿದೆ.

ಅಧ್ಯಯನದ ಉದ್ದೇಶ

ಕರ್ನಾಟಕದಲ್ಲಿ ದೃಶ್ಯಕಲೆಯ ಕ್ಷೇತ್ರದಲ್ಲಿ ಸಂಶೋಧನೆಗಾಗಿ ಅನೇಕ ಹೊಸ ಹೊಸ ವಿಷಯಗಳು ಸಂಶೋಧನಕ್ಕಾಗಿ ಕೈ ಮಾಡಿ ಕರೆಯುತ್ತವೆ. ಇತ್ತೀಚಿನ ದಿನಗಳಲ್ಲಿ ತುಂಬ ಗಂಭೀರವಾಗಿ ಈ ಕ್ಷೇತ್ರದಲ್ಲಿ ಅಧ್ಯಯನವನ್ನು ಮಾಡುವ ಮುನ್ನ ಅದರ ಮೂಲ ಉದ್ದೇಶವೇನು ಅಧ್ಯಯನ ಯಾವ ಸ್ವರೂಪದಲ್ಲಿರಬೇಕು ಹಾಗೂ ಯಾವ ವಿಧಾನದಲ್ಲಿ ಅಧ್ಯಯನ ಕೈಗೊಳ್ಳಬಹುದು ಎಂಬುದು ಮುಖ್ಯವಾಗುತ್ತದೆ. ಇದರ ಆಧಾರದ ಮೇಲೆ ವಿಷಯ ಮಂಡನೆ ಮಾಡುತ್ತಾ ಹೋದರೆ ಅದು ಪೂರ್ಣವಾಗುತ್ತದೆ ಎಂಬ ಪ್ರಜ್ಞಾಪೂರ್ವಕ ಚೌಕಟ್ಟನ್ನು ಗಮನದಲ್ಲಿಟ್ಟುಕೊಂಡು ಪ್ರಸ್ತುತ ಅಧ್ಯಯನವನ್ನು ಪ್ರಮುಖವಾಗಿ ಕೈಗೊಳ್ಳಲಾಗಿದೆ.

ಈ ಹಿನ್ನೆಲೆಯಲ್ಲಿ ***"ಬಸವಕಲ್ಯಾಣದ ವಸ್ತುಸಂಗ್ರಹಾಲಯದಲ್ಲಿನ ಶಿಲ್ಪಗಳು"*** ಎಂಬ ವಿಷಯವನ್ನು ಕುರಿತು ಸಂಶೋಧನಾ ಅಧ್ಯಯನ ನಡೆಸಲು ಉದ್ದೇಶಿಸಲಾಗಿದೆ. ನಮ್ಮ ಕಣ್ಣೆದುರಿಗಿರುವ ಎಷ್ಟೊ ವಸ್ತುಗಳು ಮತ್ತು ವ್ಯಕ್ತಿಗಳ ಸಾಧನೆ, ಐತಿಹಾಸಿಕ ವಿಶೇಷತೆ ನಮಗೆ ಗೊತ್ತಿರುವುದಿಲ್ಲ ಅವುಗಳ ಬಗ್ಗೆ ತಿಳಿದುಕೊಳ್ಳುವ ಕುತೂಹಲ ಬಹಳಷ್ಟು ಜನರಿಗೆ ಇರುವದಿಲ್ಲ ಹಾಗಾಗಿ ನಮ್ಮ ಸಮಾಜದಲ್ಲಿ ವಿಶಿಷ್ಟ ಸ್ಥಳ, ವ್ಯಕ್ತಿ, ವಸ್ತುವಿನ ಬಗ್ಗೆ ನಾವು ಕ್ರಿಯಾಶೀಲ, ಪ್ರಾಮಾಣಿಕ ಬದ್ಧತೆಯಿಂದ ಅಧ್ಯಯನ ನಡೆಸುವುದರ ಮೂಲಕ ಜನಸಾಮಾನ್ಯರಿಗೆ ಸಮಾಜಕ್ಕೆ ಹಾಗೂ ನಾಡಿಗೆ ಪರಿಚಯಿಸುವ ಕೆಲಸ ಮಾಡಬೇಕಾಗುತ್ತದೆ.

ವಸ್ತುಸಂಗ್ರಹಾಲಯದ ಅಧ್ಯಯನದ ಉದ್ದೇಶವೆಂದರೆ ಬಸವ ಕಲ್ಯಾಣದ ಕಲೆ, ಸಂಸ್ಕೃತಿ ಐತಿಹಾಸಿಕ ಹಿನ್ನೆಲೆಯ ವಿವರಗಳ ಅರಿವು ಮೂಡಿಸುವುದು ವಸ್ತು ಸಂಗ್ರಹಾಲಯದಲ್ಲಿನ ಕಲಾಕೃತಿಗಳ ಕುರಿತು ಜನರಿಗೆ ಪರಿಚಯಿಸುವ ಉದ್ದೇಶದಿಂದ ಈ ಅಧ್ಯಯನವನ್ನು ಕೈಗೊಂಡಿದ್ದೇನೆ. ದೃಶ್ಯಕಲಾ ವಿದ್ಯಾರ್ಥಿಯಾಗಿ ಕಲೆಯ ಒಳನೋಟಗಳ ಪ್ರಕಾರಗಳನ್ನು ಸ್ವತಃ ತಿಳಿಯುವುದಲ್ಲದೆ. ಅದರ ವಿಶೇಷತೆಯನ್ನು ಜನಸಾಮಾನ್ಯರಿಗೆ ತಿಳಿಸುವ ಉದ್ದೇಶ ಹೊಂದಲಾಗಿದೆ.

೧. ವಸ್ತುಸಂಗ್ರಹಾಲಯದ ವೈವಿಧ್ಯಮಯವಾದ ಶಿಲ್ಪಕಲಾಕೃತಿಗಳನ್ನು ಅಧ್ಯಯನ ಮಾಡುವ ಉದ್ದೇಶ ಹೊಂದಲಾಗಿದೆ. ಹಾಗೆಯೇ ಚಿತ್ರಕಲಾಕೃತಿ ಮತ್ತು ರೇಖಾಚಿತ್ರಗಳ ಬಗ್ಗೆ ಅಧ್ಯಯನ ಮಾಡುವ ಉದ್ದೇಶವಿದೆ.

೨. ಶಿಲ್ಪ ಚಿತ್ರಕಲಾಕೃತಿಗಳ ಕಲಾವಿದರು, ಕಲಾಕೃತಿಗಳ ಮಾಧ್ಯಮ, ಕಾಲ, ಅರಸರ ರಾಜಾಶ್ರಯ ಇತ್ಯಾದಿ. ಅಂಶಗಳನ್ನು ಕುರಿತು ಗಮನಹರಿಸುವ ಉದ್ದೇಶ.

೩. ಶಿಲ್ಪಚಿತ್ರಕಲಾಕೃತಿಗಳ ಶೈಲಿ, ರಚನೆ, ತಾಂತ್ರಿಕ ಹಿನ್ನೆಲೆಗಳನ್ನು ಅದು ಸಂಗ್ರಹಗೊಂಡ ಪ್ರದೇಶ ಇತ್ಯಾದಿ ಅಧ್ಯಯನ ಮಾಡುವ ಉದ್ದೇಶ ಹೊಂದಲಾಗಿದೆ.

೪. ಈ ವಸ್ತು ಸಂಗ್ರಹಾಲಯದ ಕಲಾಕೃತಿಗಳ ದಾಖಲೀಕರಣ ಮಾಡಿ ಮುಂದಿನ ಪರಂಪರೆಗೆ ಪರಿಚಯಿಸುವ ಉದ್ದೇಶ ಹೊಂದಲಾಗಿದೆ.

೫. ಅಜ್ಞಾತವಾಗಿ ಸಂಗ್ರಹಗೊಂಡ ಶಿಲ್ಪ, ಚಿತ್ರಕಲಾಕೃತಿಗಳನ್ನು ವ್ಯವಸ್ಥಿತವಾಗಿ ಅಧ್ಯಯನಕ್ಕೆ ಬಳಸುವ ಉದ್ದೇಶ ಹೊಂದಲಾಗಿದೆ.

೬. ಶಿಲ್ಪ, ಚಿತ್ರಕಲಾಕೃತಿಗಳು ಮುಂದಿನ ತಲೆಮಾರಿಗೆ ಸಮಕಾಲಿನ ಸಂದರ್ಭದ ಕಲಾಸಕ್ತರಿಗೆ ಅವುಗಳ ಮಹತ್ವವನ್ನು ತಿಳಿಸಿಕೊಡುವ ಉದ್ದೇಶ ಹೊಂದಲಾಗಿದೆ.

೭. ಬಸವ ಕಲ್ಯಾಣದ ಐತಿಹಾಸಿಕ, ಸಾಂಸ್ಕೃತಿಕ, ಪರಿಸರದ ಹಿನ್ನೆಲೆ, ಅಲ್ಲಿ ಸ್ಥಾಪನೆಗೊಂಡ ವಸ್ತು ಸಂಗ್ರಹಾಲಯದ ನೆಲೆ ಹಿನ್ನೆಲೆ ಇತ್ಯಾದಿ ಅಂಶಗಳನ್ನು ಅಧ್ಯಯನಕ್ಕೆ ಪೂರಕವಾಗಿ ಅಧ್ಯಯನ ಮಾಡುವುದು ಪ್ರಸ್ತುತ ಅಧ್ಯಯನದ ಉದ್ದೇಶಗಳಾಗಿದೆ.

ಅಧ್ಯಯನದ ಸ್ವರೂಪ

ಅಧ್ಯಯನದ ಅನುಕೂಲತೆಗಾಗಿ ಇಲ್ಲಿ ಏಳು ಅಧ್ಯಯನಗಳನ್ನಾಗಿ ವಿಂಗಡಣೆ ಮಾಡಿಕೊಂಡು ಪ್ರಸ್ತುತ ಪ್ರಬಂಧವನ್ನು ರೂಪಿಸಲಾಗಿದೆ.

ಅಧ್ಯಾಯ ಒಂದು

ಈ ಅಧ್ಯಯನದಲ್ಲಿ ಪ್ರಸ್ತುತಗೊಂಡ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವಿಧಾನದ ಬಗ್ಗೆ ಚರ್ಚಿಸಲಾಗಿದೆ. ಪ್ರಸ್ತುತ ಅಧ್ಯಯನ ಕೈಗೊಳ್ಳದವರ ಸ್ಪಷ್ಟ ಉದ್ದೇಶಗಳನ್ನು ಹಾಗೆ ಈಗಾಗಲೆ ಈ ವಿಷಯದ ಕುರಿತು ನಡೆದ ಅಧ್ಯಯನವನ್ನು ಗಮನಿಸಲಾಗಿದೆ.

ಅಧ್ಯಾಯ ಎರಡು

ಈ ಅಧ್ಯಯನದಲ್ಲಿ ಬಸವಕಲ್ಯಾಣದ ಐತಿಹಾಸಿಕ, ಚಾರಿತ್ರಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯನ್ನು ಕುರಿತು ಸ್ಥೂಲವಾಗಿ ಚರ್ಚಿಸಲಾಗಿದೆ. ಇದು ಅಧ್ಯಯನಕ್ಕೆ ಪೂರಕವಾದ ಗಟ್ಟಿ ನೆಲೆಯನ್ನು ಇಲ್ಲಿ ಒದಗಿಸಿದೆ.

ಅಧ್ಯಾಯ ಮೂರು

ಈ ಅಧ್ಯಯನದಲ್ಲಿ ಬಸವಕಲ್ಯಾಣದ ವಸ್ತುಸಂಗ್ರಹಾಲಯದ ಸ್ಥಾಪನೆ, ಮತ್ತು ವಸ್ತುಸಂಗ್ರಹಾಲಯ ಆಡಳಿತ ಮುಂತಾದ ಅದರ ನೆಲೆ ಹಿನ್ನೆಲೆಯನ್ನು ಇಲ್ಲಿ ಅಧ್ಯಯನಕ್ಕೆ ಬಳಸಲಾಗಿದೆ.

ಅಧ್ಯಾಯ ನಾಲ್ಕು

ಈ ಅಧ್ಯಯನದಲ್ಲಿ ಬಸವಕಲ್ಯಾಣದ ವಸ್ತುಸಂಗ್ರಹಾಲಯದಲ್ಲಿ ಸಂಗ್ರಹ-ಗೊಂಡಂತಹ ವರ್ಣಚಿತ್ರಗಳು, ರೇಖಾಚಿತ್ರಗಳ ವಸ್ತು ವಿಷಯ, ಕಲಾವಿದರು ಇತ್ಯಾದಿ ವಿಷಯಗಳ ಬಗ್ಗೆ ವಿವರಿಸಲಾಗಿದೆ.

ಅಧ್ಯಾಯ ಐದು

ಈ ಅಧ್ಯಯನದಲ್ಲಿ ಬಸವಕಲ್ಯಾಣದ ವಸ್ತು ಸಂಗ್ರಹಾಲಯದ ಶಿಲ್ಪಕಲಾಕೃತಿಗಳು ಅವುಗಳ ರಚನಾಕಾಲ, ವಿವಿಧ ಮಾಧ್ಯಮದ ಕಲಾಕೃತಿಗಳ ಸ್ವರೂಪ, ಶಿಲ್ಪಗಳ ವರ್ಗೀಕರಣದ

ವಿವೇಚನೆಯನ್ನು ವ್ಯವಸ್ಥಿತವಾಗಿ ಮಾಡಲಾಗಿದೆ.

ಅಧ್ಯಾಯ ಆರು

ಈ ಅಧ್ಯಯನದಲ್ಲಿ ಬಸವಕಲ್ಯಾಣದ ಪ್ರಾಚ್ಯವಸ್ತು ಸಂಗ್ರಹಾಲಯದ ಆಡಳಿತ ವ್ಯವಸ್ಥೆ ಶಿಲ್ಪ ಚಿತ್ರಗಳ ಸ್ಥಿತಿಗತಿಗಳ ಬಗ್ಗೆ ತಿಳಿಸಲಾಗಿದೆ.

ಅಧ್ಯಾಯ ಏಳು

ಇದು ಸಮಾರೋಪ ಅಧ್ಯಾಯವಾಗಿದ್ದು ಪ್ರಸ್ತುತ ಎಲ್ಲಾ ಅಧ್ಯಾಯಗಳಲ್ಲಿ ಕಂಡು ಬರುವ ಫಲಿತಗಳ ಸಮೀಕ್ಷೆಯನ್ನು ಇದು ಒಳಗೊಂಡಿದೆ.

ಅಧ್ಯಯನದ ವ್ಯಾಪ್ತಿ

ಪ್ರಸ್ತುತ ಅಧ್ಯಯನವು ಬಸವಕಲ್ಯಾಣದ ವಸ್ತುಸಂಗ್ರಹಾಲಯದ ಕುರಿತಾಗಿ ಇರುವುದರಿಂದ ಇಲ್ಲಿ ಆ ವಸ್ತು ಸಂಗ್ರಹಾಲಯವನ್ನು ಮುಖ್ಯವಾಗಿಟ್ಟುಕೊಂಡು ಅಲ್ಲಿ ಸಂಗ್ರಹಗೊಂಡಿರುವ ಕಲಾತ್ಮಕ ಹಾಗೂ ಚಾರಿತ್ರಿಕ ಮಹತ್ವದ ವಸ್ತುಗಳ ನೆಲೆಗಳನ್ನು ಹಾಗೂ ಈಗಿನ ಕಾಲದಲ್ಲಿ ರಚನೆಯಾದ ಹಲವಾರು ಕಲಾಕೃತಿಗಳ ಈ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಿಕೊಂಡು ಅಧ್ಯಯನ ಮಾಡಲಾಗಿದೆ. ಬಸವಕಲ್ಯಾಣದ ಪ್ರಾಚ್ಯವಸ್ತು ಸಂಗ್ರಹಾಲಯದ ಅಧ್ಯಯನಕ್ಕೆ ಪೂರಕವಾಗಿ ಕರ್ನಾಟಕದಲ್ಲಿರುವ ಬೇರೆ ವಸ್ತು ಸಂಗ್ರಹಾಲಯದ ಕಲಾಕೃತಿಗಳನ್ನು ಬಳಸಲಾಗಿದೆ. ಇನ್ನೊಂದು ದೃಶ್ಯಕಲೆಯ ಅಧ್ಯಯನವಾಗಿದ್ದು ಆ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನ ಇದರ ವ್ಯಾಪ್ತಿಯು ದೃಶ್ಯಕಲಾ ಕ್ಷೇತ್ರದ ಹಿನ್ನೆಲೆಯಲ್ಲಿ ಅಧ್ಯಯನ ಮಾಡಲಾಗುವುದು.

ಅಧ್ಯಯನದ ವೈಚಾರಿಕತೆ

ಈ ಅಧ್ಯಯನದಲ್ಲಿ ಸಂಶೋಧನಾ ವಿಧಾನದಲ್ಲಿ ಎರಡು ಪ್ರಕಾರದಲ್ಲಿ ಕೈಗೊಳ್ಳಲಾಗಿದೆ.

೧. ಮೂಲ ಆಕರ ಸಾಮಗ್ರಿಗಳು

೨. ಆನುಷಂಗಿಕ ಆಕರ ಸಾಮಗ್ರಿಗಳು

೧. ಮೂಲ ಆಕರ ಸಾಮಗ್ರಿಗಳು

ಸಂಶೋಧನೆಯ ಮೂಲ ಆಕರ ಸಾಮಗ್ರಿಗಳಲ್ಲಿ ಮುಖ್ಯವಾದದ್ದು ಕ್ಷೇತ್ರಕಾರ್ಯ ಬಸವಕಲ್ಯಾಣದ ವಸ್ತುಸಂಗ್ರಹಾಲಯಕ್ಕೆ ಹೋಗಿ ಅಲ್ಲಿನ ಶಿಲ್ಪ, ವರ್ಣಚಿತ್ರ ಮತ್ತು ಸಂಕೀರ್ಣ ಕಲಾವಸ್ತುಗಳನ್ನು ವೀಕ್ಷಿಸಿ ವಸ್ತುಸಂಗ್ರಹಾಲಯದ ಬಗ್ಗೆ ಸಂಪೂರ್ಣವಾದ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ಛಾಯಾ ಚಿತ್ರ : ಬಸವಕಲ್ಯಾಣದ ವಸ್ತುಸಂಗ್ರಹಾಲಯಕ್ಕೆ ಹೋಗಿ ಅಲ್ಲಿರುವ ಕಲಾಕೃತಿಗಳ ಛಾಯಾಚಿತ್ರಗಳನ್ನು ಮಾಡಿಕೊಂಡು ಅದರಲ್ಲಿರುವ ೧೨, ೧೩ನೇ ಶತಮಾನದ ಅನೇಕ ಶಿಲ್ಪಕಲಾಕೃತಿಗಳು ಹಾಗೂ ಚಿತ್ರಕಲಾಕೃತಿಗಳ ಮತ್ತು ವಸ್ತು ಸಂಕೀರ್ಣ ಇತ್ಯಾದಿಗಳ ಛಾಯಾಚಿತ್ರಗಳನ್ನು ಮಾಡಿಕೊಂಡು ಅಧ್ಯಯನ ನಡೆಸಲಾಗಿದೆ.

೨. ಅನುಷಂಗಿಕ ಆಕರಗಳ ಸಾಮಗ್ರಿಗಳು

ಬಸವಕಲ್ಯಾಣದ ಹಲವಾರು ವ್ಯಕ್ತಿಗಳನ್ನು ಸಂದರ್ಶಿಸಿದಾಗ ಅವರು ನೀಡಿದ ವಿಷಯವನ್ನು ಸಂಗ್ರಹಿಸಿಕೊಳ್ಳಲಾಗಿದೆ. ಅನೇಕ ಅಭಿಪ್ರಾಯಗಳನ್ನು ಸಂಗ್ರಹಿಸಿ ಹಲವು ಕಡೆಗೆ ಹೋಗಿ ಮಾಹಿತಿಯನ್ನು ಸಂಗ್ರಹ ಮಾಡಿಕೊಂಡು ಪ್ರಸ್ತುತ ಅಧ್ಯಯನ ನಡೆಸಲಾಗಿದೆ.

ಅಧ್ಯಾಯ - ಎರಡು

ಬಸವಕಲ್ಯಾಣದ ಐತಿಹಾಸಿಕ ಧಾರ್ಮಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ

ಅಧ್ಯಾಯ - ಎರಡು

ಬಸವಕಲ್ಯಾಣದ ಸಾಂಸ್ಕೃತಿಕ ಪರಂಪರೆ



ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಕಲಚೂರಿಯ ೩ನೇ ಬಿಜ್ಜಳನ ಕಾಲ ೧೧೦೦-೬೭. ಬಸವಣ್ಣನವರ ನೇತೃತ್ವದಲ್ಲಿ ವೈಧಿಕ ಧರ್ಮದ ಪ್ರಮುಖ ಆಚರಣೆಯಾದ ವರ್ಣಾಶ್ರಮ ಧರ್ಮ(ಬ್ರಾಹ್ಮಣ, ವೈಶ್ಯ, ಕ್ಷತ್ರಿಯ, ಶೂದ್ರ)ವನ್ನು ತಿರಸ್ಕರಿಸಿ, ಬ್ರಾಹ್ಮಣ

ಶ್ರೇಷ್ಠನಲ್ಲ, ಶೂದ್ರ ಕಡೆಯಲ್ಲ. ಸತ್ಯ, ಶುದ್ಧ ಕಾಯಕ ಎಲ್ಲಕ್ಕಿಂತ ಮುಖ್ಯವಾದದ್ದು ಎಂದು ಸ್ವತಃ ಅವರೇ ಬ್ರಾಹ್ಮಣ ಕುಲದಿಂದ ಹುಟ್ಟಿದ್ದರೂ ಅದನ್ನು ತಿರಸ್ಕರಿಸಿ, ಸ್ವತಂತ್ರ ಧರ್ಮವಾದ ಲಿಂಗವನ್ನು ಪೂಜಿಸುವ ಆಚರಣೆ ತರುತ್ತಾರೆ.

ಶೈವರು ದೇವರನ್ನು ಪೂಜಿಸುವ ಹಕ್ಕನ್ನು ಯಾರಿಗೂ ನೀಡುವುದಿಲ್ಲ (ಸ್ವಜಾತಿಯನ್ನು ಬಿಟ್ಟು). ಅನ್ಯರು, ಪುರೋಹಿತ/ಅರ್ಚಕನ ಮೂಲಕವೇ ಪೂಜಿಸಿಕೊಳ್ಳಬೇಕು. ಸ್ತ್ರೀಗೆ ಪೂಜಾದಿಗಳಲ್ಲಿ ಅವಕಾಶವಿಲ್ಲ. ಯಜ್ಞ, ಯಾಗಗಳ ಮೂಲಕ ದೇವರನ್ನು ಒಲಿಸಿಕೊಳ್ಳುವ ಗುಣ ಅವರದು. ಇದನ್ನೇ ವೀರಭದ್ರನನ್ನು ಆರಾಧಿಸುವ ವೀರಶೈವರು ಸಹ ಆಚರಿಸುತ್ತಾರೆ. ವೀರಶೈವರೆನ್ನುವವರಿಗೆ, ಸ್ವತಂತ್ರ ವಿಚಾರಗಳಿಲ್ಲ. ಶೈವರ ಆಚರಣೆಗಳೇ ಇವರಿಗೆ ಪ್ರಮುಖ. ಆದ್ದರಿಂದ ವೀರಶೈವ ಎಂಬುದು ಬಸವಣ್ಣನವರ ಕಾಲದಿಂದ ನಶಿಸಿ ಹೋಯಿತು.

"ತಾನುಂಬ ಊಟವನು ತಾಪಡಬೇಕಾದ ರತಿಸುಖ

ತಾ ಮಾಡಬೇಕಲ್ಲದೇ ಅನ್ಯರಕೈಲಿ ಮಾಡಿಸಲುಂಟೆ" – ಎಂದು ಪ್ರಶ್ನಿಸುವ ಮೂಲಕ.... ಪೂಜಾರಿ ಎಂಬ ಮದ್ಯವರ್ತಿ, ಸಂಸ್ಕೃತ ಬಲ್ಲವನು ಶ್ರೇಷ್ಠ ಎಂಬ ಶೈವ ಸಿದ್ಧಾಂತದ ಮತ್ತೊಂದು ಕವಲಾದ ವೀರಶೈವವನ್ನು ಪ್ರಶ್ನಿಸಿ, ಒಂದು ಹೊಸ ಮನ್ವಂತರಕ್ಕೆ ಕಾರಣರಾಗುತ್ತಾರೆ.

ಬಸವಣ್ಣನವರ ಮತ್ತು ಹಿರಿಯ, ಕಿರಿಯ ಸಮಕಾಲೀನರ ವಚನಗಳಲ್ಲಿ ಎಲ್ಲಿಯೂ ವೀರಶೈವ ಪದ ಬರುವುದೇ ಇಲ್ಲ. ಆದರೆ ೧೫ನೇ ಶತಮಾನದಿಂದ ಈಚೆಗೆ ಬಂದ ವೀರಶೈವ ಪ್ರತಿಪಾದಿಸುವವರು, ವಚನಗಳನ್ನು ಸಂಶೋಧಿಸಿ, ಸಂಸ್ಕಾರಿಸುವ ಸಂದರ್ಭದಲ್ಲಿ ಬಲವಂತವಾಗಿ ತುರುಕಿದ್ದಾರೆಂಬುದಕ್ಕೆ ಇತ್ತೀಚಿನ ಸಂಶೋಧಕರು ಆಧಾರ ಸಹಿತ ವಿವರಿಸುವ ಗ್ರಂಥಗಳನ್ನು ನೋಡಬಹುದು.


ವೀರಶೈವ ಪ್ರತಿಪಾದಕರು ಸ್ಥಾವರ ಲಿಂಗ ಪೂಜಕರು. ಗುಡಿ–ಗೋಪುರಗಳನ್ನು ಕಟ್ಟುವವರು, ೩೩ ಕೋಟಿ ದೇವತೆಗಳನ್ನು ಆರಾಧಿಸುವ ಶೈವ ಸಂಪ್ರದಾಯಕ್ಕೆ ಒಲಿದವರು,

ಆಚರಿಸುವವರು. ಆದ್ದರಿಂದ ವಚನ ಕ್ರಾಂತಿಗೆ ಕಾರಣವಾದ, ಸರ್ವ ಸಮಾನತೆಗೆ, ಕಾಯಕಕ್ಕೆ, ದಾಸೋಹಕ್ಕೆ ಕಾರಣೀಭೂತವಾದ ನೆಲ ಬಸವಕಲ್ಯಾಣ. ಆದ್ದರಿಂದ ಬಸವಕಲ್ಯಾಣದ ವಿಚಾರದಲ್ಲಿ ಬಸವಣ್ಣನವರ ತತ್ವ ಸಿದ್ಧಾಂತಗಳನ್ನು ಸಂಕ್ಷಿಪ್ತವಾಗಿಯಾದರೂ ಹೇಳಿದರೇ ಬಸವಕಲ್ಯಾಣದ ಶೋಧನೆಗೆ ಬೆಲೆ ಬರುತ್ತದೆ.


ಐತಿಹಾಸಿಕ ಹಿನ್ನೆಲೆಯಿಂದ ನೋಡುವುದಾದರೆ. ರಾಷ್ಟ್ರಕೂಟರ ನಂತರ ಕಲ್ಯಾಣ ಚಾಳುಕ್ಯ ಮತ್ತು ಕಲಚೂರ್ಯರ ಆಡಳಿತದಲ್ಲಿ ಇರುತ್ತದೆ. ಮುಂದೆ ಕ್ರಿ.ಶ. ೧೯ ಮತ್ತು ೨೦ನೇ ಶತಮಾನಗಳಲ್ಲಿ ಹೈದರಾಬಾದಿನ ನಿಜಾಮನ ಆಡಳಿತದಲ್ಲಿ ಸೇರಲ್ಪಡುತ್ತದೆ. ಈ ಪ್ರದೇಶವನ್ನು ಕಲ್ಯಾಣವೆಂದು ಕರೆಯಲಾಗಿದೆ. ಕಲ್ಯಾಣ ಎನ್ನುವ ಪದ ಪ್ರಾಚೀನ ಹಾಗೂ ಸಾಂಸ್ಕೃತಿಕ ಹಿನ್ನೆಲೆಯನ್ನು ಹೊಂದಿದೆ. ಸಾಮಾಜಿಕ ಹಾಗೂ ಧಾರ್ಮಿಕವಾಗಿ ಹೊಸ ಮನ್ವಂತರಕ್ಕೆ ನಾಂದಿಯಾಗಿದೆ.

ಕನ್ನಡ ಸಾಹಿತ್ಯಕ್ಕೆ ಹೊಸ ತಿರುವುಕೊಟ್ಟ ವಚನ ಸಾಹಿತ್ಯದ ಕೇಂದ್ರವೂ ಹೌದು, ಹಾಗೂ ಕರ್ನಾಟಕದ ಚರಿತ್ರೆಯ ದಾಖಲೆಯಲ್ಲಿ ಅಂದಿನ ಸಮಕಾಲೀನ ಸಮಾಜದ ಸಾಮರಸ್ಯದ ಸಂಚಲನವನ್ನು ಆರಂಭಿಸಿದ್ದು ಈ ಪ್ರದೇಶದಿಂದಲೇ. ಹೈದರಾಬಾದ್ ನಿಜಾಮನ ಆಳ್ವಿಕೆಯಲ್ಲಿ ಕೊಟ್ಟ ಹೆಸರು, ಹಿಂದೆ ಇದು ಈ ಸ್ಥಳಕ್ಕೆ ಭಾಗ್ಯನಗರ ಎಂದು ಕರೆಯುತ್ತಿದ್ದರು. ಅಲ್ಲದೇ ೨೦ನೇ ಶತಮಾನದಲ್ಲಿ ಕಲ್ಯಾಣವು ರಜಾಕಾರರ ದಾಳಿಯಿಂದ ತತ್ತರಿಸಿ ಹೋದುದಕ್ಕೆ ಇಂದಿಗೂ ಇದರ ನೆನಪಾಗಿ ಹೈದರಾಬಾದ ವಿಮೋಚನಾ ದಿನಾಚರಣೆಯನ್ನು ಆಚರಿಸುತ್ತಿರುವುದು ಕಂಡು ಬರುತ್ತದೆ.

ಬ್ರಿಟಿಷ್ ಆಳ್ವಿಕೆಯಲ್ಲಿ ಕರ್ನಾಟಕವನ್ನು ನಾಲ್ಕು ಭಾಗಗಳಾಗಿ ಮಾಡಿಕೊಂಡಿದ್ದರು, ಮುಂಬೈ, ಕರ್ನಾಟಕ, ಮದ್ರಾಸ್ ಕರ್ನಾಟಕ, ಮೈಸೂರು ಕರ್ನಾಟಕ, ಹೈದರಾಬಾದ ಕರ್ನಾಟಕ ಸ್ವಾತಂತ್ರ್ಯದ ನಂತರ ಅಂದರೆ ಇತ್ತೀಚಿನವರೆಗೆ ನಾವು ಕರಾವಳಿ ಕರ್ನಾಟಕ ಮೈಸೂರ ಕರ್ನಾಟಕ, ಮಧ್ಯಕರ್ನಾಟಕ, ಉತ್ತರ ಕರ್ನಾಟಕ ಮಲೆನಾಡು ಕರ್ನಾಟಕ, ಇತ್ಯಾದಿ ಹೆಸರುಗಳಿಂದ ಕರೆದುಕೊಳ್ಳುತ್ತಿದ್ದೇವೆ.



ಕಲ್ಯಾಣ ಚಾಲುಕ್ಯರು ಕರ್ನಾಟಕದ ಪ್ರದೇಶದಲ್ಲಿ ಕ್ರಿ.ಶ. ೧೦೪೯ರಿಂದ ೧೨೫೦ರವರೆಗೆ ಆಡಳಿತ ನಡೆಸಿದರು. ಆಳ್ವಿಕೆಮಾಡಿದ ೫ ಜನ ರಂಜೋಳ ಸಿಂಧರಲ್ಲಿ ಪ್ರಮುಖ ಅರಸ ಬಿಜ್ಜಳ, ಈ ಅರಸರನ್ನು ಒಳಗೊಂಡಂತೆ ಇವರು ದೇವಾಲಯಗಳಿಗೆ, ಮಠ ಮಾನ್ಯಗಳಿಗೆ ನೀಡಿದ ದಾನ ದತ್ತೆಗಳ ವಿವರಣೆಗಳನ್ನು ಈ ಪ್ರಬಂಧ ಒಳಗೊಂಡಿದೆ. ಇವರು ಶೈವಧರ್ಮ ಪಕ್ಷಪಾತಿಗಳಾಗಿದ್ದರೂ ಮೂಲತಃ ಜೈನ ಮತಾವಲಂಬಿಗಳಾಗಿದ್ದಿರ-ಬಹುದಾಗಿದೆ.



ಪ್ರಮುಖ ರಾಜಮನೆತನಗಳಾದ ಪಲ್ಲವ, ರಾಷ್ಟ್ರಕೂಟ, ಗಂಗ ಹಾಗೂ ಚಾಳುಕ್ಯರ ಕಾಲದಲ್ಲಿ ನೊಳಂಬರು ಇವರ ಅಧೀನ ರಾಜರಾಗಿ ಹೀಗೆ ಆಡಳಿತ ಮಾಡಿದರು, ಇವರು ಬಳ್ಳಾರಿ, ತುಮಕೂರು, ಚಿತ್ರದುರ್ಗ, ಕೋಲಾರ, ಬೆಂಗಳೂರು, ತಮಿಳುನಾಡಿನ ಕೆಲವು ಭಾಗಗಳು ಸೇರಿದಂತೆ ನೊಳಂಬವಾಡಿ ೩೨೦೦೦ ಅಧಿಪತಿಗಳಾಗಿದ್ದರು. ವಿಜಯನಗರ ಪತನದ ನಂತರ ಕರ್ನಾಟಕದಲ್ಲಿ ಸೇರಿದಂತೆ ದಕ್ಷಿಣ ಭಾರತದಲ್ಲಿ ಅನೇಕ ಪಾಳೆ, ಪಟ್ಟುಗಳು ಉದಯವಾದವು. ಅದರಲ್ಲಿ ಗೆಜ್ಜಲಗಟ್ಟಿ ದೇಸಾಯ ಮನೆತನವು ಒಂದು.

ಗೆಜ್ಜಲಗಟ್ಟಿ ದೇಸಾಯಿಗಳು ಮೂಲತಃ ಈಗಿನ ಆಂಧ್ರಪ್ರದೇಶದಲ್ಲಿರುವ ಅದವಾನಿಯವರು ರೆಡ್ಡಿ ಲಿಂಗಾಯತ ಬಣಕ್ಕೆ ಸೇರಿದವರು ಈ ದೇಸಾಯಿಗಳು ಮೊಗಲ್, ಔರಂಗಜೇಬರು, ಬ್ರಿಟಿಷರ ಪ್ರೀತಿಗೆ ಪಾತ್ರರಾಗಿ ರಾಜ್ಯಭಾರ ಮಾಡಿದರು. ಸುಮಾರು ೧೨೦೦೦ಕ್ಕೂ ಹೆಚ್ಚು ಎಕರೆ ಭೂಮಿ ಒಡೆತನ ಇವರದಾಗಿತ್ತು. ಇವರ ಆಡಳಿತ ವ್ಯಾಪ್ತಿಗೆ ಹಳ್ಳಿಗಳು ಇದ್ದವು, ಇದರಲ್ಲಿ ೧೦ ಹಳ್ಳಿಗಳು ಜಿಲ್ ಮುಕ್ತಾಯಿ ಗ್ರಾಮಗಳಾಗಿದ್ದವು. ಸಂಗಾರೆಡ್ಡಿ ಈ ಮನೆತನದ ಮೂಲಪುರುಷ, ಮುಂದೇ ರಾಜಾ ಸೋಮಸರ್ಜ ನಾಯಕ, ವೆಂಕಟರಾಯ, ನಾಡಗೌಡರು, ಮಾನಪ್ಪಗೌಡರು, ರಾಣಿ ಲಕ್ಷ್ಮೀದೇವಿ ಆಳ್ವಿಕೆ ನೆಡೆಸಿದರು.

ರಾಣಿಲಕ್ಷ್ಮೀದೇವಿಯ ದೈವೀಭಕ್ತಿಯಿಂದಾಗಿ ಗೆಜ್ಜಲಗಟ್ಟಿ, ಮರಿ ಕಲ್ಯಾಣವಾಯಿತೆಂಬ ಅಭಿಪ್ರಾಯ ವಿದ್ವಾಂಸರುಗಳದ್ದು, ಕನ್ನಡ ಮತ್ತು ಸಂಸ್ಕೃತದ ಬೆಳವಣಿಗೆಗೆ ಪಾಠಶಾಲೆಗಳನ್ನು ಆರಂಭಿಸಿದಳು. ಒಟ್ಟು ಈ ಪ್ರಬಂಧದಲ್ಲಿ ರಾಣಿಲಕ್ಷ್ಮೀದೇವಿಯ ಜೀವನ, ಸಾಧನೆಗಳನ್ನು ಕೇಂದ್ರಿಕರಿಸಿಕೊಳ್ಳಲಾಗಿದೆ. ಏನೇ ಆದರೂ ಒಬ್ಬ ಸ್ತ್ರೀಯಾಗಿ ರಾಣಿಲಕ್ಷ್ಮಿದೇವಿಯು ವಹಿಸಿದ ವಿಭಿನ್ನ ಪಾತ್ರವನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಲಾಗಿದೆ. ಕಲ್ಯಾಣ ಕರ್ನಾಟಕದ ಸಾಮಂತರಲ್ಲಿ ತನ್ನದೇ ಆದ ಸ್ಥಾನವನ್ನು ಹೊಂದಿದ್ದರೂ ಇತಿಹಾಸ ಪುಟಗಳಲ್ಲಿ ಅಷ್ಟಾಗಿ ಕಾಣಿಸಿಕೊಳ್ಳದ ಮನೆತನ ಇದಾಗಿದೆ. ಈಗಿನ ಬೀದರ್ ಜಿಲ್ಲೆಯ ಅಟ್ಟಳೆ ನಾಡಿನಲ್ಲಿ ಸಿಂಧ ಎಂಬುದಾಗಿ ಸ್ಥಳೀಯ ಅರಸರ ಚರಿತ್ರೆಯಲ್ಲಿ ಗಮನಿಸಬಹುದಾಗಿದೆ.

ದಿವಂಗತ ಬಾ.ರಾ., ಗೋಪಾಲ ಅವರು ಈ ಸಾಮಂತ ಅರಸರನ್ನು ಕುರಿತು ಮೊಟ್ಟಮೊದಲಿಗೆ ರಂಜೋಳದಲ್ಲಿ ದೊರೆತ ಶಾಸನವನ್ನಾಧರಿಸಿ **'ಮಾನವಿಕ ಕರ್ನಾಟಕ'** ನಿಯತ ಕಾಲಿಕೆಯಲ್ಲಿ ಸಂಕ್ಷಿಪ್ತ ಪರಿಚಯಾತ್ಮಕ ಲೇಖನವನ್ನು ಬರೆದಿದ್ದಾರೆ. 'ಸಂಸ್ಕೃತಿ' ಎಂಬುದು ಜೀವನ ವಿಧಾನವಾಗಿರುವುದರಿಂದ ಇದು ಇಲ್ಲಿಯವರ ಮೂಲಭೂತ ಅವಶ್ಯಕತೆಯನ್ನು ಪ್ರೈಸುವುದರೊಂದಿಗೆ ಜೀವನವನ್ನು ಅತ್ಯಂತ ಮಾನವೀಯ ಕೇಂದ್ರ ನೆಲೆಯಿಂದ ನಿರ್ದೇಶಿಸುತ್ತದೆ.

ಈ ನೆಲೆಯಲ್ಲಿ ಗುರುತಿಸಬಹುದಾದ, ಈ ಧರ್ಮಕ್ಕೆ ಹಿಂದೂ ಮುಸ್ಲಿಂ, ಕ್ರೈಸ್ತ, ಸಿಖ್, ಬೌದ್ಧ, ಜೈನ, ವೀರಶೈವ ಎಂಬ ಯಾವ ಹೆಸರೂ ಕಾಣುವುದಿಲ್ಲ ಅದೊಂದು ಮಾನವತೆಯ ಪರಮತತ್ವ ಅದನ್ನೇ ನಾವು ಈ ಜಿಲ್ಲೆಯ ಕಲೆ ಸಾಹಿತ್ಯಗಳಲೆಲ್ಲ ಕಾಣಬಹುದು. ಇದು ಹೊರತುಪಡಿಸಿದ ರಾಜಕೀಯ, ಸಾಮಾಜಿಕ ಸಾಹಿತ್ಯಿಕ, ಶೈಕ್ಷಣಿಕ ಹಾಗೂ ಆರೋಗ್ಯದಾಯಕ ಜೀವನವು ಭಿನ್ನವಾಗುತ್ತಾ ಸಾಗಿವೆ. ಆದರೂ ಇಂದು ಪ್ರತಿವ್ಯಕ್ತಿಯ ವ್ಯಕ್ತಿತ್ವ ಹಾಗೂ ಸಾಮಾಜಿಕ ಜೀವನವೂ ಯಾವುದೇ ಒಂದು ಧರ್ಮದ ಪ್ರಭಾವಲಯದಲ್ಲಿ ಸಾಗಿದೆ. ಇದರಿಂದ ಇಲ್ಲಿಯ ಸಾಂಸ್ಕೃತಿಕ ಪರಂಪರೆ ಹಾಗೂ ಸ್ಥಿತ್ಯಂತರಗಳಿಗೆ ಆಯಾ ಧರ್ಮ, ಪ್ರಸ್ತುತ ರಾಜಕಾರಣ, ಸಾಮಾಜಿಕ ಜೀವನ, ಶಿಕ್ಷಣ ಪದ್ಧತಿ, ಆರ್ಥಿಕ ನೀತಿ ಸಮೂಹ ಮಾಧ್ಯಮಗಳು ಆಧುನಿಕತೆ ಹಾಗೂ ಭೌಗೋಳಿಕ ಪರಿಸರಗಳು ಕಾರಣಗಳಾಗಿರುವುದನ್ನು ಅರಿಯಬಹುದು.

ಸಾಂಸ್ಕೃತಿಕ ಪರಂಪರೆ

ಶತಮಾನಗಳ ಐತಿಹ್ಯ ಹಾಗೂ ಇತಿಹಾಸ ಹೊಂದಿರುವ ಈ ಜಿಲ್ಲೆಯು ಶಿವಭಕ್ತರಿದ್ದ ನಾಡು, ಅಲ್ಲಾನ ನಮಾಜು ಮಾಡುವವರ ಬೀಡು, ಬುದ್ಧ, ಮಹಾವೀರ, ಬಸವ, ಯೇಸು ಕ್ರಿಸ್ತ, ಗುರುನಾನಕ, ಬೊಮ್ಮಗೊಂಡೇಶ್ವರ, ಭಕ್ತಪ್ರಭು, ಮಾಣಿಕಪ್ರಭು, ಕರಿಬಸವೇಶ್ವರ, ಯಂಕಮ್ಮ, ಅಂಬೇಡ್ಕರ ಮೊದಲಾದ ಮಹಾವ್ಯಕ್ತಿಗಳ ತತ್ವ ಸಿದ್ಧಾಂತಗಳನ್ನು ಪಾಲಿಸುತ್ತಿರುವವರ ಪ್ರದೇಶ, ಜ್ಞಾನಜ್ಯೋತಿಗೆ, ಭಕ್ತಿಯ ತೈಲವೆರೆದು ಕಲ್ಯಾಣದ ಪ್ರಣತಿಗೆ

ಕ್ರಿಯೆಯ ಬತ್ತಿಯಾಗಿರುವ, ಭೂಮಿ, ಉಜ್ವಲ ಧಾರ್ಮಿಕ ಪರಂಪರೆ ಹಾಗೂ ಸಮಾನತೆ, ಸಮಾಜ ನಿರ್ಮಾಣಕ್ಕೆ ಅಡಿಪಾಯ ಹಾಕಿರುವ, ಈ ಜಿಲ್ಲೆಯ ಸಾಂಸ್ಕೃತಿಕ ಪರಂಪರೆಯ ಇತಿಹಾಸ ಗಮನಾರ್ಹವಾಗಿದೆ.



ಇತಿಹಾಸಕಾಲದ ಚಿತ್ರ ಸ್ಪಷ್ಟವಾಗಿದ್ದು, ರಾಜ್ಯ ಪುರಾತತ್ವ ಇಲಾಖೆ ಕೈಗೊಂಡಿರುವ ನಿರೀಕ್ಷಣೆಯಿಂದ ಹಳೆ ಹೊಸ ಶಿಲಾಯುಗದ ಅಂಶಗಳು ಅನೇಕ ಸ್ಥಳದಲ್ಲಿ ಕಂಡು ಬಂದಿವೆ. ಕ್ರಿ.ಶ.೩ನೇ ಶತಮಾನದಿಂದ ಈ ಪ್ರದೇಶ ಅನೇಕ ಅರಸು ಮನೆತನಗಳ ಆಳ್ವಿಕೆಗೆ ಅಧೀನವಾಗಿದ್ದು, ಮೌರ್ಯರು, ಶಾತವಾಹನರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ಕಾಕತೀಯರು, ಖಿಲ್ಜಿ, ಬಹುಮನಿ ಅರಸರು, ಮೊಘಲರು, ಹೈದ್ರಾಬಾದ್ ನಿಜಾಮ ಮೊದಲಾದವು ಈ ಭಾಗವನ್ನು ಆಳಿದ ಅರಸರು.

೮ನೇ ಶತಮಾನದ ರಾಷ್ಟ್ರಕೂಟ ದೊರೆಗಳು ಇಲ್ಲಿ ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ, ಕಲೆಗಳ ಬೆಳವಣಿಗೆಗೆ ನಾಂದಿ ಹಾಡಿದರು. ೧೦ನೇ ಶತಮಾನ ಈ ಜಲ್ಲೆಯ ಸಾಂಸ್ಕೃತಿಕ ಪರಂಪರೆಯಲ್ಲಿ ಸುವರ್ಣ ಯುಗವಾಯಿತು. ಈ ಕಾಲದಲ್ಲಿ ಚಾಲುಕ್ಯರ ಆಳ್ವಿಕೆ ಪ್ರಾರಂಭವಾಯಿತು. ಹಾಗೂ ಈ ಜಿಲ್ಲೆಯ ಕಲ್ಯಾಣವು ರಾಜಧಾನಿಯಾಯಿತು. ಬೀದರ್‌ನ ಉಜ್ವಲ ಇತಿಹಾಸಕ್ಕೆ ಅಡಿಗಲ್ಲು ಹಾಕಿದ ಈ ಯುಗದ ಪ್ರಸಿದ್ಧ ದೊರೆ

೬ನೇಯ ವಿಕ್ರಮಾದಿತ್ಯ. ಈತನು ಅಗ್ರಗಣ್ಯ ಅರಸನಷ್ಟೇ ಆಗಿರದೆ, ಯುದ್ಧ ನಿಪುಣ, ಸಾಹಿತ್ಯ, ಕಲೆಗಳ ಅಭಿಮಾನಿ, ಸಾಂಸ್ಕೃತಿಕ ಬದುಕಿಗೆ ಆಶ್ರಯದಾತ. ಕವಿ ಬಿಲ್ಹಣ ಕಾಶ್ಮೀರದಿಂದ ಕಲ್ಯಾಣಕ್ಕೆ ಬಂದು ವಿಕ್ರಮಾಂಕದೇವ ಚರಿತ್ರೆ ರಚಿಸಿದ್ದು, ಪಂಡಿತ್ ವಿಜ್ಞಾನೇಶ್ವರ **'ಮಿತಾಕ್ಷರ,'** ಗ್ರಂಥ ಬರೆದದ್ದು ಈ ದೊರೆಯ ಕಾಲದಲ್ಲಿಯೇ, ಇವೆರಡು ಕೃತಿಗಳು ಭಾರತೀಯ ಇತಿಹಾಸದಲ್ಲಿ ಹಾಗೂ ಶಾಸ್ತ್ರವಾಙ್ಮಯಕ್ಕೆ ಬೀದರ ಜಿಲ್ಲೆ ನೀಡಿದ ಕೊಡುಗೆ ಎನ್ನಬಹುದು.

೬ನೇ ವಿಕ್ರಮಾದಿತ್ಯನ ಕಾಲ ಪ್ರಜೆಗಳ ವೈಭವದ ಕಾಲವೆನಿಸಿತು. ಜನಹಿತ ಕಾರ್ಯಮಾಡುವಲ್ಲಿ ಈ ದೊರೆ ಜನಪ್ರಿಯನಾಗಿದ್ದನೆಂದು ಆ ಕಾಲದ ಹಲವಾರು ಶಾಸನಗಳು ತಿಳಿಸುತ್ತವೆ. ಪ್ರಜೆಗಳ ವಿಷಯದಲ್ಲಿ ಸದಾ ಅನುಕಂಪಿತನಾಗಿದ್ದ ವಿಕ್ರಮಾದಿತ್ಯನು, ಜಲಸಂಗ್ವಿ, ಗೋರಟಾ, ಕಲ್ಯಾಣ, ನಾರಾಯಣಪುರ, ಅಣಂದೂರು ರಂಜೇರಿ, ಹಾಲಕ್ಕಿ ಬಗದಲ್, ಬರೊರ್, ಹಣ್‌ಕುಣೆ ಮುಂತಾದ ಗ್ರಾಮಗಳಲ್ಲಿ ಮಂದಿರಗಳನ್ನು ಮೂರ್ತಿಗಳನ್ನು ನಿರ್ಮಿಸಿದ್ದು, ಕಲೆಯ ಬೆಳವಣಿಗೆ ಸಾಹಿತ್ಯ ಕರ್ತವ್ಯಗಳಿಗೆ ಸಂಗೀತಗಾರರಿಗೆ ಕೊಡುಗೈ ದೊರೆಯಾಗಿದ್ದನೆಂದು ಕ್ರಿ.ಶ.೧೧೦೮೨ರ ಗೋರಟಾ ಶಾಸನ ಒಂದು ತಿಳಿಸುತ್ತದೆ. ಈ ಶಾಸನವು ಆರ್ಥಿಕ ಮತ್ತು ಸಾಂಸ್ಕೃತಿಕ ದೃಷ್ಟಿಯಿಂದ ಸಂಪದ್ಭರಿತವಾಗಿದ್ದ ಚಿತ್ರ ಶಾಸನಗಳಲ್ಲಿದೆ.

ಇಲ್ಲಿ ಶಿಕ್ಷಣ ಹಾಗೂ ವಸತಿ ಸೌಕರ್ಯಗಳನ್ನು ಒದಗಿಸಲು ಹಾಗೂ ಧಾರ್ಮಿಕ ಸಾಮಾಜಿಕ ಸೇವೆಗಾಗಿ ರುದ್ರಮಿಶ್ರನೆಂಬ ವಿದ್ವಾಂಸನಗೆ ಸಾಕಷ್ಟು ಭೂಮಿಯನ್ನು ದಾನ ಕೊಟ್ಟಿದ್ದನು. ಘಟ್ಟಿಬೋರಿವಳ್ಳಿಯಲ್ಲಿ ಯಜ್ಞಯುಗಾದಿಗಳು ನಡೆಸಿದ್ದನ್ನು ಶಾಸನಗಳಲ್ಲಿ ವರ್ಣಿಸಲಾಗಿದೆ. ಕಲಾಪ್ರೇಷಕನಾಗಿದ್ದ ವಿಕ್ರಮಾದಿತ್ಯನ ಪಟ್ಟದ ರಾಣಿ ಚಂದಲಾದೇವಿಯು ಒಬ್ಬ ಪ್ರಸಿದ್ಧ ಕಲಾವಿದೆ **'ಅಭಿನವ ಶಾರದೆ'** ಎನಿಸಿದ್ದಳು. ಸೋಮಯಾಜಿ ಹಾಗೂ ವಿಜ್ಞಾನೇಶ್ವರರು ಈ ಕಾಲದಲ್ಲಿ ಶಿಕ್ಷಣ ತಜ್ಞರಾದ್ದರು. ಹಲವಾರು ದೃಷ್ಠಿಯಿಂದ ವೈಭವದ ಕಾಲವಾಗಿದ್ದು ಕವಿ ಬಿಲ್ಹಣನಿಂದ 'ನಾಸ್ತಿದಸ್ತಿ ಭವಿಷ್ಯತಿ ಕ್ಷಿತಿಕಲೆ ಕಲ್ಯಾಣ ಕಲ್ಪಂ ಪುರಂ' ಎಂದು ಕೀರ್ತಿಸುವಷ್ಟರ ಮಟ್ಟಿಗೆ ಸಾಂಸ್ಕೃತಿಕ ಹಿರಿಮೆಯನ್ನು ಮೆರೆದಿತ್ತು.

೧೨ನೇ ಶತಮಾನದಲ್ಲಿ ಈ ಜಿಲ್ಲೆ ಸಾಂಸ್ಕೃತಿಕ ಇತಿಹಾಸದ ಮಹೋನ್ನತ ಕಾಲ. ಕಲ್ಯಾಣದಲ್ಲಿ ಶರಣರ ಕ್ರಾಂತಿಯಾದ ಕಾಲ. ಬಸವಣ್ಣ, ಅಲ್ಲಮಪ್ರಭು, ಸಿದ್ಧರಾಮ, ಅಕ್ಕಮಹಾದೇವಿ ಮೊದಲಾದ ಅನೇಕ ಶರಣಶರಣೆಯರು, ಸಮ್ಮೇಳನಗೊಂಡು ಸಾಂಸ್ಕೃತಿಕ ಬದುಕನ್ನು ಚರ್ಚಿಸಿ ನವೋದಯವನ್ನು ಕಾಣಿಸಿದ ಕಾಲ. ಕಲ್ಯಾಣವನ್ನು ಭೂಮಿಯ ಮೇಲಿನ ಕೈಲಾಸವನ್ನಾಗಿ ಮೆರೆಸಿದ ಯುಗ. ಕಳಚೂರಿ ರಾಜರ ಆಳ್ವಿಕೆಯ ಈ ಕಾಲದಲ್ಲಿ ಧಾರ್ಮಿಕ ಸಾಹಿತ್ಯಿಕ ಹಾಗೂ ಸಾಮಾಜಿಕ ರಂಗಗಳಲ್ಲಿ ಸಾಂಸ್ಕೃತಿಕ ಬದುಕು ಸ್ಥಿತ್ಯಂತರಗೊಂಡಿತು. ಸಾಂಸ್ಕೃತಿಕ ವೇದಿಕೆ ಶ್ರೀಸಾಮಾನ್ಯನೊಂದಿಗೆ ಸಂವಾದಕ್ಕೆ ಸಹಕರಿಸಿ ಆ ಮೂಲಕ ಆರ್ಥಿಕ ಪ್ರಗತಿಯ ಮಾರ್ಗಕಂಡುಕೊಂಡು ಸಂವೇದನಾತ್ಮಕ, ಸಾಂಸ್ಕೃತಿಕ, ಸಾಮರಸ್ಯದ ಮೂಲಕ ಮಾನವನ ಪ್ರಗತಿಗೆ ನಾಂದಿ ಹಾಡಿತು.

ಶ್ರೀ ಸಾಮಾನ್ಯರ ಅನಕ್ಷರತೆ, ಮೌಢ್ಯ ಧಾರ್ಮಿಕ ವಿಧಿಗಳು, ಅವುಗಳ ವೈಭವಾಚರಣೆಗಳು, ಮಿತಿಮೀರಿದ ಅಸಮಾನತೆ, ಅಪಾಯಕಾರಿ ಹಂತ ತಲುಪಿ, ಅವರ ವ್ಯಕ್ತಿತ್ವದ ಅಡಿಗಲ್ಲನ್ನು ಅಲ್ಲಾಡಿಸಿತು. ಮತಾಚರಣೆಗಳು ಧಾರ್ಮಿಕ ನೇಮಕಗಳು ಬಹಿರಂಗದ ಪ್ರತಿಷ್ಠೆಯ ಪ್ರದರ್ಶನಕ್ಕೆ ಮಾಧ್ಯಮಗಳಾಗಿ ಭ್ರಷ್ಟ ಬದುಕು ತಾಂಡವಾಡುತ್ತಿತ್ತು. ಸದಾ ಇಬ್ಬಂದಿತನವನ್ನೇ ನಿರ್ಮಾಣ ಮಾಡುತ್ತಿದ್ದ ಆ ಯುಗದ ಕಳಪೆ ಸಂಸ್ಕೃತಿಗೆ ವಿರುದ್ಧವಾಗಿ ಕಾಯಕಲ್ಪ ನೀಡಿದ ಶರಣರು, ಧಾರ್ಮಿಕ ವಲಯದಲ್ಲಿ ಮಾನವತೆಯ ಬೀಜಬಿತ್ತಿ ಬೆಳೆಯಲು ಪ್ರಯತ್ನಿಸಿದರು. ಏಕಮುಖಿ ಸಂಸ್ಕೃತಿ ನಿರ್ಮಾಣಕ್ಕೆ ಕಂಕಣ ಬದ್ಧರಾಗಿದ್ದ ಇವರನ್ನು ದ್ವಿಮುಖಿ ಸಂಸ್ಕೃತಿ ಸದಾ ಕಾಡಿತು. ಬಹುದಿನಗಳಿಂದ ಸಂರಕ್ಷಿಸಿಕೊಂಡು ಬಂದಿದ್ದ ಅದರ ಹಿಡಿತ ತಪ್ಪುವದು ಸುಲಭವಾಗಿರಲಿಲ್ಲವಾದರೂ, ಶರಣರ ಕ್ರಾಂತಿ ಸ್ಥಾವರಗೊಂಡಿದೆ. ಸಂಸ್ಕೃತಿಯೊಂದನ್ನು ಜಂಗಮಗೊಳಿಸಿತು.

ಜನಪ್ರಿಯ ಸಂಸ್ಕೃತಿಯನ್ನು ನಿರ್ಮಾಣ ಮಾಡಿತು. ಸಾಂಸ್ಕೃತಿಕ ವಸ್ತುಗಳ ಉತ್ಪಾದನೆಯಲ್ಲಿ ವಿವಿಧ ಕಾಯಕ ಜೀವಿಗಳ ಪಾತ್ರ ಪ್ರಧಾನವಾಯಿತು. ಇದರಿಂದ ಶಿಷ್ಟ ಸಂಸ್ಕೃತಿ ಮತ್ತು ಜಾನಪದ ಸಂಸ್ಕೃತಿಗಳ ಸ್ಥಾನಪಲ್ಲಟವಾಯಿತು. ಶಿಷ್ಟ ಸಂಸ್ಕೃತಿಯು ಇದರಿಂದ ತನ್ನ ಮುಖ ಮೌಲ್ಯವನ್ನು ನಿಸ್ತೇಜಗೊಳಿಸಿಕೊಂಡಿತ್ತು. ಈ ಪೂರ್ವದಲ್ಲಿ ಶಿಷ್ಟ

ಸಂಸ್ಕೃತಿ ಶ್ರೀಮಂತರ ಮತ್ತು ಪ್ರತಿಷ್ಠಿತ ವರ್ಗದವರಿಗೆ ಮೀಸಲಾಗಿತ್ತು. ಭಾವನಾತ್ಮಕ ಸ್ಫೂರ್ತಿಯಲ್ಲಿ ನೆಲೆಯಾಗಿದ್ದ ಇದರೊಂದಿಗೆ ಬಹು ಸಮಾಜ ಹಾಗೂ ಸಂಸ್ಕೃತಿಯನ್ನು ಒಪ್ಪಿಕೊಂಡ ಶರಣರು ಸಂಘರ್ಷಕ್ಕಿಳಿದರು. ವೈಚಾರಿಕ ನೆಲೆಯುಳ್ಳ ಶರಣ ಸಂಸ್ಕೃತಿಯನ್ನು ಕಟ್ಟಿಕೊಟ್ಟಿದ್ದು ಬೀದರ ಜಿಲ್ಲೆಯ ಮಹಾನ್ ಕಾಣಿಕೆ ಎನ್ನಬಹುದು.

ಬಸವಾದಿ ಶರಣರ ಕ್ರಾಂತಿಯ ಫಲದಿಂದ ಅನುಭವ ಮಂಟಪದ ಮೂಲಕ ನವೀನ ಸೃಷ್ಟಿಯೊಂದಾಯಿತು. ಅದೇ ವಚನ ಸಾಹಿತ್ಯ. ಈ ಮೂಲಕ ಮಾನವ ಧರ್ಮದ ಮೂಲ ಬದುಕಿನ ಮೌಲ್ಯ, ಸಮಾಜ ಹಾಗೂ ಧರ್ಮಕ್ಕೆ ಹೊಸ ವ್ಯಾಖ್ಯಾನ ನೀಡಲಾಯಿತು. ಜಾತಿ, ಮತ-ಪಂಥ, ಕುಲ-ಗೋತ್ರಗಳ ಗೊಡ್ಡು ಸಂಪ್ರದಾಯಗಳನ್ನು ದೂರ ಸರಿಸಿ ಸಮಾನತೆ, ಭಕ್ತಿ, ಪ್ರೇಮ, ಸತ್ಯ, ಕಾಯಕ, ದಾಸೋಹ ತತ್ವಗಳ ಮೇಲೆ ನವೀನ ಸಮಾಜ ಕಟ್ಟುವ ಕಾರ್ಯ ನಡೆಯಿತು. ಇದರಿಂದ ದೇಶ ವಿದೇಶಗಳ ವೈಚಾರಿಕ ಮಿಲನ, ವಚನ ಸಾಹಿತ್ಯದ ವಿಪುಲ ಸೃಷ್ಟಿ, ಹಾಗೂ ಹೊಸ ಸಂಸ್ಕೃತಿಯ ಉದಯವಾಯಿತು.

ಆಧ್ಯಾತ್ಮ ಮತ್ತು ಅನುಭಾವಗಳ ಸಂಗಮವೇ ವಚನ ಸಂಸ್ಕೃತಿ. ಈ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸದ ಮತ್ತೊಂದು ಅಧ್ಯಾಯ ಆರಂಭವಾದುದು ಕ್ರಿ.ಶ.೧೨೦೦ರ ನಂತರ, ಚಾಲುಕ್ಯರ ಪತನ ಹಾಗೂ ಯಾದವರ ಆಳ್ವಿಕೆಯ ಆಗಮನ, ದೆಹಲಿ ಸುಲ್ತಾನರು ರಾಜ್ಯದ ವಿಸ್ತರಣೆ ಹಾಗೂ ದಕ್ಷಿಣದ ಸಂಪತ್ತನ್ನು ದೋಚುವ ದುರಾಸೆಯಿಂದ ಈ ಭಾಗದ ಹಿಂದೂ ಸರದಾರರನ್ನು ಪತನಗೊಳಿಸಿ, ಬೀದರನ್ನು ವಶಪಡಿಸಿಕೊಂಡರು.

೧೩೨೫ರಲ್ಲಿ ಬೀದರ ನಗರದ ಮೇಲೆ ಮಹಮ್ಮದ ತುಘಲಕ್‌ನ ದಾಳಿ, ನಂತರ ಬಹುಮನಿ ರಾಜ್ಯದ ಉದಯ ೧೪೨೨-೩೫ರ ಸುಮಾರಿನಲ್ಲಿ ಆಳಿದ ಸುಲ್ತಾನ ಮಹಮ್ಮದ ಷಾಹ ಇದನ್ನು ರಾಜಧಾನಿ ಮಾಡಿಕೊಂಡಿದ್ದು. ಬೀದರನ ಸಾಂಸ್ಕೃತಿಕ ಬದುಕಿನಲ್ಲಿ ಮತ್ತೊಂದು ತಿರುವು ಉಂಟಾಯಿತು. ನಗರಗಳ ನವೀಕರಣ, ಕೋಟೆಯ ಪುನರ್ ನಿರ್ಮಾಣ, ಅರಮನೆ ಮಹಲುಗಳ ನಿರ್ಮಾಣ, ಆಸ್ಪತ್ರೆ, ಧರ್ಮಛತ್ರಗಳ ಪ್ರಾರಂಭ, ಸೂಫಿ ಸಂತರ ಸಮಾಗಮ, ವ್ಯಾಪಾರಭಿವೃದ್ಧಿ, ಶಿಕ್ಷಣ ಚಿಂತನೆ ಇತ್ಯಾದಿ

ಕಾರ್ಯಗಳು ಆರಂಭಗೊಂಡವು.

೩ನೇ ಮಹಮ್ಮದ ಷಾಹ ಪ್ರಧಾನಮಂತ್ರಿ ಮಹಮ್ಮದ ಗವಾನನ ಆಗಮವು ತುಂಬಾ ಮಹತ್ವದ್ದು, ಶಿಕ್ಷಣ ಪ್ರೇಮಿ ಧಾರ್ಮಿಕ ಜೀವಿ, ಆಡಳಿತ ತಜ್ಞ, ಸರಳ ಸಜ್ಜನ ವ್ಯಕ್ತಿಯಾಗಿದ್ದ, ಗವಾನ ಪ್ರಮುಖ ಸಾಂಸ್ಕೃತಿಕ ಪರಂಪರೆಯ ಪ್ರತಿನಿಧಿ ಎನ್ನಬಹುದು. ಆತನ ನೇತೃತ್ವದಲ್ಲಿ ಪ್ರಾರಂಭವಾದ ವಿದ್ಯಾಲಯವು ಅಂತರರಾಷ್ಟ್ರೀಯ ಖ್ಯಾತಿ ಪಡೆಯಿತು. ಈ ಸಂದರ್ಭದಲ್ಲಿ ರಷ್ಯಾದ ಪ್ರವಾಸಿ ನಿಕೆಟಿನ್ ಬೀದರಗೆ ಸಂದರ್ಶನ ನೀಡಿ ಹಿಂದೂಸ್ಥಾನದಲ್ಲಿಯೇ ಬೀದರ ಪ್ರಸಿದ್ಧ ನಗರವೆಂದು ಬಣ್ಣಿಸಿದ್ದಾನೆ. ಸುಮಾರು ೧೪೮೧ರಲ್ಲಿ ಗವಾನನ ಕೊಲೆಯಾದ ನಂತರ ಬಹಮನಿ ರಾಜ್ಯದ ಪತನ ಆರಂಭ, ಆಂತರಿಕ ದಂಗೆಗಳಿಂದ ಹಾಳಾದ ಈ ಮನೆತನದ ಆಳ್ವಿಕೆಯ ನಂತರ ಬರೀದ್ ಷಾಹಿ ಸುಲ್ತಾನರು ಇಲ್ಲಿ ತಲೆ ಎತ್ತಿದರು. ಆ ಮೇಲೆ ನಗರದಲ್ಲಿ ಔರಂಗಜೇಬನ ಧಾಳಿ, ಅಪಾರ ಸಂಪತ್ತಿನ ಲೂಟಿಯೊಂದಿಗೆ ಬೀದರ ಮೊಗಲರ ಅಧಿಪತ್ಯಕ್ಕೆ ಒಳಗಾಯಿತು.

ನಂತರ ಈ ಜಿಲ್ಲೆಯ ಕೆಲವು ಮರಾಠರ ಹಾಗೂ ಹೈದರಾಬಾದ ನಿಜಾಮರ ಪ್ರಭುತ್ವದಲ್ಲಿ ಸಿಕ್ಕಿ ದುರಸ್ತಿಗೊಳಗಾಯಿತು. ಈ ಅಧಿಪತ್ಯವು ಇಲ್ಲಿಯ ಸಾಮಾಜಿಕ, ರಾಜಕೀಯ, ಆರ್ಥಿಕ ಹಾಗೂ ಸಾಂಸ್ಕೃತಿಕ ಬದುಕನ್ನು ಸ್ಥಿತ್ಯಂತರಗೊಳಿಸಿತು. ಈ ಆಡಳಿತ ಪದ್ಧತಿಯ ರಾಜಕೀಯ ಸಂಸ್ಕೃತಿಯು ಸಾಮ್ರಾಜ್ಯ ಶಾಹಿಯಾಗಿ ಬಡಜನತೆಯ ವಿಶೇಷವಾಗಿ ಅನ್ಯ ಸಂಸ್ಕೃತಿಯ ಸ್ವರೂಪದ ಮೇಲೆ ದಾಳಿ ನಡೆಸಿತು. ಇಡೀ ಜಿಲ್ಲೆಯಲ್ಲಿ ಏಕ ಸ್ವಾಮ್ಯದ ಹಕ್ಕನ್ನು ಪ್ರತಿಪಾದಿಸಿ ತನ್ನನ್ನು ವಿರೋಧಿಸುವವರನ್ನು ಮುಂದುವರೆಯದಂತೆ ನೋಡಿಕೊಂಡನು. ಆ ಸಂದರ್ಭದಲ್ಲಿಯೇ ಇಲ್ಲಿಯ ಜೀವನ ಪದ್ಧತಿ ಬದಲಾಯಿತು.

ವಾಸ್ತು ನಿರ್ಮಾಣದಲ್ಲಿ ಕಲಾತ್ಮಕತೆಗಿಂತ, ಸಂರಕ್ಷಣೆ ಮುಖ್ಯವಾಗಿ, ಇಲ್ಲಿಯ ಮನೆಗಳು, ದೇವಾಲಯವಾದವು. ಅನ್ಯ ಸಂಸ್ಕೃತಿಯ ಜನರು ತಮ್ಮ ಅನಂದವನ್ನು ಬಹಿರಂಗದಲ್ಲಿ ಪ್ರದರ್ಶಿಸುವುದು ಹೆಚ್ಚು ಕಡಿಮೆ ಸ್ಥಾವರಗೊಂಡಿತ್ತು. ಶರಣರ ಸಂಸ್ಕೃತಿಯು ಇಲ್ಲಿಯ ಮನೆಗಳಲ್ಲಿ ಮತ್ತು ಮಠಗಳಲ್ಲಿ ಮಾತ್ರ ಮರೆಯಾಗಿ ಕುಳಿತುಕೊಂಡಿತ್ತು. ಬಾಹ್ಯ

ಬದುಕಿನಲ್ಲಿ ಆಳುವವರ ಭಾಷೆ, ಲಿಪಿ, ಶಿಕ್ಷಣ ಕಲೆ ಸಾಹಿತ್ಯದ ಸಾರಥ್ಯದಲ್ಲಿ ಜೀವನ ಸಾಗಿತು. ಸ್ವಾತಂತ್ರ್ಯದಿಂದ ವಂಚಿತ ಗೊಂಡಂತಿದ್ದ ಇಲ್ಲಿಯ ಅನ್ಯ ಸಂಸ್ಕೃತಿಯು ನಿಜಾಮನ ಕೆಲವು ಸ್ವಾರ್ಥಗಳಿಂದ ತುಂಬಾ ನೋವನ್ನನುಭವಿಸಿತು.

ಬೀದರ ಜೊತೆ ಅಂತೆಯೇ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಿತು. ಗಾಂಧೀಜಿಯವರ ಪ್ರಭಾವ ಈ ನೆಲದ ಮೇಲೆ ಬಹಳಷ್ಟಾಯಿತು. ಈ ಸಂದರ್ಭದಲ್ಲಿ ಹುಟ್ಟಿಕೊಂಡಿರುವ ಇಲ್ಲಿಯ ಆರ್ಯ ಸಮಾಜದ ಪಾತ್ರ ಇಲ್ಲಿ ಚಿರಸ್ಮರಣೀಯವಾಗಿದೆ. ರಜಾಕಾರರ ಹಾವಳಿಯನ್ನು ಧೈರ್ಯದಿಂದ ಪ್ರತಿಭಟಿಸಿ ನಿಂತ ಇದರ ಕಾರ್ಯಕರ್ತರು ಸ್ವಾತಂತ್ರ್ಯ ಬರುವವರೆಗೆ ಇಲ್ಲಿಯ ಬಹು ಸಂಸ್ಕೃತಿಯನ್ನು ಕಾಪಾಡಿದರು ಎನ್ನಬಹುದು ಭಾರತದ ಸ್ವಾತಂತ್ರ್ಯದ ನಂತರ ೧೭.೦೯.೧೯೪೮ರಂದು ಈ ಜಿಲ್ಲೆಯ ಸ್ವತಂತ್ರವಾಗಿ ಕರ್ನಾಟಕಕ್ಕೆ ಸೇರಿದ್ದು, ಇತಿಹಾಸದಲ್ಲಿ ಒಂದು ರೋಚಕ ಸಂಗತಿ.

ಇಂದು ಬೀದರ ಜಿಲ್ಲೆ ಕರ್ನಾಟಕದ ಕಿರಿಯ ಜಿಲ್ಲೆಗಳಲ್ಲಿ ಒಂದೆನಿಸಿದರೂ, ಇದು ಪ್ರಾಕೃತಿಕ ಹಾಗೂ ಸಾಂಸ್ಕೃತಿಕ ಸಂಪತ್ತಿನಲ್ಲಿ ಹಿರಿದಾಗಿದೆ. ೫೯೮ ಗ್ರಾಮಗಳಿರುವ ಐದು ತಾಲೂಕುಗಳನ್ನೊಳಗೊಂಡ ಪ್ರದೇಶ, ಎತ್ತರವಾದ ಬೆಟ್ಟ ಗುಡ್ಡಗಳಿಲ್ಲದ ದೊಡ್ಡ ನದಿ ಹಾಗೂ ದಟ್ಟ ಅರಣ್ಯ ಪ್ರದೇಶವಿರದ ದಖ್ಖನ್ ಪ್ರಸ್ಥಭೂಮಿಯ ಒಂದು ಭಾಗ ರಾಜಕೀಯ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ರಂಗಗಳಲ್ಲಿ ತನ್ನದೇ ಆದ ವಿಶಿಷ್ಟ ಪರಂಪರೆಯನ್ನು ಹೊಂದಿರುವ ಇದು ಕೃಷಿ ಪ್ರಧಾನತೆಯಲ್ಲಿ ಪಶು ಸಾಗಾಣಿಕೆಯಲ್ಲಿ ತನ್ನತನವನ್ನು ಮರೆದಿದೆ.

ಜಾಗತೀಕರಣದ ಈ ಸಂದರ್ಭದಲ್ಲಿ ಶಿಷ್ಟ ಸಂಸ್ಕೃತಿಯೊಂದಿಗೆ ರಾಜಿ ಮಾಡಿಕೊಂಡು ಬಹು ಸಮಾಜ, ಬಹು ಸಂಸ್ಕೃತಿಯುಳ್ಳ ಜಾನಪದ ಸಂಸ್ಕೃತಿಯನ್ನು ಉಳಿಸಿಕೊಂಡು ಆಧುನಿಕವಾಗಿ ಬೆಳೆಯುತ್ತಿರುವುದು ಗಮನಾರ್ಹ ಅಂಶ, ಹಿಂದೊಮ್ಮೆ ಶರಣ ಹಾಗೂ ಮಹಮ್ಮದೀಯ ಸಾಂಸ್ಕೃತಿಕ ಹಿರಿಮೆ ಗರಿಮೆಗಳಿಂದ ಜಗತ್ ಪ್ರಸಿದ್ಧವಾದ ಈ ಭಾಗ ಬಿದಿರಿ ಕಲೆಯಿಂದ ದೇಶ ವಿದೇಶಗಳಲ್ಲಿ ಈಗ ಚಿರಪರಿಚಿತವಾಗಿದೆ.

ಬಿದಿರಿ ಕಲೆ ಈ ಮಣ್ಣಿನಲ್ಲಿ ಜನ್ಮತಾಳಿದ ಅದ್ಭುತ ಕಲೆ, ಸತುವು ಮತ್ತು ತಾಮ್ರಗಳ ಲೋಹ ಮಿಶ್ರಣದಿಂದ ತಯಾರಾಗುತ್ತಿರುವ ಕುಶಲ ಕಲಾಕೃತಿಗಳು ನೋಡುಗರ ಕಣ್ಣಿಗೆ ಆಕರ್ಷಣೆಯವಾಗಿವೆ. ಇದರೊಂದಿಗೆ ಬೆಳ್ಳಿ ಬಂಗಾರದಲ್ಲಿಯ ಸೂಕ್ಷ್ಮ ಕೆತ್ತನೆಯ ಕೆಲಸಗಳು ಮನಮೋಹಕವೆನಿಸುತ್ತದೆ. ವಿವಿಧ ಶೈಲಿಗಳಲ್ಲಿ ತಯಾರಾಗುತ್ತಿರುವ ಆಭರಣಗಳು ತುಂಬಾ ಸುಂದರವಾದವು ಅಂತೆಯೇ ಲೋಹಗಳಲ್ಲಿ ತಯಾರಾಗುತ್ತಿರುವ ರಾಷ್ಟ್ರನಾಯಕರ ಮೂರ್ತಿಗಳು, ದೇವತೆಗಳ ಮೂರ್ತಿಗಳು ಹೂದಾನಿ, ಪೆಟ್ಟಿಗೆ, ಮನೆಯ ಅಲಂಕಾರ ವಸ್ತುಗಳು ಎಂಥವರನ್ನೂ ಮಂತ್ರಮುಗ್ಧಗೊಳಿಸುತ್ತವೆ. ಬಿದರಿ ಕಲೆಯಿಂದ ವಿದೇಶಿ ಮಾರುಕಟ್ಟೆಯಲ್ಲಿ ಪ್ರಮುಖ ಸ್ಥಾನಪಡೆದಿರುವ ಬೀದರ, ಸಾಂಪ್ರದಾಯಿಕ ಹಾಗೂ ನವೀನ ಮಾದರಿಯ ಆಭರಣಗಳ ತವರು ಮನೆಯೇ ಎನಿಸಿದೆ. ಚಿನ್ನಬೆಳ್ಳಿಯಿಂದ ತಯಾರಿಸುವ ಆಭರಣಗಳ ವಿನ್ಯಾಸವು ನೋಡುವವರ ಕಣ್ಮನ ಸೆಳೆಯುತ್ತವೆ. ಚಿತ್ರಕಲೆಯೂ ಇಲ್ಲಿ ಪ್ರಸಿದ್ಧವಾಗಿದೆ.

ಕಲೆಯ ದೃಷ್ಟಿಯಿಂದ ಗಮನಿಸುವ ಹಲವು ಜಾನಪದ ಕಲೆಗಳ ಜೊತೆಗೆ ಮೆಹಂದಿ ಹಚ್ಚುವ ಕಲೆಯು ತುಂಬಾ ವಿಶೇಷವಾಗಿದೆ. ಹಿಂದೂ ಮುಸ್ಲಿಂ ಹಾಗೂ ವಿವಿಧ ಜನಾಂಗಗಳ ಸ್ತ್ರೀಯರು ಅಲಂಕರಣಗೊಳ್ಳಲು ಅಂಗೈ ಹಾಗೂ ಪಾದಗಳ ಮೇಲೆ ಚಿತ್ರಿಸಿಕೊಳ್ಳಲು ವಿವಿಧ ಬಗೆಯ ಈ ಕಲೆಯು ಮನಮೋಹಕವಾಗಿದೆ. ಜಿಲ್ಲೆಯ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ವೈಭವಯುತವಾಗಿ ತೋರುವ ಕೋಲಾಟ, ಬುಲಾಯಿ ಹಾಡೂ, ಭೂತೇತರ ಕುಣಿತ, ಭಜನೆ, ಮೊಹರಂ ಆಚರಣೆ, ಹಂತಿ ಸುಗ್ಗಿಹಾಡು, ಶೀಗಿ ಹಾಡು, ಸಾಂಪ್ರದಾಯಿಕ ಹಾಡುಗಳು ಎಲ್ಲೆಲ್ಲೂ ಕಾಣಸಿಗುತ್ತವೆ.

ವಾಸ್ತು ಹಾಗೂ ಶಿಲ್ಪಕಲೆಯು ಇಲ್ಲಿ ವಿಶಿಷ್ಟವಾಗಿದೆ. ಭದ್ರತೆಗೆ ಹೆಸರಾಗಿರುವ ಬೀದರ ಕೋಟೆ, ಕಲ್ಯಾಣ, ಭಾಲ್ಕಿ, ಹುಮನಾಬಾದ ಬೆಟಗುಪ್ಪ ಬಗದಲ್ ಅಷ್ಟೂರ್, ರಾಜೋಳ, ರಾಜೇಶ್ವರ, ಸಂಕಪುರ ಮೊದಲಾದ ಊರುಗಳಲ್ಲಿರುವ ಗುಂಬಜ ಕೋಟೆ, ಕೊತ್ತಲ, ಅರಮನೆಗಳ ವಾಸ್ತುಕಲಾ ಸಂಪತ್ತಿನ ತಾಣಗಳು, ಗವಾನನ ವಿದ್ಯಾಲಯ,

ಕಲ್ಯಾಣ ಚಾಲುಕ್ಯರ ದೇವಾಲಯಗಳು, ವಿಶೇಷವಾಗಿ ನಾರಾಯಣಪುರ, ಜಲಸಂಗ್ವಿ ದೇಗುಲಗಳು, ಶಿಲ್ಪಕಲೆಯ ಶ್ರೀಮಂತಿಕೆಯ ಕುರುಹುಗಳು, ಈ ದೇವಾಲಯಗಳಲ್ಲಿ ಕೆತ್ತಲಾಗಿರುವ ಶಿಲಾಬಾಲಿಕೆಯರ ಶಿಲ್ಪಗಳು, ಚಾಲುಕ್ಯ ಶಿಲ್ಪಕಲೆಯ ಕೊಡುಗೆಗಳು. ಅನಂತರದಲ್ಲಿ ಈ ಜಿಲ್ಲೆಯ ಹಲವು ಕಟ್ಟಡಗಳು ಹಾಗೂ ಮಂದಿರಗಳು ವಿಜಯನಗರ ಹಾಗೂ ಹೊಯ್ಸಳ ಕಲಾಶೈಲಿಯ ಪ್ರತೀಕಗಳಾಗಿ ನಿಂತಿವೆ.

ಮುಸ್ಲಿಂ ಶೈಲಿಯ ಕಟ್ಟಡಗಳಾದ ಗಗನ್ ಮಹಲ್, ರಂಗೀನ್ ಮಹಲ್, ತಕ್ತಮತಹಲ್, ಟಕಣ್ ಮಹಲ್, ಸೋಲಾಕಂಬ, ಸಭಾಸದನ ಜಾಮೀ ಮಸೀದಿ ಮುಂತಾದ ಕಟ್ಟಡಗಳು ಬಹುಮನಿ ಹಾಗೂ ಬರೀದ ಶಾಹಿಸುಲ್ತಾನರ ಕಾಲದ ಕಲ್ಮಾಕತೆಯ ತೋರುವ ಕನ್ನಡಿಗಳು, ಇಂದು ಜಿಲ್ಲೆಯ ತುಂಬಾ ಕಾಣುವ ಶೈವ ವೀರಶೈವ ಮಠಗಳು, ಶಿವವಿಷ್ಣು ಭವಾನಿ ಮಂದಿರಗಳು, ಪ್ರಭುಸಿದ್ಧ, ಬುದ್ಧ, ರಾಘವೇಂದ್ರರ ದೇವಾಲಯಗಳು ಗುಹಾಲಯಗಳು, ಚರ್ಚು, ಸಮುದಾಯ ಭವನ ಇಂದಿನ ವಾಸ್ತುಶಿಲ್ಪದ ಪ್ರತೀಕ ಎನ್ನಬಹುದು. ವಿವಿಧ ಮತ ಪಂಥಗಳ ಸ್ಮಾರಕಗಳು, ಭಕ್ತಿ ಶಾಂತಿಯ ನೆಲೆಗಳಾಗಿದ್ದು ಪ್ರವಾಸಿ ತಾಣಗಳೂ ಆಗಿವೆ. ಮುಲ್ತಾನ ಪಾಶಾ, ಅಬ್ದುಲ್ ಫೈಜ್ ಶರಣರ ಗುಹೆಗಳು ನಾವದಗೇರಿ ಮಾಣೆಕನಗರಿ ಶುಕ್ಲ ತೀರ್ಥಗಳು ಪವಿತ್ರ ತಾಣಗಳೆನಿಸಿದ್ದು. ಇವು ಸಾಂಸ್ಕೃತಿಕ ಕೇಂದ್ರಗಳೂ ಆಗಿವೆ.

ಬ್ರಾಹ್ಮಣ, ವೈಶ್ಯ, ಕ್ಷತ್ರಿಯ, ಶೂದ್ರರೂ, ಬೇಡ, ಬುರಡರು, ರೆಡ್ಡಿ ಕಂಬಾರರು, ಮರಾಠರು, ಲಂಬಾಣಿಗಳು, ಶೈವ, ವೀರಶೈವರು, ಹರಿಜನ ಗಿರಿಜನರು, ಜೈನ ಬೌದ್ಧರು, ಕ್ರಿಶ್ಚಿಯನ್, ಪಾಂಚಾಳರು, ಗೌಳಿ ಗೋಸಾವಿಗಳು, ಮುಸ್ಲಿಂ ಮುಂತಾದ ಜನರೆಲ್ಲ ಇಲ್ಲಿ ವಾಸವಾಗಿದ್ದು. ತಮ್ಮದೇ ಆದ ಜೀವನ ಶೈಲಿಯನ್ನು ರೂಢಿಸಿಕೊಂಡಿದ್ದಾರೆ. ವಿವಿಧ ಧರ್ಮಾಚರಣೆಯ ಈ ಜಿಲ್ಲೆಯಲ್ಲಿ ಜಾತ್ರೆಗಳು ಜನಪದ ಉತ್ಸವಗಳಾಗಿ ನಿಲ್ಲುತ್ತವೆ. ಕಲ್ಯಾಣ, ಭಾಲ್ಕಿ, ಹುಮನಾಬಾದ, ಚಾಂಗಲೇರಾ, ಔರಾದ, ಬೀದರ, ಕರಕನಳ್ಳಿ, ಹುಮನಾಬಾದ, ಭಾಲ್ಕಿ, ನಾವದಗಿ, ಹಾರಕೊಡ ಮುಂತಾದ ಊರುಗಳಲ್ಲಿ ಜರಗುವ

ಜಾತ್ರೆಗಳು, ಈ ಪ್ರದೇಶದ ಸಾಂಸ್ಕೃತಿಕ ಸಮ್ಮೇಳನಗಳು. ಸರ್ವಜನರೂ ಇಲ್ಲಿ ಭಾಗಿ, ಮುಸ್ಲಿಂ ಬಾಂಧವರಿಗೆ, ರಂಜಾನ ಮೋಹರಂಗಳು ವಿಶಿಷ್ಟವಾಗಿದ್ದು, ಹಿಂದೂಗಳೂ ಅದರಲ್ಲಿ ಭಾಗವಹಿಸುವರು, ದಸರಾ ಸಂಕ್ರಮಣಗಳು ಪರಸ್ಪರರು ಸಿಹಿ ಶುಭಾಷಯಗಳನ್ನು ವಿನಿಮಯ ಮಾಡಿಕೊಳ್ಳುವ ಸಂದರ್ಭಗಳು ಈ ಹಬ್ಬ ಉತ್ಸವಗಳಲ್ಲಿ ಸರ್ವಜನಾಂಗದವರು ಬೆರೆತು ಒಂದಾಗಿ ಬಾಳುವ ಪದ್ಧತಿಯು ಈ ಕಾಲದ ಮಹಾ ಸಂಸ್ಕೃತಿ, ಸಾಮರಸ್ಯ ಸಂಸ್ಕೃತಿಗೆ ಮುಂದಾಗಿರುವ ಇಂದಿನ ಬೀದರ ಜಿಲ್ಲೆ ಶಾಂತಿಯ ತಾಣ, ಭಕ್ತಿಯ ಸ್ಥಾನವಾಗಿದೆ.

ಇಂದು ಜರಗುವ ಸಭೆ ಸಮಾರಂಭ ಊರಿನ ಅಭಿವೃದ್ಧಿ, ಮದುವೆ ಸಂದರ್ಭದಲ್ಲಿ. ಪರಸ್ಪರ ಸಹಕಾರ ಸಹಾಯ, ಆತ್ಮೀಯತೆ ಬಂಧುತ್ವ ತೀರಾ ಸಾಮಾನ್ಯವಾಗಿ ಗೋಚರವಾಗುತ್ತದೆ. ಹಲವಾರು ಧಾರ್ಮಿಕ, ಸಾಮಾಜಿಕ ಸಂಘ ಸಂಸ್ಥೆಗಳಿದ್ದಾಗ್ಯೂ ಪರಸ್ಪರ ಗೌರವ ಏಕತೆ ಇಲ್ಲಿಯ ವೈಶಿಷ್ಟ್ಯವೆನ್ನಬಹುದು.

ಜನಜೀವನ ಪದ್ಧತಿಯು ಪರಸ್ಪರ ಕಸಬುಗಳನ್ನು ಅವಲಂಭಿಸಿದ್ದು, ವಿವಿಧ ವೃತ್ತಿಗಳು ಇಲ್ಲಿವೆ, ಒಕ್ಕಲುತನ, ವ್ಯಾಪಾರ, ಹೈನುಗಾರಿಕೆ, ಚರ್ಮಗಾರಿಕೆ, ಕುಂಬಾರಿಕೆ, ಕಮ್ಮಾರಿಕೆ, ವೇಷಗಾರಿಕೆ, ಪರಿಚಾರಿಕೆ, ಕೈಗಾರಿಕೆ, ಉತ್ಪಾರಿಕೆ, ಅಕ್ಕಸಾಲಿಕೆ, ಬಡಿಗತನ, ಕುರಿಕೋಳಿ, ಸಾಕಣಿಕೆ, ಪೌರೋಹಿತ್ಯ ಮುಂತಾದ ಮುಖ್ಯ ಉದ್ಯೋಗಗಳಿದ್ದು, ಬಹು ಸಂಸ್ಕೃತಿಯ ಚಿತ್ರ ಇಲ್ಲಿದೆ. ಇವರ ಅಡಿಗೆ ಪದ್ಧತಿ ಉಡುಗೆ ತೊಡುಗೆಗಳು, ಮನರಂಜನೆ, ಕಲೆಗಳ ಅಭಿವ್ಯಕ್ತಿ ವೈವಿಧ್ಯಮಯ. ಅದರ ಪರಂಪರೆಯನ್ನು ಹಲವು ಸ್ಥಿತ್ಯಂತರದೊಂದಿಗೆ ಇಂದೂ ಕಾಣಬಹುದು.

ವೀರಶೈವ ಧಾರ್ಮಿಕ ಪರಂಪರೆ

ಭಾರತೀಯ ಧರ್ಮಗಳಲೆಲ್ಲಾ ಶೈವಧರ್ಮವು ಅತ್ಯಂತ ಪ್ರಾಚೀನವಾದುದೆಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ. ಶೈವಧರ್ಮದ ಉತ್ಕ್ರಾಂತಿಯ ಫಲವಾಗಿ ರೂಪುಗೊಂಡ ವೀರಶೈವ ಧರ್ಮ ತನ್ನದೇ ಆದ ವೈಶಿಷ್ಟ್ಯಗಳನ್ನೊಳಗೊಂಡಿದೆ. ಶೈವ ಧರ್ಮದ ವಿವಿಧ

ಹಂತಗಳಲ್ಲಿ ವೀರಶೈವವೇ ಅದರ ಕೊನೆಯ ವಿಕಾಸದ ಹಂತ. ಶೈವಧರ್ಮದ ಸಪ್ತಪ್ರಭೇದಗಳಾದ ಅನಾದಿ ಶೈವ, ಅನುಶೈವ ಅವಾಂತರ ಶೈವ, ಯೋಗಶೈವ, ಜ್ಞಾನಶೈವ, ವೀರ ಶೈವಗಳು ಪರಮೇಶ್ವರ ಆಗಮದಲ್ಲಿ ಉಲ್ಲೇಖಿಸಿಗೊಂಡಿವೆ.

ಶೈವ ಧರ್ಮವನ್ನು **ಸಾಮಾನ್ಯ, ಮಿಶ್ರ, ಶುದ್ಧ,** ವೀರ ಎಂದು ನಾಲ್ಕು ವಿಧಗಳಲ್ಲಿ ವಿಂಗಡಿಸುವುದುಂಟು. ವೇದ ಮತ್ತು ಆಗಮಗಳ ಪ್ರಮಾಣ್ಯವನ್ನು ಅಂಗೀಕರಿಸಿ ಮತಸಿದ್ಧಾಂತಗಳ ಪರಂಪರೆಗೆ ಅನುಗುಣವಾಗಿ ಅನುಭವ ಮಾರ್ಗವನ್ನು ವೀರಶೈವ ಒಡ್ಡಿಕೊಂಡಿದೆ.

ಪ್ರಾಚೀನತೆ

ಶೈವ ಧರ್ಮದ ಅನೇಕ ಪ್ರಾಚೀನ ಪ್ರಭೇದಗಳನ್ನು ಹಿಮ್ಮೆಟಿಸಿ, ಉದಾತ್ತ ತತ್ವಗಳಿಂದ ಜನಮನ್ನಣೆಯನ್ನು ಪಡೆದಿರುವ ವೀರಶೈವ ಧರ್ಮ ಆಗಮಗಳಷ್ಟು ಪ್ರಾಚೀನವಾದುದು ಎಂಬುದು ಪರಮೇಶ್ವರ ರಾಗಮದಲ್ಲಿಯ **"ವೀರಶೈವ ಸದೃಶಾಮತಮಸ್ತಿ ಜಗತ್ತ್ರಯೇ"** ಎಂಬ ಉಕ್ತಿಯಿಂದ ವೇದ್ಯವಾಗುತ್ತದೆ. ಈ ಮೇಲಿನ ಹೇಳಿಕೆಯನ್ವಯ ವೀರಶೈವ ಧರ್ಮ ಸ್ಪಷ್ಟ, ಪ್ರಾಚೀನತೆ, ಸಂಸ್ಕೃತಿ ಪರಂಪರೆ, ತತ್ವಸಿದ್ಧಾಂತಗಳನ್ನೊಳಗೊಂಡಿದೆ ಎಂದು ಹೇಳಬಹುದು. ಇದಕ್ಕೆ ಸಾಕ್ಷಿ ಎನ್ನುವಂತೆ ಋಗ್ವೇದ, ಯಜುರ್ವೇದದಲ್ಲಿ ವೀರಶೈವ ಧರ್ಮದ ಸುಳುಹುಗಳು ಗೋಚರವಾಗುತ್ತವೆ. ವೇದ ಉಪನಿಷತ್ತುಗಳು ಮತ್ತು ಶಿವಾಗಮಗಳ ನಂತರ ವೀರಶೈವ ಪರವಾದ ತಾತ್ವಿಕ ವಿಚಾರಗಳು ಸಿದ್ಧಾಂತ ಶಿಖಾಮಣಿಯಲ್ಲಿ ನಿರೂಪಿತಗೊಂಡಿದೆ. ಒಂದರ್ಥದಿಂದ ವೀರಶೈವ ದಾರ್ಶನಿಕ ಪರಂಪರೆಯನ್ನು ತಿಳಿಸುವ ಮೂರನೆ ಘಟ್ಟ ಸಿದ್ಧಾಂತ ಶಿಖಾಮಣಿ ಎನ್ನಬಹುದು.

ಬಸವ ಪ್ರವರ್ಧ ವೀರಶೈವಧರ್ಮ ಸಂಸ್ಕೃತಿ, ಸಮಾಜ

ವಿಕಾಸಶೀಲ ಧರ್ಮವಾದ ವೀರಶೈವವು ಕಾಲಕ್ಕೆ ತಕ್ಕಂತೆ ತನ್ನ ಸ್ವಂತ, ಸ್ವರೂಪ ಆಚರಣೆಗಳನ್ನು ಮಾರ್ಪಡಿಸಿಕೊಳ್ಳುತ್ತ ಮುನ್ನಡೆದಿದೆ. ಆಗಮಾದಿಗಳ ಕಾಲದಿಂದ

ಪ್ರಚಲಿತದಲ್ಲಿದ್ದ ವೀರಶೈವ ಎರಡನೇ ಘಟ್ಟದಲ್ಲಿ ಅಂದರೆ ಬಸವಪೂರ್ವಯುಗದಲ್ಲಿ ಹೆಚ್ಚಿನ ಪ್ರಚುರತೆಯನ್ನು ಪಡೆಯಿತು. ಜನಸಾಮಾನ್ಯರಿಗೆ ಎಟಕದಂತೆ ಸಂಸ್ಕೃತ ಭಾಷೆಯಲ್ಲಿದ್ದ ವೀರಶೈವ ತಾತ್ವಿಕ ವಿಚಾರಗಳನ್ನು ಸರಳವಾಗಿ ನೇರವಾಗಿ ಸೋದಾಹರಣಗಳೊಂದಿಗೆ ನಿರೂಪಿಸಿದ ಕೀರ್ತಿ ಆದ್ಯವಚನಕಾರರೆಂದು ಪರಿಗಣಿಸಲ್ಪಡುವ ಜೇಡರ ದಾಸಿಮಯ್ಯನಿಗೆ ವಿಶೇಷವಾಗಿ ದೊರೆಯುತ್ತದೆ. ಜೇಡರ ದಾಸಿಮಯ್ಯ ಸುಳಿಯುವ ಶಾಸನವಾಗಿ ವೀರಶೈವ ಧರ್ಮದ ಪ್ರಚಾರ ಕಾರ್ಯವನ್ನು ಮಾಡಿದೆ.

ವೀರಶೈವದ ಅಂಗೋಪಾಂಗಗಳಾದ **ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲಗಳ, ಮಹತಿ** ಕುರಿತು ತಿಳಿಯಾದ ಭಾಷೆಯಲ್ಲಿ ಹೇಳಿದ ಅನುಭವ ಮಂಟಪದ ಮಾದರಿಯಲ್ಲಿ ಶಿವಾನುಭವಗೋಷ್ಠಿಗಳನ್ನು ಅಲ್ಲಲ್ಲಿ ನೆರವೇರಿಸಿ ವೀರಶೈವ ವಿಚಾರ ವಾಹಿನಿಯನ್ನು ಸಾರೋದ್ದಾರವಾಗಿ ನಿರೂಪಿಸಿದೆ. ಜೊತೆಗೆ ಕಾಯಕ ದಾಸೋಹಗಳಂತಹ ಪ್ರಮುಖ ಅಂಶಗಳ ಮಹತಿ ಪಾವಿತ್ರ್ಯತೆಯ ಬಗೆಗೆ ವಿವೇಚಿಸಿದ ಜೇಡರದಾಸಿಮಯ್ಯನಂತೆ ಬಸವ ಪೂರ್ವಯುಗದ ಕವಿ ದಂಢಾದೀಶ ಧರ್ಮ ಶಿರೋಮಣಿಯಾದ ಕೊಂಡುಗುಳಿ ಕೇಶಿರಾಜನ ಕೃತಿಗಳಲ್ಲಿ ವೀರಶೈವ ತಾತ್ವಿಕ ಅಂಶಗಳು ಸಮಗ್ರವಾಗಿ ಸೀಮಿತವಾಗಿವೆ.

೧೧ನೇ ಶತಮಾನದ ವೀರಶೈವ ಉತ್ಕ್ರಾಂತಿಯಲ್ಲಿ ಜೇಡರ ದಾಸಿಮಯ್ಯ ಮತ್ತು ಕೊಂಡುಗುಳಿ ಕೇಶಿರಾಜ ಅವರಿಬ್ಬರ ಪಾತ್ರ ಪ್ರಮುಖವಾಗಿದೆ. ಅವರ ಸಮಕಾಲೀನರಾದ ಇತರ ಶರಣರ ಪಾಲೂ ಗಮನಾರ್ಹವಾದುದಾಗಿದೆ. ವೀರಶೈವ ಸಾಹಿತ್ಯದ ಪ್ರಮುಖ ಅಂಗವಾದ ವಚನ ಸಾಹಿತ್ಯಕ್ಕೆ ಇವರೇ ಆದ್ಯರು ಅಂತೆಯೇ ಹರಿಹರನಂಥ ವೀರಶೈವ ಕವಿ ಸಾಹಿತಿ ಪರಂಪರೆಗೆ ಕೇಶಿರಾಜನ ಕೃತಿಗಳೂ ಮೂಲ ಸ್ಫೂರ್ತಿ ನೀಡಿವೆ. ಸಾಹಿತ್ಯಿಕ ಆದರ್ಶ ಕಲ್ಪಿಸಿವೆ. ಆಗಮಾದಿಗಳ ಕಾಲದಿಂದ ಆಚರಣೆಯಲ್ಲಿದ್ದ ವೀರಶೈವ ಧರ್ಮ, ತತ್ವಾಚರಣೆಗಳು ಹೆಪ್ಪುಗಟ್ಟಿಗೊಂಡಿದ್ದು ಹನ್ನೆರಡನೇ ಶತಮಾನದಲ್ಲಿ ವಚನ ಧರ್ಮ ನೀತಿ ಬೋಧನೆ ಸಾಧನವಾಗಿ, ಸಮಾಜ ಪರಿವರ್ತನೆಯ ಸಮರ್ಥ ಮಾಧ್ಯಮವಾಗಬಲ್ಲದೆಂಬುದನ್ನು ಅರಿತ ಬಸವಾದಿ ಶರಣರು ವಚನರಚನೆಯನ್ನು ಮುಂದುವರಿಸಿ ಅವು ನೂತನ ಸಮಾಜ ನಿರ್ಮಾಣದ ದೀಪ ಸ್ಥಂಭಗಳಾಗುವಂತೆ ಮಾಡಿದರು ಬಸವಪೂರ್ವದ ವಚನಕಾರ ಮುಖ್ಯವಾಗಿ ದಾಸಿಮಯ್ಯ ಡೋಹರಕಕ್ಕಯ್ಯ

ಕೇಶಿರಾಜ ಮುಂತಾದವರ ನಿರ್ಭಿಡೆಯ ದೃಷ್ಟಿ ಮಾರ್ಗದರ್ಶಕ ನಡೆಯ ಜಾಡನ್ನು ಹೆದ್ದಾರಿಯನ್ನಾಗಿಸಿಕೊಂಡರು ಶರಣರು.

ಸಮಕಾಲೀನ ಸಮಾಜದ ಚಿತ್ರಣ ಖಂಡನೆ ಅಥವಾ ಮಂಡನೆಯಾಗಿ ವಚನ ಸಾಹಿತ್ಯದಲ್ಲಿ ಮೂಡಿ ಬಂದಿತು. ಒಂದು ರೀತಿಯಲ್ಲಿ ವಚನರಚನೆ ಸಾಹಿತ್ಯಕ್ಕೆ ಸಮಾಜೀಕರಣ ದೀಕ್ಷೆಯನ್ನು ನೀಡಿತೆಂದರೆ ತಪ್ಪಾಗಲಾರದು. ವರ್ಗ ವರ್ಣ ವಿರೋಧಿಗಳಾಗಿ ನಿಂತು ಸಾಮಾಜಿಕ ಕ್ರಾಂತಿಯನ್ನು ವಚನ ಸಾಹಿತ್ಯದ ಮೂಲಕ ಶರಣರು ಸಾಧಿಸಿದರು.

ಬಸವಣ್ಣ ಪ್ರಭುದೇವ, ಮಡಿವಾಳ, ಮಾಚಿದೇವ, ಮುಂತಾದವರ ವಚನಗಳಲ್ಲಿ ಈ ಹೇಳಿಕೆಗಳು ಅನುಕರಣಗೊಂಡಿವೆ. ಏಕದೇವೋಪಾಸನೆ, ಭಕ್ತಿ ಸಾಧನೆಯ ನಿಷ್ಠೆ, ಸಮಾನತೆಯ ಅಂಶಗಳು ಕಾಯಕದ ಮಹತ್ವ ಸ್ತ್ರೀ ಸ್ವಾತಂತ್ರ್ಯ, ಸಮಾನತೆ ಮುಂತಾದ ಅಂಶಗಳು ಸಮಾಜಕ್ಷೇಮ ಸಾಧಕ ಸಾಧನೆಗಳೆಂಬುದನ್ನು ಶಿವಶರಣರ ವಚನ ಸಮುದಾಯ ವ್ಯಾಪಕವಾಗಿ ವ್ಯಾಪಿಸಿದುದು ವಿಶೇಷ ಸಂಗತಿ ಇವುಗಳ ಪ್ರಚಾರಕ್ಕಾಗಿ ವಚನಚಳುವಳಿಯೇ ನಡೆದುದು ಎಲ್ಲವರ್ಗದ ಶರಣರು ಎಲ್ಲ ಕಾಯಕ ನಿಷ್ಠರೂ ತಮ್ಮ ತಮ್ಮ ಅನಿಸಿಕೆಗಳನ್ನು ತಮ್ಮ ತಮ್ಮ ಕಾಯಕದ ನಿಷ್ಠೆಗಳ ಮೂಲಕ ವಚನಗಳನ್ನು ರಚಿಸಿ ವಚನ ಸಾಹಿತ್ಯ ಸಮಾಜದ ಉದ್ದಗಲಕ್ಕೆ ಹರಡಿಕೊಳ್ಳುವಂತಾದುದು ಗಮನಾರ್ಹ ಸಂಗತಿ.

ಸಮಾಜ ಪರಿವರ್ತಿಸಿ ವಚನ ರಚನೆಗಳ ಉದ್ದೇಶ ಒಂದೆಡೆಯಾದಂತೆ, ವೀರಶೈವ ಪ್ರಮುಖ ಸಿದ್ಧಾಂತಗಳಾದ ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲ, ಶಿವಯೋಗ ಮುಂತಾದವುಗಳ ವಿವೇಚನೆ ಬಸವಣ್ಣನವರ ವಚನಗಳಲ್ಲಿ ಮೂಡಿಬಂದಿದೆ. ಉಪನಿಷತ್ತುಗಳ ವಿಚಾರಧಾರೆ ಹಾಗೂ ಶಿವಾಗಮಗಳ ತಾತ್ವಿಕ ವಿವೇಚನೆಯನ್ನು ವಚನಗಳಲ್ಲಿ ಕಾಣಬಹುದು. ವೈಧಿಕ ತತ್ವಕ್ಕಿಂತ ಮಿಗಿಲನ್ನು ಸಾಧಿಸಿದ ವಚನ ಸಾಹಿತ್ಯದ ವ್ಯಾಪ್ತಿಯನ್ನು ಸಿದ್ಧರಾಮನ ವಚನದಿಂದ ತಿಳಿಯಬಹುದು.

ಕರ್ಮಯೋಗಿ ಸಿದ್ಧರಾಮನ ಹೇಳಿಕೆಯು ಉತ್ಪ್ರೇಕ್ಷೆಯೆನಿಸಿದರೂ ಅಲ್ಲಮ ಪ್ರಭುದೇವ, ಬಸವಣ್ಣ ನೀಲಮ್ಮ, ನಾಗಾಯಿ, ಮಡಿವಾಳಮಾಚಿದೇವ, ಹಡಪದಪ್ಪಣ್ಣ

ಮರುಳಸಿದ್ಧ ಮುಂತಾದವರು ವಚನ ರಚನೆಯ ಮೂಲಕ ಜಿಡ್ಡುಗಟ್ಟಿದ ಸಮಾಜಕ್ಕೆ ಚಲನಶೀಲತೆಯನ್ನು ತಂದು ಕೊಟ್ಟರಲ್ಲದೆ, ಜೊತೆಗೆ ವೀರಶೈವ ಸಿದ್ಧಾಂತ ಆಚರಣೆಗಳಿಗೆ ಖಚಿತತೆಯನ್ನು ತಂದುಕೊಟ್ಟರು. ದಯವೇ ಧರ್ಮದಮೂಲ ಆಚಾರವೇ ಸ್ವರ್ಗ ಸತ್ಯನುಡಿವುದೇ ದೇವಲೋಕ, ಮರ್ತ್ಯಲೋಕ, ಕರ್ತಾರನ ಕಮ್ಮಟ, ಕಾಯಕವೇ ಕೈಲಾಸ ಸಕಲ ಜೀವಾತ್ಮರಿಗೆ ಲೇಸನು ಬಯಸುವವನೇ ಕುಲಜ, ಅರಿವೇಗುರು, ದೇವನೊಬ್ಬ ನಾಮ ಹಲವು, ದೇಹವೇ ದೇವಾಲಯ, ಭಕ್ತಿಯ ಮುಕ್ತಿಪಥ, ನಡೆನುಡಿಗಳು ಒಂದಾಗುವುದೇ ಜೀವನದಗುರಿ. ದಾಸೋಹ ಸರ್ವಸಮಾನತೆಯ ಸಂಕೇತ ಇಂತಹ ಲೋಕೋತ್ತರ ತತ್ವಗಳನ್ನು ವಚನಕಾರರು ಸರ್ವರಿಗೂ ವೇಧ್ಯವಾಗುವ ರೀತಿಯಲ್ಲಿ ತಿಳಿಯಪಡಿಸಿದ್ದಾರೆ.

ಹೀಗೆ ಈ ಸಮಾಜೋಧಾರ್ಮಿಕ ಕ್ರಾಂತಿ, ಮಾನವನ ಸರ್ವಾಂಗೀಣ ಪ್ರಗತಿ ಆಧ್ಯಾತ್ಮಿಕ ತಳಹದಿಯ ಮೇಲೆ ಶುದ್ಧ ಹಾಗೂ ಸಮೃದ್ಧ ಸಮಾಜ ನಿರ್ಮಾಣ ಬಸವಾದಿ ವಚನಕಾರರ ಮೂಲ ಆಶಯವಾಗಿತ್ತು. ಶರಣರ ಈ ಆಶಯ ಸಂಪೂರ್ಣ ವಿಫಲವಾಯಿತು ಎಂದು ಹೇಳುವಂತಿಲ್ಲ. ಕಲ್ಯಾಣದ ಕ್ಷಿಪ್ರಕ್ರಾಂತಿಯಿಂದಾಗಿ ಶರಣರು ಕಟ್ಟಿಕೊಂಡ ಆದರ್ಶಗಳು ಮುಂದೇ ಬಸವೋತ್ತರ ಯುಗದಲ್ಲಿ ಪರಿಪೂರ್ಣಗೊಂಡವು ಎಂದು ಹೇಳಬಹುದು.

ಒಟ್ಟಿನಲ್ಲಿ ವೀರಶೈವ ಧರ್ಮ, ಪರಂಪರೆ, ಸಿದ್ಧಾಂತಗಳಿಗೆ ಭದ್ರತೆಯನ್ನೊದಗಿಸಿದ ಹನ್ನೆರಡನೆಯ ಶತಮಾನವೆಂದು ಹೇಳಬೇಕಾಗುತ್ತದೆ. ಮುಂದೆ ಹದಿನೈದನೆಯ ಶತಮಾನದ ವಿಜಯನಗರ ಸಾಮ್ರಾಜ್ಯದ ಆದರ್ಶ ಚಕ್ರವರ್ತಿ ಪ್ರೌಢದೇವರಾಯನ ಕಾಲವನ್ನು ಕರ್ನಾಟಕದ ಇತಿಹಾಸ ಮತ್ತು ಕನ್ನಡ ಸಾಹಿತ್ಯ ಚರಿತ್ರೆಗಳಲ್ಲಿ ವೀರಶೈವ ಸಮೃದ್ಧ ಯುಗವೆಂದು ಹೇಳಬಹುದು. ಕಾರಾಣಾಂತರಗಳಿಂದ ಮುಂಕು ಕವಿದಿದ್ದ ವೀರಶೈವ ಧರ್ಮದ ವ್ಯಾಪ್ತಿ ಹೆಚ್ಚಿತು ಒಂದರ್ಥದಿಂದ ಪ್ರೌಢದೇವರಾಯನ ಕಾಲವು ವೀರಶೈವ ಧರ್ಮದ ಪುನರ್ ಶೋಧನೆಯ ಕಾಲವೆನ್ನಬಹುದು.

ವೀರಶೈವ ಧರ್ಮದ ಮೂಲತತ್ವವಾದ ಪಟ್‌ಸ್ಥಲ ಸಿದ್ಧಾಂತ, ವಚನಗಳ ಸ್ಥಲಕಟ್ಟು ಯೋಜನೆ, ಸಶಾಸ್ತ್ರೀಯವಾದ ರೀತಿಯಲ್ಲಿ ವೀರಶೈವ ತತ್ವ ಪ್ರತಿಪಾದನೆ

ಪ್ರೌಢದೇವರಾಯನ ಕಾಲಕ್ಕೆ ನಡೆಯಿತು. ಈ ಹಿನ್ನೆಲೆಯಲ್ಲಿ ಹನ್ನೆರಡನೇಯ ಶತಮಾನ ವಚನ ಸಾಹಿತ್ಯದ ಪುನರ್‌ಸೃಷ್ಟಿಯುಗವಾದರೆ ಹದಿನೈದನೆಯ ಶತಮಾನ ವಚನ ಸಾಹಿತ್ಯ ಹಾಗೆ ವೀರಶೈವ ಧರ್ಮ ಸಾಹಿತ್ಯಗಳ ಪುನರುತ್ಥಾನ ಕಾಲವೆನ್ನಬಹುದು.

ಒಟ್ಟಿನಲ್ಲಿ ಪುರಾತನ ಪರಂಪರೆಯನ್ನು ಹೊಂದಿದ ವೀರಶೈವ ಧರ್ಮ ತತ್ವವಿಚಾರಗಳ ಪ್ರತಿಪಾದನೆಯೊಂದಿಗೆ ಆಚರಣೆ ಅನುಸಂಧಾನಗಳಿಗೆ ಪ್ರಾಮುಖ್ಯತೆಯನ್ನು ನೀಡಿದೆ. ವೀರಶೈವ ಅಂಗಭೋಗವನ್ನು ಲಿಂಗಭೋಗೋಪಭೋಗವಾಗಿಸುವ ವಿಧಾನವನ್ನು ಒಂದು ಸ್ಥಳದಲ್ಲಿಯೇ ನಿಂತು ಉಳಿದ ಸ್ಥಳಗಳ ಆಚರಣೆಯನ್ನು ಜೀವಾತ್ಮ ಅಳವಡಿಸಿ-ಕೊಳ್ಳಬಹುದಾದ ಸಮಸಮುಚ್ಚಯ ಕ್ರಿಯೆಯನ್ನು ಪ್ರತಿಪಾದಿಸುತ್ತದೆ.

ವೀರಶೈವ ವೇದಾಗಮ ಉಪನಿಷತ್ತುಗಳಿಂದ ಪ್ರೇರಣೆ ಹೊಂದಿದ್ದರೂ ತನ್ನ ಆತ್ಮ ಸ್ವರೂಪವೆನಿಸಿದ ಷಟ್‌ಸ್ಥಲ ಸಿದ್ಧಾಂತಕ್ಕನುಗುಣವಾಗಿ ವೀರಶೈವ ಪಾರಿಭಾಷಿಕ ಪದಗಳಿಗೆ ಹೊಸ ಹೊಸ ಅರ್ಥಗಳನ್ನು ಕಲ್ಪಿಸುತ್ತಾ ಉಪಾಸನಾ ಮಾರ್ಗದಲ್ಲಿ ಹೊಸತನವನ್ನು ಸಾಧಿಸಿದ. ಹೀಗೆ ಪರಂಪರೆ ಪ್ರಗತಿ ನೂತನ ಪರಂಪರೆ ನಿರ್ಮಾಣ ಗತಿಶೀಲವಾದ ವೀರಶೈವಧರ್ಮ ಸಾಹಿತ್ಯದ ಮೂಲ ಸೂತ್ರವೇ ಆಗಿದೆ ಎಂಬುದರಲ್ಲಿ ಸಂಶಯವಿಲ್ಲ.

ಅಧ್ಯಾಯ - ಮೂರು

ಬಸವಕಲ್ಯಾಣದ ವಸ್ತುಸಂಗ್ರಹಾಲಯದ ನೆಲೆ–ಹಿನ್ನೆಲೆ

ಅಧ್ಯಾಯ - ಮೂರು

ಬಸವಕಲ್ಯಾಣದ ವಸ್ತುಸಂಗ್ರಹಾಲಯದ ನೆಲೆ-ಹಿನ್ನೆಲೆ

ಕರ್ನಾಟಕದ ಕಲೆ ಸಂಸ್ಕೃತಿಯ ಹಿಂದೆ ಸಾಕಷ್ಟು ಜನರ ಪರಿಶ್ರಮ ಅಡಗಿದೆ. ಸಾವಿರಾರು ಕಲಾವಿದರು ನಾಡಿನ ಕಲೆ ಸಂಸ್ಕೃತಿಯ ಸಲುವಾಗಿ ತಮ್ಮ ಜೀವನವನ್ನು ಮುಡಿಪಾಗಿಟ್ಟು ಕೆಲಸ ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ಲಲಿತಕಲೆಗಳ ಪಾತ್ರ ಬಹುಮುಖ್ಯವಾಗಿದೆ ಎನ್ನಬಹುದು. ಯಾವುದೇ ಒಂದು ಪರಂಪರೆಯ ಹಿಂದೆ ಆ ಸಂಸ್ಕೃತಿಯ ತಾಯಿ ಬೇರು ಇರುವುದನ್ನು ಗಮನಿಸಲಾಗುತ್ತದೆ. ಚಿತ್ರ, ಶಿಲ್ಪ, ಸಂಗೀತ, ನಾಟಕ, ನೃತ್ಯ ಮುಂತಾದ ಕಲಾಪ್ರಕಾರಗಳಲ್ಲಿ ಇಂಥ ಸಂಸ್ಕೃತಿಯನ್ನು ಗುರುತಿಸಲಾಗುತ್ತದೆ. ಈ ಪರಂಪರೆಯ ಹಿಂದೆ ನಿಂತು ದುಡಿದ ಕಲಾವಿದರ ಕೊಡುಗೆ ಅಮೂಲ್ಯವಾಗಿದೆ.

ಸಂಸ್ಕೃತಿಯ ಈ ಆಶಯಗಳು ಮುಂದಿನ ಪೀಳಿಗೆಗೂ ತಲುಪಬೇಕಾದರೆ, ಹಿರಿಯ ಕಲಾವಿದರ ದಾಖಲೆಗಳು, ಕಲಾಕೃತಿಗಳು, ನಮ್ಮ ಯುವ ಕಲಾವಿದರಿಗೆ ಅಧ್ಯಯನಕ್ಕಾಗಿ ಸಿಗುವಂತಾಗಬೇಕು. ವಿದೇಶಗಳಲ್ಲಿ ಈ ಬಗ್ಗೆ ತುಂಬಾ ಜಾಗೃತವಹಿಸಿ, ಸಾಕಷ್ಟು ಕಲಾಸಾಹಿತ್ಯಗಳ ಪ್ರಕಟಣೆಯಾಗಿರುವುದನ್ನು ಕಾಣುತ್ತೇವೆ. ಗತಿಸಿಹೋದ ಕಲಾವಿದರ ಬಗ್ಗೆ ಹೇರಳವಾಗಿ ಮಾಹಿತಿಗಳು ಲಭ್ಯವಾಗುತ್ತವೆ. ಆದರೆ ನಮ್ಮಲ್ಲಿ ಇಂಥ ಪರಂಪರೆಗೆ

ಈಗಷ್ಟೆ ಚಾಲನೆ ಸಿಕ್ಕಿದೆ ಎನ್ನಬಹುದು. ಈ ನಿಟ್ಟಿನಲ್ಲಿ ನಮ್ಮ ದೇಶದಲ್ಲಿನ ಕಲಾವಸ್ತುಸಂಗ್ರಹಾಲಯಗಳು, ಚಿತ್ರಶಾಲೆಗಳು, ಸ್ತೂಪಗಳು, ಗುಹಾಂತರ ದೇವಾಲಯಗಳು, ಮನೆ, ಮಠ, ಅರಮನೆಗಳು ಸಂಸ್ಕೃತಿಯನ್ನು ಹುಡುಕುವ ಆಕರ ಸಾಮಗ್ರಿಗಳಾಗಿದ್ದವು. ಈ ಪರಂಪರೆಯಲ್ಲಿ ನಡೆದು ಬಂದ ಹೆಜ್ಜೆಯ ಗುರುತುಗಳು ಇಲ್ಲಿ ಕಾಣಲು ಸಿಗುತ್ತಿದ್ದವು. ಇಂಥ ಕಾರ್ಯವನ್ನು ಈಗ ವಸ್ತುಸಂಗ್ರಹಾಲಯಗಳು ಮುಂದುವರೆಸಿವೆ. ಈ ಮೂಲಕ ವಸ್ತುಸಂಗ್ರಹಾಲಯಗಳ ಅಧ್ಯಯನ ಕೈಗೊಂಡು ಸಂಗ್ರಹಿತ ಸಮಗ್ರ ವಸ್ತುಗಳನ್ನು ಅಧ್ಯಯನ ಮಾಡುವ ಅವಶ್ಯಕತೆ ಈಗಿನ ಅತ್ಯಂತ ಮಹತ್ವದ ಅಂಶವಾಗಿದೆ.

"ಮ್ಯೂಸಿಯಂ" ಪದಕ್ಕೆ ವಿವರಣೆಯನ್ನು ಕೊಡುವುದು ತುಂಬಾ ಕಠಿಣವಾಗಿದೆ. ಈ ಶಬ್ದ ಗ್ರೀಕ್ ಕಲಾಭಿಮಾನಿ ದೇವತೆಗಳ ಗರ್ಭಗುಡಿ (*sanctuary of Muses*) ಎಂಬ ಅರ್ಥವನ್ನು ಸೂಚಿಸುವ ಗ್ರೀಕ್ ಶಬ್ದದಿಂದ ಉತ್ಪತ್ತಿಯಾಗಿದೆ. ಇದಕ್ಕೆ ಕಾರಣ ಅದರ ಅಗಾಧ ವ್ಯಾಪ್ತಿ ಮತ್ತು ವೈವಿಧ್ಯಮಯ ಲಕ್ಷಣ. ಈ ಕಲಾಭಿಮಾನಿ ದೇವತೆ ಎಲ್ಲಾ ವಿದ್ಯೆ ಮತ್ತು ಕಲೆಗಳ ಅಧಿದೇವತೆ. ಶೈಕ್ಷಣಿಕ ಅನುಸಂಧಾನಕ್ಕೆ ಸಂಬಂಧಿಸಿದ ಅದರ ಲಕ್ಷಣ ಒಂದಲ್ಲ ಒಂದು ರೂಪದಲ್ಲಿ ಇಂದು ವಸ್ತು ಸಂಗ್ರಹಾಲಯಗಳಲ್ಲಿ ಉಳಿದುಕೊಂಡು ಬಂದಿದೆ.

ಇಷ್ಟಾದರೂ ಆಧುನಿಕ ವಸ್ತುಸಂಗ್ರಹಾಲಯದ ಪರಿಕಲ್ಪನೆಯಲ್ಲಿಯೇ ಗಮನಾರ್ಹವಾದ ಬದಲಾವಣೆಯೊಂದು ನಡೆದಿದೆ. ಬಳಕೆಯಿಂದ ಹೊರತಂದ ಅನುಪಯುಕ್ತ ವಸ್ತುಗಳ ಸಂಗ್ರಹವೇ ವಸ್ತು ಸಂಗ್ರಹಾಲಯವೆಂದು ಇಂದು ಭಾವಿಸುವಂತಿಲ್ಲ. ವಸ್ತು ಸಂಗ್ರಹಾಲಯಗಳು ನಿರ್ದಿಷ್ಟ ಪ್ರದೇಶದ ಅಥವಾ ಸಮುದಾಯದ ಕಲೆ ಮತ್ತು ಸಂಸ್ಕೃತಿಗಳನ್ನು ಉಳಿಸಿಕೊಂಡು ಬರುವುದರಲ್ಲಿ ಮಾತ್ರವಲ್ಲದೆ, ಮಾನವನ ಸೃಜನಶೀಲ ಮತ್ತು ಪ್ರಕೃತಿಯ ಮೇಲಣ ನಿಯಂತ್ರಣದ ಬಗ್ಗೆ ಮೂಲಭೂತ ಸಾಕ್ಷ್ಯಗಳನ್ನು ಸಾದರ ಪಡಿಸುವುದರ ಮೂಲಕ ಮಾನವತೆಯ ಸಾಮಾಜಿಕ ಮತ್ತು ಸಾಂಸ್ಕೃತಿಕ ಉತ್ಥಾನಕ್ಕೆ ನೆರವಾಗುವುದರಲ್ಲೂ ಜೀವಂತ ಪಾತ್ರವಹಿಸುವುದು. ಇದು ವಸ್ತುಸಂಗ್ರಹಾಲಯಗಳ

ಉದ್ದೇಶವಾಗಿದೆ. ಇಂತಹ ವಸ್ತುಗಳನ್ನು ಸಂರಕ್ಷಿಸುವುದು ಅವು ಮಾಡಬೇಕಾಗಿರುವ ಅತ್ಯಂತ ಅವಶ್ಯಕ ಕಾರ್ಯಗಳಲ್ಲಿ ಒಂದೆಂಬುದೇನೋ ನಿಜ, ಆದರೆ ಇಂದಿನ ಸಮಾಜಕ್ಕೆ ಅನುಕೂಲವಾಗುವ ರೀತಿಯಲ್ಲಿ ಈ ವಸ್ತುಗಳನ್ನು ಬಳಸುವುದೇ ಆಧುನಿಕ ಯುಗದ ವಸ್ತುಸಂಗ್ರಹಾಲಯಗಳ ಹೊಣೆಯಾಗಿದೆ.

ವಸ್ತುಗಳ ಭೌತಿಕ ರೂಪಕ್ಕಿಂತ ಅವುಗಳ ವಾಸ್ತವಿಕ ಮೌಲ್ಯಗಳೇ ಪ್ರಧಾನವಾಗಿ ಪರಿಗಣಿತವಾಗಿದೆ. ಯಾವುದೇ ವಸ್ತುವೂ ಅದು ಎಷ್ಟೇ ಮುಖ್ಯವಾದರೂ ಅದರ ಮೂಲ ಹಿನ್ನೆಲೆಯಲ್ಲಿ ಅದನ್ನು ತಿಳಿಸದ ಹೊರತು ಅದು ಪರಿಪೂರ್ಣವೆನಿಸುವುದಿಲ್ಲ. ತತ್ಪರಿಣಾಮವಾಗಿ ವಸ್ತುಸಂಗ್ರಹಾಲಯಗಳಲ್ಲಿ ಇಂದು ವಸ್ತುಗಳ ಸಂಗ್ರಹ ಹಾಗೂ ಸಂರಕ್ಷಣೆ ಕಾರ್ಯಗಳಾಗಿ ಅವುಗಳ ಶೈಕ್ಷಣಿಕ ಗುಣ ಪ್ರಾಧಾನ್ಯ ಪಡೆಯುತ್ತಿದೆ. ಪ್ರದರ್ಶನಕ್ಕಿಟ್ಟಿರುವುದು ಮೂಲಭೂತ ವಸ್ತುಗಳು ಹಾಗೂ ಅವುಗಳ ಪ್ರತಿಕೃತಿಗಳನ್ನು ನಮ್ಮ ಕಥೆಯನ್ನು ತಾವೇ ಹೇಳುವಂತೆ ಜೋಡಿಸಲಾಗಿರುತ್ತದೆ. ಒಳ್ಳೆಯ ಯೋಜಿತ ವಸ್ತುಸಂಗ್ರಹಾಲಯ ತನ್ನ ವಸ್ತುಗಳ ಸಂಗತವಾದ ಕಥೆಯನ್ನು ತಾವೇ ಹೇಳಲು ಪ್ರಯತ್ನಿಸುತ್ತದೆ ಮತ್ತು ನೇರ ಸೂಚನೆಗಳನ್ನು ಕೊಡುವ ಮೂಲಕ ಸಂದರ್ಶಕನಗೆ ನೋಡುವ ಮತ್ತು ಅನುಭವಿಸುವ ಮೂಲಕ ಜ್ಞಾನವನ್ನು ಬೆಳೆಸಿಕೊಳ್ಳಲು ಉತ್ತೇಜನ ನೀಡುತ್ತದೆ.

ಈ ಒಂದು ಗುರಿಯನ್ನು ಸಾಧಿಸಲೋಸುಗವೇ ವಸ್ತು ಸಂಗ್ರಹಾಲಯಗಳು ಒಂದೆಡೆ ಗತಕಾಲದ ವಸ್ತುಗಳನ್ನು ಸಂಗ್ರಹಿಸಿ, ಸಂರಕ್ಷಿಸಿ ಅವನ್ನು ವ್ಯವಸ್ಥಿತ ರೀತಿಯಲ್ಲಿ ನಿರೂಪಣೆ ಮಾಡಬೇಕು ಮತ್ತು ಇನ್ನೊಂದೆಡೆ ಜನತೆಗೆ ಮನರಂಜನೆಯನ್ನು ಜ್ಞಾನಪ್ರಕಾಶವನ್ನು ನೀಡಬೇಕು. ವಿದ್ವಾಂಸರೊಬ್ಬರು ಅದರ ವ್ಯಾಪ್ತಿಯನ್ನು ಸೂಚಿಸುವಂತೆ ಸಂಗ್ರಹವಾಗಿ ಹೇಳಬೇಕೆಂದರೆ ಇಂದು ವಸ್ತುಸಂಗ್ರಹಾಲಯ, ವಸ್ತುವಿಷಯಗಳನ್ನು ನಿರೂಪಿಸುವ ಕಾರ್ಯಗಾರ ಮತ್ತು ಅದೊಂದು ಬೋಧನಾ ಶಾಲೆ. ಸಾಂಸ್ಕೃತಿಕ ಆನಂದ ಪಡೆಯುವ ತಾಣ ಪ್ರೇಕ್ಷಕನು ತನ್ನ ದಿನನಿತ್ಯದ ದುಡಿತದ ಬಳಲಿಕೆ ಅಥವಾ ಆತಂಕಗಳಿಂದ ವಿರಾಮ ಪಡೆಯುವ ಹಾಗೂ ವಿಶಾಲಜ್ಞಾನ ದಿಗಂತಗಳನ್ನು ಕಾಣುವ ಸ್ಥಳ.

ಅಲೆಗ್ಸಾಂಡ್ರಿಯ ಬಾಲೆಮಿಯ ಅವರ ಅದ್ಭುತ ಸಂಗ್ರಹವನ್ನು ಅದರ ಸರ್ವವ್ಯಾಪಕ ಲಕ್ಷಣದಿಂದಾಗಿ ಒಂದು ಸಂಶೋಧನಾ ಸಂಸ್ಥೆಯೆಂದೇ ಅಥವಾ ವಿಶ್ವವಿದ್ಯಾನಿಲಯವೆಂದೇ ಕರೆಯಬಹುದಾದರೂ ಆಧುನಿಕ ಸಂದರ್ಭದಲ್ಲಿ ಅದನ್ನು ವಸ್ತುಸಂಗ್ರಹಾಲಯವೆಂದು ಕರೆಯುವಂತಿಲ್ಲ. ಐರೋಪ್ಯ ಧನಿಕರ ಖಾಸಗಿ ಬೀರುಗಳನ್ನು ತುಂಬಿರುವ ಅಮೂಲ್ಯ ನಿಧಿ ಎನಿಸಿಕೊಂಡ ಹಲವಾರು ಸಂಗ್ರಹಗಳಾಗಲಿ ಅಥವಾ ಮಧ್ಯಯುಗದ ಪ್ರತಿಷ್ಠಿತರು ತಮ್ಮ ಸಿರಿವಂತಿಕೆಯನ್ನು, ಜ್ಞಾನವನ್ನು ಅಥವಾ ಉತ್ತಮ ಕಲಾಭಿರುಚಿಯನ್ನು ತೋರಿಸಲು ಸಂಗ್ರಹಿಸಿ, ತಮ್ಮ ಭವನಗಳನ್ನು ಅಲಂಕರಿಸಿರುವ ಅತ್ಯುತ್ತಮ ಕಲಾಸಂಗ್ರಹಗಳನ್ನು ಆಧುನಿಕ ವಸ್ತುಸಂಗ್ರಹಾಲಯಗಳ ವರ್ಗಕ್ಕೆ ಸೇರಿಸಲಾಗುವುದಿಲ್ಲ. ಅವು ಸಂಗ್ರಹಕಾರರು ಸಮಾಜದಲ್ಲಿ ಗಳಿಸಿದ್ದ ಅಂತಸ್ತನ್ನು ಆ ವ್ಯಕ್ತಿಗಳ ಸೌಂದರ್ಯಾನುಭೂತಿಯನ್ನು ತೋರಿಸುತ್ತದೆ. ಅವನು ಯಾವುದೋ ವಿಶೇಷ ಸಂದರ್ಭದಲ್ಲಿ ಮಾತ್ರ ತಮ್ಮ ಮಿತ್ರರಿಗೆ ಹಾಗೂ ವಿಶೇಷ ಆಹ್ವಾನಿತರಿಗೆ ತೋರಿಸಲಾಗುತ್ತಿತ್ತು.

ಮೇಲಾಗಿ ಈ ಸಂಗ್ರಹಗಳು ಸಾಮಾನ್ಯ ಜನರಿಗಾಗಿ ಇರುವುದಿಲ್ಲ. ಎರಡನೆಯದಾಗಿ ಇವುಗಳನ್ನು ಸಂಗ್ರಹಿಸುವಾಗ ಯಾವುದೇ ಒಂದು ನಿರ್ದಿಷ್ಟ ಕಾರ್ಯ ನೀತಿಯನ್ನು ಅನುಸರಿಸಿರುವುದಿಲ್ಲ. ಹಿಂದಿನ ಕಾಲದ ವಸ್ತು ಸಂಗ್ರಹಾಲಯಗಳಲ್ಲಿ ಸಂಗ್ರಹವಸ್ತುಗಳ ಬಗ್ಗೆ ಅಸ್ಪಷ್ಟ ಪರಿಕಲ್ಪನೆ ಮತ್ತು ಜನಸಾಮಾನ್ಯರಿಂದ ಕಲಾವಸ್ತುಗಳನ್ನು ಮುಚ್ಚಿಕೊಡುವ ಧೋರಣೆಗಳು ದೀರ್ಘಕಾಲದವರೆಗೆ ಉಳಿದು ಬಂದಿದ್ದವು. ಈ ವಸ್ತುಸಂಗ್ರಹಗಳಿಗೆ ಸೂಟುದಾರಿಗಳಾಗಿ ಬಿಳಿಯ ಟೈಯನ್ನು ಎತ್ತರವಾದ ಹ್ಯಾಟನ್ನು ಧರಿಸಿದ ವ್ಯಕ್ತಿಗಳು ಮಾತ್ರ ಹೋಗಬಹುದಿತ್ತು.

೧೮ ಮತ್ತು ೧೯ನೆಯ ಶತಮಾನಗಳಲ್ಲಿಯೂ ಸಹ ವಸ್ತುಸಂಗ್ರಹಾಲಯಗಳ ವಸ್ತುಗಳು ಸಾಮಾನ್ಯವಾಗಿ ಗಣ್ಯರು. ಪಂಡಿತರು ಮತ್ತು ಕಲಾಭಿಜ್ಞರಿಗೆ ಮಾತ್ರ ಸೀಮಿತವಾಗಿದ್ದವು. ಈ ರೀತಿಯಲ್ಲಿ ಮೊದಲ ಮಹಾಯುದ್ಧಕ್ಕೆ ಮೊದಲು ಸಾಧ್ಯವಾದಷ್ಟು ಸಾಮಾನ್ಯಜನತೆಗೆ ತೆರೆದಿಡಬೇಕಾಗಿದ್ದ ವಸ್ತು ಸಂಗ್ರಹಾಲಯಗಳು ಸಮಾಜದ ಪ್ರತಿಷ್ಠಿತ ವ್ಯಕ್ತಿಗಳಿಗೆ ವಿದ್ಯಾವಂತರಿಗೆ ಮಾತ್ರ ಮೀಸಲಾಗಿದ್ದವು. ಭಾರತದ ವಸ್ತು ಸಂಗ್ರಹಾಲಯಗಳ

ಮುನ್ಸೂಚಕಗಳಾಗಿ ಕುತೂಹಲಕಾರವಾದ ಖಾಸಗಿ ಸಂಗ್ರಹಗಳು ಹಾಗೂ ರಾಜರ ಕಲೆ ಮತ್ತು ಪುರಾತತ್ವ ವಸ್ತುಗಳು ಮಾತ್ರ ಇದ್ದವು. ಇವುಗಳಲ್ಲಿ ಪುರಾತತ್ವಜ್ಞರ ಸಂಘಗಳು, ಪುರಾತತ್ವ ನಿವೇಶನಗಳ, ಮತ್ತು ಉತ್ಖನನಗಳ ಮಾದರಿಗಳಾಗಿ ಸಂಗ್ರಹಿಸಿದ ಪುರಾತತ್ವ ವಸ್ತುಗಳ ಸಂಗ್ರಹಗಳೇ ಮುಖ್ಯವಾದವು. ಪುರಾತತ್ವ ಶೋಧನೆಯಲ್ಲಿ ದೊರೆತ ವಸ್ತುಗಳನ್ನೇ ಮಾದರಿಗಾಗಿ ಸಂಗ್ರಹಿಸುವುದು ಮುಖ್ಯವಾದಿತು. ಈ ಸಂಗ್ರಹಗಳನ್ನೊಳಗೊಂಡ ವಸ್ತು ಸಂಗ್ರಹಾಲಯಗಳು ಇಂದು ಸಾಮಾನ್ಯ ಜನತೆಯ ಪಾಲಿಗೆ ಅಜಾಯಬ್ ಘರ್ ಅಥವಾ ಅದ್ಭುತ ವಿಗ್ರಹಗಳಾಗಿವೆ.

ಆಧುನಿಕ ವಸ್ತುಸಂಗ್ರಹಾಲಯಗಳ ಬೆಳವಣಿಗೆಯು ಇತಿಹಾಸವನ್ನು ೩೦೦ ವರ್ಷಗಳಷ್ಟು ಹಿಂದಿನಷ್ಟೆ ಗುರುತಿಸಬಹುದಾಗಿದೆ. ಸುಮಾರಾಗಿ ೧೮ನೇ ಶತಮಾನದ ಮಧ್ಯಭಾಗಕ್ಕೆ ೧೯ನೆಯ ಶತಮಾನದ ಆದಿಗೇ ಮಧ್ಯ ಜನತಾ ವಸ್ತುಸಂಗ್ರಹಾಲಯದ ಹೊಸ ಕಲ್ಪನೆ ಐರೋಪ್ಯ ಸಮಾಜದಿಂದ ರೂಪಿತವಾಯಿತು. ಸಾಧ್ಯವಾದ ಎಲ್ಲ ಸಾಧನಗಳಿಂದಲೂ ಜನತೆಗೆ ಶಿಕ್ಷಣವನ್ನೊದಗಿಸುವ ಭಾವನೆಯನ್ನು ಉಂಟುಮಾಡಿದ ಜ್ಞಾನೋದಯ ಯುಗದ ಸ್ಫೂರ್ತಿಯೇ ದೃಶ್ಯ ಶಿಕ್ಷಣದ ಬಗ್ಗೆ ವಿಕಸಿತ ದೃಷ್ಟಿ ಮೂಡಲು ಮೂಲಕಾರಣವಾಯಿತು.

೧೮ನೆಯ ಶತಮಾನದಲ್ಲಿ ಉಂಟಾದ ಸಾಂಸ್ಕೃತಿಕ ಅರಿವು ಮತ್ತು ಜ್ಞಾನ ಪಿಪಾಸೆಯೇ ವಸ್ತುಸಂಗ್ರಹಾಲಯಗಳ ಬಗ್ಗೆ ಇದ್ದ ಮೂಲಭೂತ ದೃಷ್ಟಿ ಬದಲಾಗಲು ಕಾರಣವಾಯಿತು. ಖಾಸಗಿ ವಸ್ತುಸಂಗ್ರಹಗಳ ಉಪಯೋಗವು ಸಮಾಜದ ಎಲ್ಲ ವ್ಯಕ್ತಿಗಳಿಗೂ ದೊರೆಯುಬೇಕೆಂಬ ಭಾವನೆ ನ್ಯಾಯಯುತವಾಗಿಯೇ ಮೂಡಿತು. ಈಜಿಪ್ತ್, ಪರ್ಷಿಯಾ, ಇಂಡಿಯಾ, ಚೀನಾ ಮೊದಲಾದ ದೇಶಗಳ ಭವ್ಯನಾಗರೀಕತೆಯ ಬಗ್ಗೆ ನಡೆದ ಪುರಾತತ್ವ ಸಂಶೋಧನೆಗಳು ಪುರಾತನ ವಸ್ತುಗಳ ಬಗ್ಗೆ ಅಪೂರ್ವ ಆದರಾಭಿರುಚಿಗಳನ್ನುಂಟು ಮಾಡಿದವು. ಜನಮನವು ತಮ್ಮ ಪೂರ್ವಜರ ಹುದುಗಿಹೋಗಿದ್ದ ಭವ್ಯತೆಯತ್ತ ಹರಿಯಿತು. ಈ ಸ್ಮಾರಕ ಶಿಲಾಶಾಸನಗಳೂ ಉನ್ನತ ಕಲಾವಸ್ತು, ಸಾಮಾನ್ಯವಾಗಿ ದೊರೆಯದ

ಸಸ್ಯಗಳೂ ವ್ಯಕ್ತಿಗಳ ವೈಪರಿತ್ಯ ಅಥವಾ ಕುತೂಹಲಕಾರಕ ವಸ್ತುಗಳಾಗಿ ಮಾತ್ರ ಉಳಿಯಲಿಲ್ಲ. ಸಾಮಾನ್ಯ ಮಾನವನ ತಿಳಿವಳಿಕೆಯ ದೃಷ್ಟಿಯಿಂದಲೂ ಅವು ಹೊಂದಿರುವ ಪ್ರಾಮುಖ್ಯವನ್ನು ಗುರುತಿಸತೊಡಗಿದರು. ಇದರಿಂದ ಖಾಸಗಿ ಸಂಗ್ರಹಕಾರರ ಮನೋಭಾವದಲ್ಲಿ ಮಾರ್ಪಾಡಾಗಿ ಅವರು ತಮ್ಮ ವಸ್ತುಸಂಗ್ರಹಗಳನ್ನು ಸಾಮಾನ್ಯ ಪ್ರಜೆಗೆ ತೆರೆದಿಡಲು ಮೊದಲು ಮಾಡಿದರು. ಇದು ವಿಶ್ವದ ಆಧುನಿಕ ವಸ್ತುಸಂಗ್ರಹಾಲಯಗಳ ಇತಿಹಾಸದಲ್ಲಿ ಒದಗಿ ಬಂದ ಮಹಾಘಟನೆಯಾಗಿದೆ.

ಲಂಡನ್ನಿನ ಬ್ರಿಟಿಷ್ ಮ್ಯೂಸಿಯಂ ಸೇರಿದಂತೆ ಪ್ರಪಂಚದ ಕೆಲವು ದೊಡ್ಡ ದೊಡ್ಡ ವಸ್ತು ಸಂಗ್ರಹಾಲಯಗಳು ಈ ಪರಿವರ್ತನ ಕಾಲದಲ್ಲಿ ಅಂಕುರಿಸಿದುದಾಗಿದೆ. ೧೮ ಮತ್ತು ೧೯ನೆಯ ಶತಮಾನಗಳಲ್ಲಿ ವಸ್ತುಸಂಗ್ರಹಗಳು ಜನತೆಯ ಆಸಕ್ತಿಯನ್ನು ಜಾಗ್ರತಗೊಳಿಸಿದ್ದರೂ, ಪ್ರೇಕ್ಷಕರಲ್ಲಿ ಬಹುಪಾಲು ಅನುಕೂಲಸ್ಥ ಮತ್ತು ವಿದ್ಯಾವಂತ ವರ್ಗದವರೇ ಆಗಿದ್ದರು. ಆದರೆ ಈ ಶತಕದಲ್ಲಿ ವಸ್ತು ಸಂಗ್ರಹಾಲಯಗಳಲ್ಲಿ ಸಾಧಿಸಿರುವ ತಾಂತ್ರಿಕ ಪರಿಣತಿಯ ಕೆಲವು ಅಂಶಗಳು ಗಮನಿಸುವಂತಹವಾಗಿವೆ.

ಇವುಗಳಲ್ಲಿ ಅತ್ಯಂತ ಮುಖ್ಯವಾದ ಸಾಧನೆಯೆಂದರೆ ವಸ್ತು ಸಂಗ್ರಹಾಲಯದ ರೂಪರೇಷೆಗಳನ್ನು ಸಿದ್ಧಪಡಿಸುವಾಗ ಅವರ ಮುಖ್ಯ ಉದ್ದೇಶವನ್ನು ಗಮನದಲ್ಲಿಟ್ಟುಕೊಳ್ಳುವ ವಿಚಾರದ ವಿಕಸನ. ಯಾವ ಗೊತ್ತುಗುರಿಯೂ ಇಲ್ಲದೆ ಆತ್ಮತೃಪ್ತಿಗಾಗಿ ಮನವೆಳಿಸಿದಂತೆ ಸಿಕ್ಕಿದ ಎಲ್ಲ ವಸ್ತುಗಳನ್ನು ಒಂದೆಡೆ ಕಲೆ ಹಾಕುತ್ತಿದ್ದ ಕಾಲ ಕೊನೆಗೊಂಡಿತು. ಇಂದು ವಸ್ತುಸಂಗ್ರಹ ತತ್ವದ ನಿಕೃಷ್ಟತೆ ಪುರಾತತ್ವ ಶೋಧನೆ ಇತಿಹಾಸ ಮಾನವಶಾಸ್ತ್ರ ಕಲೆ. ಮೊದಲಾದ ಹಲವು ವಿಧವಾದ ವಸ್ತು ಸಂಗ್ರಹಾಲಯಗಳ ಸ್ಥಾಪನೆಗೆ ದಾರಿ ಮಾಡಿಕೊಟ್ಟಿತು. ಇದರಲ್ಲಿ ಕಂಡುಬರುವ ಮತ್ತೊಂದು ಮುಖ್ಯ ಅಂಶವೆಂದರೆ ವಿಧಾನಗಳ ನಿರೂಪಣೆಯ ಮಾರ್ಗದಲ್ಲಿ ಕಂಡುಬರುವ ಉತ್ತಮತೆ ನಿರ್ದಿಷ್ಟವಾದ ಸಂದೇಶವನ್ನು ಬಿತ್ತರಿಸುವಂತಹ ರೀತಿಯಲ್ಲಿ ವಸ್ತುಗಳ ಕ್ರಮಬದ್ಧ ಜೋಡಣೆ, ಅರ್ಥವತ್ತಾದ ಪ್ರದರ್ಶನ ಅತ್ಯಂತ ಮುಖ್ಯವೆಂದು ಪರಿಗಣಿಸಲಾಯಿತು.

"ವಸ್ತುಸಂಗ್ರಹಾಲಯಗಳು ನಿರ್ದಿಷ್ಟ ಪ್ರದೇಶದ ಅಥವಾ ಸಮುದಾಯದ ಕಲೆ ಮತ್ತು ಸಂಸ್ಕೃತಿಗಳನ್ನು ಉಳಿಸಿಕೊಂಡು ಬರುವುದರಲ್ಲಿ ಮಾತ್ರವಲ್ಲದೆ, ಮಾನವನ ಸೃಜನಶಿಲತೆ ಮತ್ತು ಪ್ರಕೃತಿಯ ಮೇಲಿನ ನಿಯಂತ್ರಣದ ಬಗ್ಗೆ ಮೂಲಭೂತ ಸಾಕ್ಷಗಳನ್ನು ಸಾದರಪಡಿಸುವುದರ ಮೂಲಕ ಮಾನವತೆಯ ಸಾಮಾಜಿಕ ಮತ್ತು ಸಾಂಸ್ಕೃತಿಕ ಉತ್ಥಾನಕ್ಕೆ ನೆರವಾಗುವುದರಲ್ಲೂ ಜೀವಂತ ಪಾತ್ರವಹಿಸಿವುದು ಇಂದು ವಸ್ತುಸಂಗ್ರಹಾಲಯಗಳ ಉದ್ದೇಶವಾಗಿದೆ.

ಈ ವಸ್ತುಸಂಗ್ರಹಾಲಯಗಳು ಪ್ರೇಕ್ಷಕನಿಗೆ ಮನರಂಜನೆ, ವಿಶಾಲ ಜ್ಞಾನ, ಸಾಂಸ್ಕೃತಿಕ ಆನಂದ ಪಡೆಯುವ ಮತ್ತು ಜ್ಞಾನದ ಕೇಂದ್ರಗಳಾಗಿವೆ. ಹೀಗಾಗಿ ಇಂದು ದೇಶ-ವಿದೇಶಗಳಲ್ಲಿ ಸಾವಿರಾರು ವಸ್ತುಸಂಗ್ರಹಾಲಯಗಳು ಸ್ಥಾಪನೆಯಾಗಿವೆ. ಅವುಗಳಲ್ಲಿ ಮುಖ್ಯವಾಗಿ ಈಜಿಪ್ತ್, ಚೀನಾ, ಪರ್ಶಿಯಾ, ಬ್ರಿಟಿಷ್ ಅಲ್ಲದೆ ಕಲಾ ವಸ್ತುಸಂಗ್ರಹಾಲಯ ನ್ಯೂಯಾರ್ಕ್, ಬ್ರಿಟಿಷ್ ಮ್ಯೂಸಿಯಂ, ತಾಂತ್ರಿಕ ವಸ್ತುಸಂಗ್ರಹಾಲಯ ಹಾಗೂ ಜನಪದ ವಸ್ತುಸಂಗ್ರಹಾಲಯ ಸ್ಟಾಕ್-ಹೋಮ್, ರಾಷ್ಟ್ರೀಯ ವಸ್ತುಸಂಗ್ರಹಾಲಯ ವೇಲ್ಸ್, ಫಾರಜೀಮ್ ವಸ್ತುಸಂಗ್ರಹಾಲಯಗಳ ರುಕಿನ್ಸ್‌ಹಾನ್ಸ್, ಜನಪದ ವಸ್ತುಸಂಗ್ರಹಾಲಯ ಸ್ವೀಡಿಷ್ ಮುಂತಾದವು ಹೆಸರುವಾಸಿಯಾಗಿವೆ. ಭಾರತದಲ್ಲಿ ವಸ್ತುಸಂಗ್ರಹಾಲಯಗಳ ಸ್ಥಾಪನೆಗೆ ಆಗಿನ ಬ್ರಿಟಿಷ್ ಅಧಿಕಾರಿಗಳೇ ಕಾರಣರಾಗಿದ್ದಾರೆ ಎಂದು ಹೇಳಬಹುದು. ಭಾರತದಲ್ಲಿ ಇದುವರೆಗೆ ಸಾವಿರಾರು ವಸ್ತುಸಂಗ್ರಹಾಲಯಗಳು ಸ್ಥಾಪನೆಗೊಂಡಿವೆ.

೧೮೫೧ರಲ್ಲಿ ಮದ್ರಾಸ್, ೧೮೫೭ರಲ್ಲಿ ತಿರುವನಂತಪುರಂ, ೧೮೬೩ರಲ್ಲಿ ಲಕ್ನೋ ಮತ್ತು ನಾಗಪುರ, ೧೮೬೫ರಲ್ಲಿ ಬೆಂಗಳೂರು, ೧೮೬೮ರಲ್ಲಿ ದೆಹಲಿ, ೧೮೭೨ರಲ್ಲಿ ಮಥುರಾ, ೧೮೭೫ರಲ್ಲಿ ರಾಯಪುರ, ೧೮೮೭ರಲ್ಲಿ ತಿರುಚೂರು, ಉದಯಪುರ, ಭೂಪಾಲ ಮತ್ತು ಜಯಪೂರ, ೧೮೮೮ರಲ್ಲಿ ರಾಜಕೋಟೆ, ೧೮೯೪ರಲ್ಲಿ ಬರೋಡ ಮತ್ತು ವಿಜಯವಾಡ, ೧೮೯೩ರಲ್ಲಿ ತಿರುಚನಾಪಳ್ಳಿ, ೧೯೦೯ರಲ್ಲಿ ಚಂಬ ಮತ್ತು ಜೋಧಪುರಗಳಲ್ಲಿ, ೦೧೯೧೦ರಲ್ಲಿ ಖಜುರಾಹೋ ಮತ್ತು ಗ್ವಾಲಿಯಾರಗಳಲ್ಲಿ, ೧೯೧೪ರಲ್ಲಿ ಪ್ರಿನ್ಸ್ ಆಫ್

ವೇಲ್ಸ್ ಮ್ಯೂಸಿಯಂ, ಮುಂಬೈ ಹೀಗೆ ಅನೇಕ ವಸ್ತುಸಂಗ್ರಹಾಲಯಗಳು ದೇಶದಲ್ಲಿ ಸ್ಥಾಪನೆಯಾದವು. ಅವುಗಳಲ್ಲಿ ಮುಖ್ಯವಾಗಿ ದೆಹಲಿ, ಕಲ್ಕತ್ತ, ಮುಂಬೈ, ಚೆನ್ನೈಗಳಲ್ಲಿಯ ವಸ್ತುಸಂಗ್ರಹಾಲಯಗಳು ಜಗತ್ಪ್ರಸಿದ್ಧಿ ಪಡೆದಿವೆ.

ಅಲ್ಲದೆ ಹೈದ್ರಾಬಾದ, ಮೈಸೂರು, ಬೆಂಗಳೂರು, ಅಹಮದಾಬಾದ, ಜಯಪೂರ, ಪಾಟ್ನಾ, ಪುಣೆ, ಪಟಿಯಾಲ, ಬರೋಡ, ಭೂಪಾಲ, ಭುವನೇಶ್ವರ, ಪಣಜಿ, ಗುವಾಟಿ, ತಂಜಾವೂರ, ತಿರುವನಂತಪುರ, ವಾರಣಾಸಿ, ಉದಯಪುರ, ಅಮೃತಸರ, ಭರತಪೂರ, ಅಜ್ಮೀರ, ಕಾಲಿಬಂಗನ, ಗ್ವಾಲಿಯಾರ ಕೋಟೆ, ಕೊಲ್ಹಾಪುರ, ಆಗ್ರಾ, ಬುದ್ಧಗಯಾ, ನಲಂದಾ, ಸಾಂಚಿ, ಮುರ್ಷಿದಾಬಾದ್, ರತ್ನಗಿರಿ, ಕೊನಾರ್ಕ್, ಖಜುರಾಹೋ, ಅಮರಾವತಿ, ನಾಗಾರ್ಜುನ ಕೊಂಡ, ಕೊಚ್ಚಿನ್, ಲಕ್ನೋ, ಶಾಂತಿನಿಕೇತನ, ಅಲಹಾಬಾದ, ರಾಜಸ್ತಾನ, ಕೊಯಮತ್ತೂರು ಮುಂತಾದ ಸ್ಥಳಗಳಲ್ಲಿಯ ವಸ್ತುಸಂಗ್ರಹಾಲಯಗಳು ಹೆಸರುವಾಸಿಯಾಗಿವೆ. ಇವುಗಳಲ್ಲಿ ಇಂಡಿಯನ್ ಮ್ಯೂಸಿಯಂ ಕಲ್ಕತ್ತ ಮತ್ತು ಸಾಲರ್‌ಜಂಗ್ ಮ್ಯೂಸಿಯಂ ಹೈದ್ರಾಬಾದ್ ಇವು ರಾಷ್ಟ್ರೀಯ ವಸ್ತುಸಂಗ್ರಹಾಲಯಗಳೆಂದು ಘೋಷಿತವಾಗಿವೆ.

"ವಸ್ತುಸಂಗ್ರಹಾಲಯಗಳು ವೈವಿಧ್ಯಮಯ ವಸ್ತುಗಳ ಅಪೂರ್ವ ಖಜಾನೆ, ಅಲ್ಲಿ ಕಾಣಸಿಗುವ ವಸ್ತುವಿಶೇಷಗಳು ಬೇರೆಲ್ಲಿಯೂ ನೋಡಸಿಗುವುದಿಲ್ಲ. ಆ ವಸ್ತುಗಳಲ್ಲಿ ನಾವು ಒಂದು ಪರಂಪರೆಯನ್ನು ಗುರುತಿಸಲು ಸಾಧ್ಯವಾಗುತ್ತದೆ. ಮ್ಯೂಸಿಯಂ ಎಂದರೆ ಕೇವಲ ವಸ್ತುಗಳ ಸಂಗ್ರಹಾಲಯ ಎಂದೆಷ್ಟೇ ತಿಳಿದರೆ ತಪ್ಪಾದೀತು. ಅದು ಒಂದು ಅಧ್ಯಯನ ಕೇಂದ್ರವೂ ಹೌದು. ನಮ್ಮ ದೇಶದ ಚರಿತ್ರೆ, ಕಲೆ, ಸಾಹಿತ್ಯ, ಸಂಸ್ಕೃತಿ, ಸಂಗೀತ, ವಸ್ತು ಇವನ್ನೆಲ್ಲ ಅಲ್ಲಿನ ವಸ್ತುಗಳನ್ನು ಅವಲೋಕಿಸಿ, ವಿಷಯ ಗ್ರಹಿಸಿ ತಿಳಿಯಲು ಅವಕಾಶವಿರುತ್ತದೆ. ಆಯಾ ವಸ್ತುಗಳು ಒಂದು ವಿಭಿನ್ನ ಕಾಲವನ್ನು ಇಲ್ಲವೇ ಇತಿಹಾಸ ಯುಗವನ್ನು ಪ್ರತಿನಿಧಿಸುತ್ತವೆ. ಕೆಲವು ಮ್ಯೂಸಿಯಂಗಳು ತುಂಬಾ ಅಪರೂಪದ ವಸ್ತುಗಳನ್ನೊಳಗೊಂಡಿರುತ್ತವೆ".

ಈ ಹಿನ್ನೆಲೆಯಲ್ಲಿ ವಸ್ತುಸಂಗ್ರಹಾಲಯಗಳ ಇತಿಹಾಸ ಗಮನಿಸಿದಾಗ ಆದಿ

ಮಾನವನ ಗುಹೆಗಳು, ಸ್ತೂಪಗಳು, ಗುಹಾಂತರ ದೇವಾಲಯಗಳು, ಅರಮನೆಗಳು, ಗುಡಿ-ಗುಂಡಾಗಳು, ಮಠಗಳು, ಈಗಿನ ವಸ್ತುಸಂಗ್ರಹಾಲಯಗಳು ಮುಂತಾದವುಗಳ ಹೆಸಎನಲ್ಲಿ ರೂಪಾಂತರ ಕಂಡರೂ ಉದ್ದೇಶ ಮಾತ್ರ ಒಂದೇ ಆಗಿತ್ತು. ಅದು ಜನರ ಜ್ಞಾನದಾಹ ತೀರಿಸುವುದು. ಮನೋರಂಜನೆ ಒದಗಿಸುವುದು, ಇತಿಹಾಸ ಮತ್ತು ಸಂಸ್ಕೃತಿಯನ್ನು ಕಾಪಾಡುವುದು. ಅಲ್ಲದೇ ಸಂಸ್ಕೃತಿಯ ರಕ್ಷಣೆ ಮತ್ತು ಪ್ರಶಂಸೆಗೆ ಒತ್ತು ನೀಡುವುದಾಗಿದೆ.

"ನಹಿ ಜ್ಞಾನೇನ ಸದೃಶಂ" (ಜ್ಞಾನಕ್ಕೆ ಸಮಾನವಾದುದು ಯಾವುದೂ ಇಲ್ಲ) ಎಂಬುದನ್ನು ಮನಗಂಡಿದ್ದ ನಮ್ಮ ಹಿರಿಯರು ಇಂತಹ ವಸ್ತುಸಂಗ್ರಹಾಲಯಗಳ ಸ್ಥಾಪನಾ ಕಾರ್ಯಕ್ಕೆ ಕೈಹಾಕಿದರು. ಇವುಗಳ ಮೂಲಕ ಲಕ್ಷಾಂತ್ರ ಜನರಿಗೆ ಜ್ಞಾನ ಒದಗಿಸುವುದು, ಜಿಜ್ಞಾಸುಗಳನ್ನು ತನ್ನತ್ತ ಸೆಳೆಯುವ ಮಹತ್ವದ ಕೇಂದ್ರಗಳನ್ನು ಸ್ಥಾಪಿಸುವ ಉದ್ದೇಶ ನಿಜಕ್ಕೂ ಶ್ಲಾಘನೀಯ. ಇಲ್ಲಿ ನಮ್ಮ ಚಾರಿತ್ರಿಕ ಇತಿಹಾಸ ಕಟ್ಟಿಕೊಡುವ ಪ್ರಯತ್ನವಿದೆ. ಐತಿಹಾಸಿಕ ಸ್ಮಾರಕಗಳನ್ನು ಸಂಗ್ರಹಿಸುವ ಕಳಕಳಿಯಿದೆ. 'ಹಳೇ ಬೇರು ಹೊಸ ಚಿಗುರು' ಎಂಬಂತೆ ಹಳೆಯ ವಸ್ತುಗಳು ಹೊಸ ಜೀವನಕ್ಕೆ ಪ್ರೇರಣೆ ನೀಡುತ್ತವೆ. ಇದು ನಮ್ಮ ಸಂಸ್ಕೃತಿಗಳ ಸಂವರ್ಧನೆ ಹಾಗೂ ಸಂರಕ್ಷಣೆಯ ಮಹಾದಾಸೆಯಿಂದ ಪ್ರಾರಂಭಿಸಿದ ವಸ್ತುಸಂಗ್ರಹಾಲಯಗಳಲ್ಲಿರುವ ಚಿತ್ರಕಲಾಕೃತಿಗಳನ್ನು, ಶಿಲ್ಪ, ಪ್ರಾಚ್ಯವಸ್ತುಗಳು, ಜನಪದ ವಸ್ತುಗಳನ್ನು ಸಂಗ್ರಹಿಸಿ ಪ್ರದರ್ಶಿಸಲಾಗಿದೆ.

ಭಾರತದಲ್ಲಿ ವಸ್ತುಸಂಗ್ರಹಾಲಯಗಳ ಹಿನ್ನೆಲೆಯ ಅಧ್ಯಯನ ಪ್ರಾಚೀನ ಕಾಲದಲ್ಲಿ ಪಿರಾಮಿಡ್, ಸ್ತೂಪಗಳು, ಕಲಾಮಂದಿರಗಳು, ಚಿತ್ರಶಾಲೆಗಳು, ಇವು ವಸ್ತುಸಂಗ್ರಹಾಲಯಗಳ ಕಾರ್ಯವನ್ನು ನಿರ್ವಹಿಸುತ್ತಿದ್ದವು. ಇವುಗಳಲ್ಲಿ ಮುಖ್ಯವಾಗಿ ಕಲಾಮಂದಿರಗಳು, ಚಿತ್ರಶಾಲೆಗಳ ವಿವರವನ್ನು ಕುರಿತು ವಿವೇಚಿಸಲಾಗಿದೆ.

ವಿಶ್ವದ ಪ್ರಾಚೀನ ವಿಶ್ವಪ್ರಸಿದ್ಧ ಕೆಲವು ವಸ್ತುಸಂಗ್ರಹಾಲಯಗಳಾದ ಕ್ಯಾಪಿಟಲ್ ಮ್ಯೂಸಿಯಮ್, ವ್ಯಾಟಿಕನ್ ಮ್ಯೂಸಿಯಂ, ಅಮರಬಾಚ್ ಕ್ಯಾಬಿನೆಟ್ ಮ್ಯೂಸಿಯಂ,

ರಾಯಲ್ ಆರ್ಮರಿಸ್ ಮ್ಯೂಸಿಯಂ, ಅಸಮೋಲಿಯನ್ ಮ್ಯೂಸಿಯಂ, ಮ್ಯೂಸೀಡೇಸ ಬಿಯಾಕ್ಸ್-ಆರ್ಟ್ಸ್ ಎಟ್ ಫ್ರೆಂಚ್ ಆರ್ಕಿಯೋಲಜಿ ಮ್ಯೂಸಿಯಂ, ಬ್ರಿಟಿಷ್ ಮ್ಯೂಸಿಯಂ, ಹೆರ್ಮಿಟೇಜ್ ಮ್ಯೂಸಿಯಂ, ಉಪ್ಪಿಟ್ಟಿ ಮ್ಯೂಸಿಯಂ, ಬ್ರೇರಾ ಮ್ಯೂಸಿಯಂ, ಲೌವ್ರೇ ಮ್ಯೂಸಿಯಂ ಮುಂತಾದವುಗಳಲ್ಲದೆ ಬಂಗಾಳದ ಏಶಿಯಾಟಿಕ ಸಂಸ್ಥೆ, ಭಾರತೀಯ ಪುರಾತತ್ವ ವಸ್ತುಸಂಗ್ರಹಾಲಯಗಳು, ಪ್ರಿನ್ಸ್ ಆಫ್ ವೇಲ್ಸ್ ಮ್ಯೂಸಿಯಂ ಮುಂಬೈ, ಕಲ್ಕತ್ತಾದ ಭಾರತೀಯ ವಸ್ತುಸಂಗ್ರಹಾಲಯ, ಹೈದ್ರಾಬಾದ್‌ನ ಸಾಲರಜಂಗ್ ಮ್ಯೂಸಿಯಂ, ಶರೀ ಭವಾನಿ ಚಿತ್ರ ಸಂಗ್ರಹಾಲಯ, ಔಂಧ ಅಲ್ಲದೆ ರಾಜಾ ದಿನಕರ ಕೇಳಕರ ಮ್ಯೂಸಿಯಂ ಪುಣೆ, ಮಹಾತ್ಮಾ ಫುಲೆ ವಸ್ತುಸಂಗ್ರಹಾಲಯ ಪುಣೆ, ಶಾಹಜಿ ಛತ್ರಪತಿ ವಸ್ತುಸಂಗ್ರಹಾಲಯ ಕೊಲ್ಹಾಪುರ, ತಾಜ್ ವಸ್ತುಸಂಗ್ರಹಾಲಯ ಆಗ್ರಾ, ಪಂಜಾಬಿ ವಿಶ್ವವಿದ್ಯಾಲಯದ ವಸ್ತುಸಂಗ್ರಹಾಲಯ ಪಟಿಯಾಲ ಮುಂತಾದ ಭಾರತದ ಪ್ರಾತಿನಿಧಿಕ ವಸ್ತುಸಂಗ್ರಹಾಲಯಗಳನ್ನು ಹೆಸರಿಸಲಾಗಿದೆ.

ಕರ್ನಾಟಕದ ವಸ್ತುಸಂಗ್ರಹಾಲಯಗಳ ಸ್ವರೂಪ ಮತ್ತು ವೈವಿಧ್ಯತೆ

ಕರ್ನಾಟಕದಲ್ಲಿ ಭಾರತೀಯ ಪುರಾತತ್ವ ಇಲಾಖೆಯ ಅಧೀನದಲ್ಲಿರುವ ವಸ್ತುಸಂಗ್ರಹಾಲಯಗಳು, ರಾಜ್ಯ ಸರ್ಕಾರದ ಅಧೀನದಲ್ಲಿಯ ವಸ್ತುಸಂಗ್ರಹಾಲಯಗಳು, ವ್ಯಕ್ತಿಗತ ಖಾಸಗಿ ವಸ್ತುಸಂಗ್ರಹಾಲಯಗಳು, ಧಾರ್ಮಿಕ ಸಂಸ್ಥೆಯ ವಸ್ತುಸಂಗ್ರಹಾಲಯಗಳು, ಅರಮನೆ, ಶಿಕ್ಷಣ, ವಿಶ್ವವಿದ್ಯಾಲಯಗಳ ವಸ್ತುಸಂಗ್ರಹಾಲಯಗಳು, ಕಲಾ ವಸ್ತು ಸಂಗ್ರಹಾಲಯಗಳು, ಎಂದು ವರ್ಗೀಕರಿಸಿಕೊಳ್ಳಬಹುದಾಗಿದೆ.

ಪ್ರಸ್ತುತ ಕರ್ನಾಟಕದ ವಸ್ತುಸಂಗ್ರಹಾಲಯಗಳನ್ನು ಎರಡು ರೀತಿಯಲ್ಲಿ ಪ್ರಮುಖವಾಗಿ ವರ್ಗೀಕರಿಸಿಕೊಳ್ಳಲಾಗಿದೆ.

೧. ಸರಕಾರಿ ವಸ್ತುಸಂಗ್ರಹಾಲಯಗಳು

೨. ಖಾಸಗಿ ವಸ್ತುಸಂಗ್ರಹಾಲಯಗಳು

೧. ಸರಕಾರಿ ವಸ್ತುಸಂಗ್ರಹಾಲಯಗಳು

* ಕರ್ನಾಟಕದಲ್ಲಿ ಭಾರತೀಯ ಪುರಾತತ್ವ ಇಲಾಖೆಯ ಒಟ್ಟು ಹನ್ನೆರಡು ವಸ್ತುಸಂಗ್ರಹಾಲಯಗಳಿವೆ. ಅವುಗಳೆಂದರೆ, ಭಾರತೀಯ ಪುರಾತತ್ವ ಇಲಾಖೆಯ ವಸ್ತುಸಂಗ್ರಹಾಲಯ, ವಿಜಯಪುರ, ಶ್ರೀರಂಗಪಟ್ಟಣ, ಹಳೇಬೀಡು, ಕಮಲಾಪೂರ, ಬಾದಾಮಿ, ಐಹೊಳೆ, ಪಟ್ಟದಕಲ್ಲು ಅಲ್ಲದೆ ರಾಷ್ಟ್ರೀಯ ಆಧುನಿಕ ಕಲಾ ಸಂಗ್ರಹಾಲಯ, ಬೆಂಗಳೂರು, ಇಂದಿರಾಗಾಂಧಿ ಮಾನವ ವಸ್ತುಸಂಗ್ರಹಾಲಯ ಮೈಸೂರು ಮುಂತಾದ ವಸ್ತುಸಂಗ್ರಹಾಲಯಗಳಲ್ಲಿ ಕಲಾಕೃತಿಗಳು ಸಂಗ್ರಹಿಸಲ್ಪಟ್ಟಿವೆ.

* ಕರ್ನಾಟಕ ಸರಕಾರದ ಪ್ರಾಚ್ಯವಸ್ತು ಇಲಾಖೆಯ ಒಟ್ಟು ಇಪ್ಪತ್ತೊಂದು ವಸ್ತುಸಂಗ್ರಹಾಲಯಗಳು ಇವೆ. ಅವುಗಳೆಂದರೆ, ಸರಕಾರಿ ವಸ್ತುಸಂಗ್ರಹಾಲಯ ಬೆಂಗಳೂರು, ಚಿತ್ರದುರ್ಗ, ಧಾರವಾಡ, ಶ್ರೀಮಂತಿಬಾಯಿ ವಸ್ತುಸಂಗ್ರಹಾಲಯ, ಮಂಗಳೂರು, ಶಿವಮೊಗ್ಗ, ಕಿತ್ತೂರು ಚೆನ್ನಮ್ಮ ವಸ್ತುಸಂಗ್ರಹಾಲಯ, ಕಿತ್ತೂರು; ವೆಂಕಟಪ್ಪಾ ಕಲಾಸಂಗ್ರಹಾಲಯ, ಬೆಂಗಳೂರು; ಸರಕಾರಿ ವಸ್ತುಸಂಗ್ರಹಾಲಯ, ಗದಗ, ಮಡಿಕೇರಿ, ಬಸವಕಲ್ಯಾಣ, ಹಾಸನ, ಶ್ರೀರಂಗಪಟ್ಟಣ, ಮೈಸೂರು, ಗುಲಬರ್ಗಾ, ಹೂವಿನ ಹಡಗಲಿ, ಅಥಣಿ, ಜನಪದ ವಸ್ತುಸಂಗ್ರಹಾಲಯ, ಬಾಗಲಕೋಟೆ, ಕುವೆಂಪು ವಸ್ತುಸಂಗ್ರಹಾಲಯ, ಕುಪ್ಪಳ್ಳಿ; ಕೆಂಪೆಗೌಡ ವಸ್ತುಸಂಗ್ರಹಾಲಯ, ಬೆಂಗಳೂರಿನಲ್ಲಿ ಅನೇಕ ಕಲಾಕೃತಿಗಳು ಸಂಗ್ರಹಿಸಲ್ಪಟ್ಟಿವೆ.

* ಕರ್ನಾಟಕದ ವಿಶ್ವವಿದ್ಯಾಲಯಗಳಲ್ಲಿ ಒಟ್ಟು ಏಳು ವಸ್ತುಸಂಗ್ರಹಾಲಯಗಳಿವೆ. ಅವುಗಳೆಂದರೆ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ; ಮೈಸೂರು ವಿಶ್ವವಿದ್ಯಾಲಯದ ಜನಪದ ವಸ್ತುಸಂಗ್ರಹಾಲಯ, ಮೈಸೂರು; ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ವಸ್ತುಸಂಗ್ರಹಾಲಯ, ಬೆಂಗಳೂರು; ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ನಾಡೋಜ ಆರ್. ಎಂ. ಹಡಪದ ಕಲಾಸಂಗ್ರಹಾಲಯ, ಬಾದಾಮಿ–ಬನಶಂಕರಿ, ಕುವೆಂಪು ಸಹ್ಯಾದ್ರಿದೇಶಿ ವಸ್ತುಸಂಗ್ರಹಾಲಯ, ಕುಪ್ಪಳ್ಳಿ ಮುಂತಾದ ಕಡೆಗಳಲ್ಲಿ ಕಲಾಕೃತಿಗಳನ್ನು ಸಂಗ್ರಹಿಸಲಾಗಿದೆ.

೨. ಖಾಸಗಿ ವಸ್ತುಸಂಗ್ರಹಾಲಯಗಳು

* ಸಾಂಸ್ಥಿಕ (ಸಂಸ್ಥೆಯ) ವಸ್ತುಸಂಗ್ರಹಾಲಯಗಳು ಇಲ್ಲಿ ಒಟ್ಟು ಏಳು ಇವೆ. ಅವುಗಳೆಂದರೆ, ಚಿತ್ರಕಲಾ ಪರಿಷತ್ ಕಲಾಸಂಗ್ರಹಾಲಯ, ಬೆಂಗಳೂರು; ಶಾಶ್ವತಿ ವಸ್ತುಸಂಗ್ರಹಾಲಯ, ಬೆಂಗಳೂರು; ಮಂಜೂಷಾ ವಸ್ತುಸಂಗ್ರಹಾಲಯ, ಧರ್ಮಸ್ಥಳ; ಸುತ್ತೂರ ಮಠದ ವಸ್ತುಸಂಗ್ರಹಾಲಯ, ಶ್ರೀಕ್ಷೇತ್ರ ಸುತ್ತೂರು; ಚಿತ್ರದುರ್ಗದ ಬೃಹನ್ಮಠದ ವಸ್ತುಸಂಗ್ರಹಾಲಯ, ಚಿತ್ರದುರ್ಗ; ಮಂಜೂಶ್ರೀ ವಸ್ತುಸಂಗ್ರಹಾಲಯ, ಬೆಂಗಳೂರು; ಸಿದ್ಧಸಂಸ್ಥಾನ ಮಠದ ವಸ್ತುಸಂಗ್ರಹಾಲಯ, ಚಿಂಚಣಿ ಮುಂತಾದ ಸಾಂಸ್ಥಿಕ ವಸ್ತುಸಂಗ್ರಹಾಲಯಗಳಲ್ಲಿ ಕಲಾಕೃತಿಗಳನ್ನು ಸಂಗ್ರಹಿಸಲಾಗಿದೆ.

* ವ್ಯಕ್ತಿಗತ ವಸ್ತುಸಂಗ್ರಹಾಲಯಗಳು ಒಟ್ಟು ಐದು ಇವೆ. ಅವುಗಳೆಂದರೆ ಜಗನ್ಮೋಹನ ವಸ್ತುಸಂಗ್ರಹಾಲಯ, ಮೈಸೂರು; ಟಿ.ಎಸ್. ಗಂಡುಗಲಿ ವಸ್ತುಸಂಗ್ರಹಾಲಯ, ಚಿತ್ರದುರ್ಗ; ಜಾನಪದ ಲೋಕ ವಸ್ತುಸಂಗ್ರಹಾಲಯ, ರಾಮನಗರ; ರಾಣಿ ಅಬ್ಬಕ್ಕ ವಸ್ತುಸಂಗ್ರಹಾಲಯ, ಸಂಚಯಗಿರಿ; ಭಾರತೀಯ ಶಾಸ್ತ್ರೀಯ ವಸ್ತುಸಂಗ್ರಹಾಲಯ, ಹುಬ್ಬಳ್ಳಿ; ಹಸ್ತಶಿಲ್ಪ ಹೆರಿಟೇಜ್ ವಿಲೇಜ್ ವಸ್ತುಸಂಗ್ರಹಾಲಯ, ಮಣಿಪಲ್‌ದಲ್ಲಿ ಅನೇಕ ಕಲಾಕೃತಿಗಳ ಸಂಗ್ರಹವನ್ನು ಕಾಣಬಹುದಾಗಿದೆ.

ಬಸವಕಲ್ಯಾಣದ ಹಳೆಯ ವಸ್ತುಸಂಗ್ರಹಾಲಯ

ಈ ವಸ್ತು ಸಂಗ್ರಹಾಲಯವು ಪ್ರಾರಂಭವಾದದ್ದು ೧೯೬೪ ಮಾರ್ಚ್ ೨೪ರಂದು, ಈ ವಸ್ತು ಸಂಗ್ರಹಾಲಯಕೋಟೆಯೊಳಗಿದ್ದು ಚಾಲುಕ್ಯ ವಂಶದ ೧ನೇ ಸೋಮೇಶ್ವರ ಕಾಲ ೧೦೪೦ ಕಟ್ಟಿದನೆಂದು ತಿಳಿದು ಬರುತ್ತದೆ. ೧೦೮೨ರಲ್ಲಿ ಪ್ರಥಮವಾಗಿ ಕಲ್ಯಾಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡನು. ಜೇಡಿಮಣ್ಣಿನಲ್ಲಿ ತಯಾರಿಸಿದ ಮಣಿಗಳು ಆಭರಣಗಳ ರೂಪದಲ್ಲಿವೆ. ಇದರಲ್ಲಿರುವ ಪ್ರತಿಯೊಂದು ಮಣಿಗಳು ಮಡಿಕೆ ಅಡಿಕೆ, ಚೆಂಡು, ಬುಗರಿ ಗಂಟಿ ಮತ್ತು ದ್ರಾಕ್ಷಿ ಇತ್ಯಾದಿ ರೂಪದಲ್ಲಿ ರಚಿಸಲ್ಪಟ್ಟಿವೆ. ಇವುಗಳಲ್ಲದೆ

ಜೇನುಗೂಡು, ತೂಕದಕಲ್ಲು ಮಡಿಕೆ ಮೂಳೆ ಚೂರುಗಳ ಬಳೆಚೂರುಗಳು, ಶಂಖದ ಚೂರುಗಳು ಬಳೆಗಳು, ಗಾಜಿನ ಮಣೆಗಳು, ರಾಮಗಿರ್ ಜಾಗೀರವರ ಕಾಲದ ಪಲ್ಲಕ್ಕಿ ಡೋಲಿ, ಮಹ್ಮದ ಷಾಹ ಖೈರೋದ್ದೀನ್ ಕಾಲದ ತೋಪು ಇವುಗಳಲ್ಲದೆ, ಬೀಗಗಳು, ಸರಪಳಿ, ಬಂದೂಕು, ತುಪಾಕಿ, ಬಾಣಗಳು, ಮದ್ದುಗಳ ಸಂಗ್ರಹ ಮತ್ತು ಕಲ್ಲಿನಲ್ಲಿ ಕೆತ್ತಲ್ಪಟ್ಟ ಕಲಾತ್ಮಕ ವಿನ್ಯಾಸಗಳುಳ್ಳ ತಾಟು, ಶಿಲ್ಪಗಳು ಮುಂತಾದವುಗಳು ಗಮನ ಸೆಳೆಯುತ್ತವೆ.

ಬಸವಕಲ್ಯಾಣದ ನೂತನ ವಸ್ತುಸಂಗ್ರಹಾಲಯ

ಕರ್ನಾಟಕ ಸರ್ಕಾರದ ಪುರಾತತ್ವ ಮತ್ತು ವಸ್ತುಸಂಗ್ರಹಾಲಯಗಳ ಇಲಾಖೆಯ ಕರ್ನಾಟಕ ರಾಜ್ಯ ಸಾರಿಗೆ ಮಂತ್ರಿಗಳಾಗಿದ್ದ ಸನ್ಮಾನ್ಯ ಶ್ರೀ ಭೀಮಣ್ಣ ಖಂಡ್ರೆ ಇವರಿಂದ ಬಸವಕಲ್ಯಾಣದ ಸರಕಾರಿ ಮತ್ತು ವಸ್ತುಸಂಗ್ರಹಾಲಯ ಕಟ್ಟಡದ ಉದ್ಘಾಟನೆ ದಿನಾಂಕ ೧೮.೯.೧೯೪೭ರಂದು ನೆರವೇರಿತು. ಹಾಗೂ ಶ್ರೀ ಬಸವರಾಜ ಪಾಟೀಲ ಅಟ್ಟೂರ ಶಾಸಕರು ಲೋಕಸಭಾ ಸದಸ್ಯರು ಅಧ್ಯಕ್ಷತೆವಹಿಸಿದ್ದರು. ಶ್ರೀರಾಮಚಂದ್ರ ವೀರಪ್ಪನವರು ಉಪಸ್ಥಿತರಿದ್ದರು, ನಿರ್ದೇಶಕರು ಡಾ. ಡಿ. ವಿ. ದೇವರಾಜ, ಶ್ರೀ ಎಸ್. ವಿಶ್ವನಾಥ ಭಾ.ಆ.ಸೇ ಪ್ರಧಾನ ಕಾರ್ಯದರ್ಶಿಗಳು ಕೂಡಾ ಉಪಸ್ಥಿತರಿದ್ದರು ಎಂದು ತಿಳಿದು ಬರುತ್ತದೆ. ಇಂದಿಗೂ ಸಹ ದಿನನಿತ್ಯ ಹಲವಾರು ಪ್ರವಾಸಿಗರು ಬಂದು ಹೋಗುವ ಐತಿಹಾಸಿಕ ಸ್ಥಳವಾಗಿ ಬಸವಕಲ್ಯಾಣ ವಸ್ತುಸಂಗ್ರಹಾಲಯ ಉಳಿದುಕೊಂಡಿದೆ.

ಪೂರ್ವಜರ ಬದುಕಿನ ಸಾಂಸ್ಕೃತಿಕ ಆಯಾಮಗಳನ್ನು ಪರಿಚಯ ಮಾಡಿಕೊಡುವ ಹಾಗೂ ಗತಕಾಲದ ಇತಿಹಾಸವನ್ನು ತೋರಿಸುವಲ್ಲಿ ವಸ್ತುಸಂಗ್ರಹಾಲಯದ ಪಾತ್ರ ಮಹತ್ವದ್ದಾಗಿದೆ. ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಜೈನರ ಕೇಂದ್ರವಾಗಿ ಖ್ಯಾತಿಗೊಂಡಿದ್ದರಿಂದ ಕಲ್ಯಾಣದಲ್ಲಿ ಕೆಲವು ಜೈನ ಶಿಲ್ಪಕಲೆಗಳನ್ನು ಕಾಣುತ್ತೇವೆ. ಕುತೂಹಲ ಸಂಗತಿ ಎಂದರೆ ಚಾಲುಕ್ಯರ ೬ನೇ ವಿಕ್ರಮಾದಿತ್ಯನು ತನ್ನ ರಾಣಿಯೊಬ್ಬಳ ಅಪೇಕ್ಷೆಯಂತೆ ಕಲ್ಯಾಣದ ಅರಮನೆಯಲ್ಲಿ ಒಬ್ಬ ವ್ಯಾಪಾರಿ ತಂದ ಮಾಣಿಕ್ಯದಂತಿರುವ ದಂತದ ತೀರ್ಥಂಕರ ವಿಗ್ರಹವನ್ನು ಆಕೆಗೆ ಕೊಡಿಸಿದನೆಂದು ಶಾಸನದಿಂದ ತಿಳಿದುಬರುತ್ತದೆ. ಕಲ್ಯಾಣ ಚಾಲುಕ್ಯರ

ಪ್ರಮುಖ ವಿದ್ಯಾಕೇಂದ್ರವಾಗಿದ್ದ ಗೋರ್ಟಾದಲ್ಲಿ ಒಟ್ಟು ೪೨ ಶಾಸನಗಳು ದೊರೆತಿವೆ. ಒಂದು ತಾಮ್ರ ಶಾಸನವಿದೆ. ಹಾಗೂ ವೀರಗಲ್ಲು, ಮಾಸ್ತಿಗಲ್ಲುಗಳು ಹಾಳಾಗುವ ಹಂತದಲ್ಲಿವೆ ಎಂದು ರಾಜಶೇಖರ ಹೇಳುತ್ತಾರೆ.

ಜ್ಞಾನಮುನಿ ಎಂಬಾತನು "ಅಭಿನಂದ ಗುಣಧರ" ಎಂದು ಬಿರುದು ಪಡೆದಿದ್ದ ಎಂಬುದಕ್ಕೆ ಸಾಕ್ಷಿಯಾಗಿ ಒಂದು ಶಾಸನದೊರೆತಿದೆ. ಇದು ಕ್ರಿ.ಶ.೧೧೨೦ರಲ್ಲಿ ೬ನೇ ವಿಕ್ರಮಾದಿತ್ಯನ ಕಾಲದಲ್ಲಿ ಬರೆಯಲಾಗಿದೆ ಎಂದು ತಿಳಿದುಬರುತ್ತದೆ.

ವಸ್ತುಸಂಗ್ರಹಾಲಯದಲ್ಲಿ ನಾಲ್ಕು ವಿಶಾಲವಾದ ಕೊಠಡಿಗಳಿದ್ದು, ಅದರಲ್ಲಿ ೩೦೦ಕ್ಕೂ ಹೆಚ್ಚು ಮೂರ್ತಿ ಶಿಲ್ಪಗಳನ್ನು ಸಂರಕ್ಷಣೆ ಮಾಡಲಾಗಿದೆ. ಆದರೆ ಇನ್ನೂ ಕೆಲವು ಶಿಲ್ಪಗಳು ವಸ್ತುಸಂಗ್ರಹಾಲಯದ ಮುಂದಿನ ಭಾಗದಲ್ಲಿ ಹರಡಿರುವುದು ಕಂಡುಬರುತ್ತದೆ. ಈ ಕೆಲಸಗಳನ್ನು ಪುರಾತತ್ವ ಇಲಾಖೆಯವರು ಅರ್ಧದಲ್ಲಿ ನಿಲ್ಲಿಸಿದ್ದಾರೆ. ಅಲ್ಲಿನ ಚಿತ್ರಕಲಾಕೃತಿಗಳನ್ನು ನೋಡಿದಾಗ ಆ ಕಲಾಕೃತಿಗಳನ್ನು ಯಾವುದೋ ಮೂಲೆಯಲ್ಲಿ ಹಾಕಿರುವುದು ಕಂಡುಬಂದಿದೆ. ಹೀಗಾಗಿ ಇದಕ್ಕೆ ಕರ್ನಾಟಕ ಸರ್ಕಾರ ಪುರಾತತ್ವ ಇಲಾಖೆಯವರು ಗಮನ ಹರಿಸಬೇಕಾಗಿದೆ. ಚಿತ್ರಕಲಾಕೃತಿಗಳು ಸುಮಾರು ಹತ್ತಕ್ಕಿಂತಲೂ ಹೆಚ್ಚು ಕಂಡಿವೆ. ರೇಖಾಚಿತ್ರಗಳು ಸುಮಾರು ಒಟ್ಟು ೫೦ಕ್ಕೂ ಹೆಚ್ಚು ಕಂಡಿದ್ದು ಇವುಗಳಲ್ಲಿ ಕೆಲವು ನಾಶವಾಗುತ್ತಿವೆ.

ಈ ಚಿತ್ರಕಲಾಕೃತಿಗಳು ರುಮಾಲೆ ಚನ್ನಬಸಯ್ಯ ಎಂಬ ಕಲಾವಿದ ರಚಿಸಿದ್ದಾರೆಂದು ಮಾಹಿತಿ ದೊರಕಿದೆ. ಇಲ್ಲಿ ನಿಸರ್ಗ ಚಿತ್ರ, ಕಿರುಚಿತ್ರಗಳು, ಪಕ್ಷಿಚಿತ್ರ(*Paintings*)ಗಳು ಕಂಡು ಬಂದಿವೆ. ಈ ವಸ್ತುಸಂಗ್ರಹಾಲಯದ ಶಿಲ್ಪಕಲಾಕೃತಿಗಳು ಈ ಕೆಳಗಿನಂತಿವೆ. ಗಂಧರ್ವ, ಕುಬೇರ, ಶೃಂಗಾರ ದಂಪತಿ, ವರಾಹ, ಯಾಳಿ, ವಿಷ್ಣು, ಶಿವಾ, ಉಮಾ ಮಹೇಶ್ವರಿ, ಸೂರ್ಯ, ಚೌರಿಬೇಕರ್ಸ್, ಅರ್ಧನಾರೀಶ್ವರ, ಚೌಕಸ್ತಂಭ, ವೀರಗಲ್ಲು, ಕಂಭ ಕೆಲವು ಶಾಸನಗಳು, ಯಕ್ಷಾ, ತ್ರಿಮೂರ್ತಿ, ಭಗವಾನ್ ವಿಷ್ಣು, ನಾಗ, ಕಾಳಗ, ಕುದುರೆ, ಗಜಕಾಳಗ, ಹುಲಿ, ಪಾತ್ರೆ-ಪಡಗಗಳು, ಖಡ್ಗ, ಗುರಾಣಿ, ವಿಷ್ಣು, ಲಕ್ಷ್ಮಿ, ಬುದ್ಧ, ವಿಹಾರದ

ವಿಗ್ರಹಗಳು, ಮತ್ತು ಹಳೆಗನ್ನಡ ಸಂಸ್ಕೃತಿ ಮತ್ತು ಅರಬ್ಬಿ ಭಾಷೆಯಲ್ಲಿ ಬರೆಯಲಾದ ಒಟ್ಟು ೧೫೦ಕ್ಕಿಂತಲೂ ಹೆಚ್ಚು ಶಾಸನಗಳು ಇವೆ.

ಸಂಕೀರ್ಣಗಳು

ಕೋಟೆಯ ದ್ವಾರಕ್ಕೆ ಹಾಕಲಾಗುವ ಬೀಗಗಳು ಸಣ್ಣತೋಪುಗಳು, ಸಂಕಳಿ, ಗುಂಡುಗಳು ಇತ್ಯಾದಿಗಳು ಈ ವಸ್ತುಸಂಗ್ರಹಾಲಯದಲ್ಲಿ ಕಾಣಬಹುದು.

ಅಧ್ಯಾಯ - ನಾಲ್ಕು

ಬಸವಕಲ್ಯಾಣದ ವಸ್ತು ಸಂಗ್ರಹಾಲಯದ ಚಿತ್ರಕಲಾಕೃತಿಗಳು

ಅಧ್ಯಾಯ - ನಾಲ್ಕು

ಬಸವಕಲ್ಯಾಣದ ವಸ್ತು ಸಂಗ್ರಹಾಲಯದ ಚಿತ್ರಕಲಾಕೃತಿಗಳು

ವರ್ಣಚಿತ್ರಗಳು

೧. ರೇಖಾಚಿತ್ರಗಳು

೨. ಭೂದೃಶ್ಯಗಳು

೩. ಸೃಜನಾತ್ಮಕ ಚಿತ್ರಗಳು

೪. ಕಿರುರೂಪ ಚಿತ್ರಗಳು

ವಿಶ್ವದ ಮೊಟ್ಟಮೊದಲ ಚಿತ್ರಕಾರನು ಎನ್ನುವುದಕ್ಕೆ ಆದಿಮಾನವ ಸಾಕ್ಷಿಯಾಗಿದ್ದಾನೆ. (*The Sketch is Mother of Art*)

ರೇಖಾಚಿತ್ರ

ರೇಖೆ ಬಿಂದುಗಳ ಚಲನೆಯಿಂದ ಗೋಚರಿಸುತ್ತದೆ. ಎರಡು ಬಿಂದುಗಳ ಚಲನೆಯೂ ರೇಖೆಯೇ ಆಗಿರುತ್ತದೆ. ರೇಖೆಗಳಲ್ಲಿ ಅತೀ ನವೀನವಾದ ರೇಖೆ ವೀರ್ಯವತ್ತಾದ

ರೇಖೆ, ಸರಳರೇಖೆ, ವಕ್ರರೇಖೆ, ಲಂಬರೇಖೆ, ಓರೆಯಾದ ರೇಖೆ, ಸಮಾನಾಂತರ ರೇಖೆ, ಲಯಬದ್ಧ ರೇಖೆ, ಅಡ್ಡದಿಡ್ಡರೇಖೆ, ವಜ್ರಾಕೃತ ರೇಖೆ, ಇತ್ಯಾದಿ ಅನೇಕ ಬಗೆಯ ರೇಖೆಗಳಿರುತ್ತವೆ. ರೇಖೆಗಳು ಚಿತ್ರಕಲೆಯ ಮೂಲ ಭೂತ ಬುನಾದಿಯನ್ನು ರೂಢಿಸುವ ಪ್ರಮುಖ ಸ್ಥಾನದಲ್ಲಿರುತ್ತದೆ.

ಈ ಬುನಾದಿಯ ಮೇಲೆಯೇ ಕಲಾವಿದನು ತನ್ನ ಕಲಾಕೃತಿಯ ಕಟ್ಟಡವನ್ನು ನಿರ್ಮಿಸಿರಬಹುದೆಂದು, ಚಿತ್ರಿತವಾದ ಬಾಹ್ಯರೇಖಾಕೃತಿಯಲ್ಲಿ ಕಲಾವಿದನು ಬಣ್ಣಗಳನ್ನು ತುಂಬಿ ಚಿತ್ರಿತ ವಸ್ತುವಿನ ಗುಣ ಸ್ವಭಾವವನ್ನು ಅಭಿವ್ಯಕ್ತಿಸಿರುವುದೆಂದು ಊಹಿಸಬಹುದಾಗಿದೆ.

ರೇಖಾ ಚಿತ್ರಗಳನ್ನು ಬಳಸುವಾಗ ಕಲಾವಿದನು ಸೀಸದ ಕಡ್ಡಿ, ಬಣ್ಣ, ಇದ್ದಲಪುಡಿ ಮುಂತಾದ ಮಾಧ್ಯಮಗಳನ್ನು, ಸಂದರ್ಭ ಚಿತ್ರಗಳ ರಚನೆಯಲ್ಲಿ ಕಪ್ಪುಶಾಹಿ ಇಲ್ಲವೆ ವಿವಿಧ ವರ್ಣಗಳನ್ನು ಬಳಸಿ ಚಿತ್ರಕೃತಿಗಳನ್ನು ಪೂರ್ಣಗೊಳಿಸಿರುವುದನ್ನು ಕಾಣಬಹುದಾಗಿದೆ. "ಯೋಜಿತ ವಿಷಯಗಳ ಸಾಮಾನ್ಯ ಕಲ್ಪನೆಯ ಹಾಗೂ ಚಿತ್ರಿತ ವಸ್ತುವಿನ ಪೂರ್ಣ ವಿವರಗಳನ್ನು ಹೊಂದಿರದ ಚಿತ್ರವು ಕರಡು ಚಿತ್ರವೆನಿಸುತ್ತದೆ.

ಚಿತ್ರಕಾರನು ತನ್ನ ಮನಸ್ಸಿಗೆ ಹಿಡಿಸಿದ ಸನ್ನಿವೇಶ, ನೈಸರ್ಗಿಕ ಸುಂದರ ನೋಟಗಳು, ಐತಿಹಾಸಿಕ ಅವಶೇಷಗಳ ಕೆತ್ತನೆ, ಕಲಾಕೃತಿಗಳೇ ಮೊದಲಾದವುಗಳ ರೂಪುರೇಷಗಳನ್ನು ತನ್ನ ದಿನಚರಿಯಲ್ಲಿ ಸೀಸುಕಡ್ಡಿಯಿಂದಲೂ ಬಣ್ಣಗಳಿಂದಲೂ, ಕಪ್ಪುಶಾಹಿಯ ಲೆಕ್ಕಣಿಕೆಯಿಂದಲೂ ಚಿತ್ರಿಸಿ ದಾಖಲಿಸಿದಂತಿದೆ. ಇಂತಹವುಗಳನ್ನು ತೀವ್ರಗತಿ ಕರಡು ಚಿತ್ರಗಳೆಂದು ಕರೆಯಬಹುದಾಗಿದೆ.

ಹೀಗೆ ಚಿತ್ರಿಸುವ ತೀವ್ರಗತಿ ಕರಡು ಚಿತ್ರಗಳಲ್ಲಿ ರೇಖೆಗಳೆ ಪ್ರಧಾನ ಪಾತ್ರವಹಿಸುತ್ತವೆಯಲ್ಲದೇ ಕಲಾವಿದನ ಸಾಮರ್ಥ್ಯದ ದ್ಯೋತಕಗಳೂ ಆಗಿರುತ್ತವೆ. ರೇಖೆಗಳನ್ನು ತೆಳುವಾಗಿಯೂ, ದಪ್ಪನಾಗಿಯೋ ಚಿತ್ರಿಸಲು ಅನುವಾಗುವಂತೆ ಮೆದುವಾದ ಸೀಸುಕಡ್ಡಿಯನ್ನು ಉಳಿಯ ಆಕಾರದಲ್ಲಿ ಚಿತ್ರಕಾರನು ವಿಶಿಷ್ಟ ರೀತಿಯಲ್ಲಿ ಕೆತ್ತಿಕೊಂಡಿರುತ್ತಾನೆ.

ಇದೇ ಸೀಸದ ಕಡ್ಡಿಯಿಂದ ಚಿತ್ರಿಸಲಿರುವ ವಸ್ತುವಿನ ಮೂರು ಪರಿಮಾಣಗಳು ರೂಪುಗೊಳ್ಳುವಂತೆ ಚಿತ್ರವನ್ನು ರೂಪಿಸಿದಂತಿದೆ. ರೇಖೆ ತೆಳುವಾಗಿರಲಿ, ದಪ್ಪವಾಗಿರಲಿ ಅದು ಒಂದು ನಿರ್ದಿಷ್ಟ ಆಕಾರವನ್ನು ಕಟ್ಟಿಕೊಡುವಲ್ಲಿ ಮಹತ್ವದ್ದಾಗಿರುತ್ತದೆ.

ಆದಿಮಾನವನ ಕಾಲದಲ್ಲಿಯೂ ಕೂಡಾ ರೇಖಾಚಿತ್ರಗಳು ಕಂಡುಬಂದಿರುವದಲ್ಲದೆ, ಬಂಡೆಯ ಮೇಲೆ ಕೆತ್ತಿರುವ ಗೀರು ಚಿತ್ರಗಳು ಭಾರತದ ಭಿಂಬೇಟ್ಕಾದಲ್ಲಿ ಕಾಣಬಹುದು. ಸಾಂಪ್ರದಾಯಿಕ ಚಿತ್ರಕಾರನು ಸೀಸುಕಡ್ಡಿಯ ರೇಖೆಗಳಿಂದ ತನ್ನ ಚಿತ್ರಕೃತಿಯನ್ನು ರಚಿಸಿ ಅದಕ್ಕೆ ಬಣ್ಣಗಳನ್ನು ತುಂಬಿ ಚಿತ್ರವನ್ನು ಪೂರ್ಣಗೊಳಿಸುವದನ್ನು ಕಾಣಬಹುದು. ತನ್ನ ಭಾವನೆಗಳ ಯಥಾವತ್ ಅಭಿವ್ಯಕ್ತಿಗೆ ಚಿತ್ರಕಲೆಯಲ್ಲಿ ಅನೇಕ ತಂತ್ರಗಳನ್ನು ಬಳಸುತ್ತಾನೆ. ಯಾವುದೇ ತಂತ್ರವನ್ನು ಬಳಸಿದ್ದರೂ ಅದು ರೇಖಾಮೂಲವಾದ ತಂತ್ರವೇ ಆಗಿರುತ್ತದೆ ಎಂಬುದನ್ನು ತಿಳಿದಾಗ ಚಿತ್ರಕಲೆಯಲ್ಲಿ ರೇಖೆಗಳು ವಹಿಸುವ ಪಾತ್ರದ ಆಗಾಧತೆಯ ಅರಿವಾಗುತ್ತದೆ.

ಬಿಂದುವಿನ ಚಲನೆಯ ಪಾತ್ರವೇ ರೇಖೆ, ರೇಖೆಗೆ ಉದ್ದವಿದೆ ಅಗಲವಿಲ್ಲ, ರೇಖೆಗೆ ಸ್ಥಾನವಿದೆ ದಿಕ್ಕು ಇದೆ ಎಂದು ನಾವು ಜ್ಯಾಮಿತಿಯ ಅಭ್ಯಾಸದಿಂದ ತಿಳಿದಿದ್ದೇವೆ. ರೇಖೆಯೊಂದು ತನ್ನ ಆಂತರಿಕ ಚಲನೆಯ ದಿಕ್ಕನ್ನು ಬದಲಿಸಿ ಚಲಿಸಿದಾಗ ಸಮತಲದ ಸೃಷ್ಟಿಯಾಗುತ್ತದೆ. ರೇಖೆಗಳು ಸಮತಲದ ಪರಿಮಿತಿಯಾಗಿದ್ದು ಘನದ ಅಂಚನ್ನು ಗುರುತಿಸುತ್ತವೆ. ಸಮತಲವು ತನ್ನ ಆಂತರಿಕ ಚಲನೆಯ ದಿಕ್ಕನ್ನುಬದಲಿಸಿ ಚಲಿಸಿದಾಗ ಘನವನ್ನು ಉಂಟುಮಾಡುತ್ತದೆ.

ಅದ್ಭುತ ಹಾಗೂ ಅನ್ಯಾದೇಶ ವರ್ಣರಂಜಿತ ಭಿತ್ತಿ ಚಿತ್ರಗಳೆಂದು ವಿಶ್ವವಿಖ್ಯಾತವಾದ ಅಜಂತಾ ಎಲ್ಲೋರಾ ಮೊದಲಾದ ಭಾರತದ ಗುಹಾಂತರ ದೇವಾಲಯಗಳ ಗೋಡೆಗಳನ್ನು ಅಲಂಕರಿಸಿದ ಚಿತ್ರಕಲಾಕೃತಿಗಳು ರಜಪೂತ, ಮೊಗಲ್, ಪರ್ಷಿಯನ್, ಹಾಗೂ ದಖಿನ್ ಚಿತ್ರಕಲಾಕೃತಿಗಳು, ಹಸ್ತಪ್ರತಿಗಳಲ್ಲಿ ಚಿತ್ರಿತವಾದ ಬಹುವರ್ಣ ಚಿತ್ರಗಳೇ ಮೊದಲಾದವುಗಳೆಲ್ಲ "ರೇಖಾ ಪ್ರಧಾನ" ಕಲಾಕೃತಿಗಳೇ ಆಗಿರುತ್ತವೆ ಎಂಬುದನ್ನು ವೀಕ್ಷಣೆ ಮಾತ್ರದಿಂದಲೇ

ಗಮನಿಸಬಹುದಾಗಿದೆ. ಅದರಂತೆಯೇ ಕರ್ನಾಟಕದ ಕೊಪ್ಪಳ, ಬಳ್ಳಾರಿ, ಬಾದಾಮಿ, ಶ್ರವಣಬೆಳಗೊಳ, ಶಿರಾ, ಹಿರಿಯೂರು, ಹಂಪಿ, ರಾಯಚೂರು, ಗುಲಬರ್ಗಾ, ಬೀದರ, ಬಿಜಾಪುರ, ಯಾದಗಿರಿ, ಶ್ರೀರಂಗಪಟ್ಟಣ, ತುಮಕೂರು, ಕೆರೆಗೋಡಿ ರಂಗಾಪುರ (ತಿಪಟೂರು), ನರಗುಂದ, ನಿಪ್ಪಾಣಿ ಮೊದಲಾಗಿ ವಿವಿದೆಡೆಗಳಲ್ಲಿ ಕಂಡುಬರುವ ವರ್ಣರಂಜಿತ ಭಿತ್ತಿಚಿತ್ರಗಳೂ ಇದಕ್ಕೆ ಹೊರತಾಗಿಲ್ಲ. ರಾಯಚೂರಿನ ಖಾಜನಗೌಡನ ಮನೆಯ ಗೋಡೆಗಳನ್ನು ಅಲಂಕರಿಸಿದ ಭಿತ್ತಿಚಿತ್ರಗಳಂತೂ ಸ್ಪುಟವಾದ ರೇಖೆಗಳನ್ನು ಬಳಸಿಯೇ ಚಿತ್ರಿಸಿದ್ದು, ಅವಕಾಶಗಳಲ್ಲಿ ಬಣ್ಣಗಳನ್ನು ಲೇಪಿಸಲಾಗಿದೆ. ಇವುಗಳನ್ನು ಸಂಪೂರ್ಣ ರೇಖಾ ಚಿತ್ರಕಲಾಕೃತಿಗಳೆಂದೇ ಹೇಳಬಹುದಾಗಿದೆ.

ಭಾರತೀಯ ಶ್ರೇಷ್ಠತೆಯ ಕಲಾಶೈಲಿ ಎಂದು ವಿಶ್ವವೇ ಗುರುತಿಸಿದ, ಎಲ್ಲರ ಮೆಚ್ಚಿನ ಅಜಂತಾ, ಕಾಂಗ್ರಾ ಮೊಘಲ ಹಾಗೂ ದಖನ್ ಚಿತ್ರಕಲಾಕೃತಿಗಳು ಕರ್ನಾಟಕದ ಶೈವ, ವೈಷ್ಣವ, ಜೈನ ಧಾರ್ಮಿಕ ಹಸ್ತಪ್ರತಿಗಳಲ್ಲಿ ಚಿತ್ರಿತವಾದ ಚಿತ್ರಕಲಾಕೃತಿಗಳೂ ರೇಖಾ ಪ್ರಧಾನವಾದದ್ದು, ಅವುಗಳಲ್ಲಿ ರೇಖಾಲಾಲಿತ್ಯ ಅಲಂಕಾರ ವೈಖರಿ ಸೂಕ್ಷ್ಮಾತಿಸೂಕ್ಷ್ಮ ವಿವರಗಳನ್ನು ರೇಖೆಗಳ ಮೂಲಕವೇ ಅಭಿವ್ಯಕ್ತಿಸಿದುದು ಅಸಾಮಾನ್ಯವಾದುದುಗಿದೆ. ಭಾರತದ ಇನ್ನೊಂದು ವಿಶ್ವವಿಖ್ಯಾತ ಕಲಾಶೈಲಿ ಎನಿಸಿದ ತಂಜಾವೂರು ಕಲಾಕೃತಿಗಳಲ್ಲಿ ಗಾಜಿನಚೂರು, ಬಂಗಾರದಂತಹ ಅತ್ಯಂತ ತೆಳು ಹಾಳೆಗಳನ್ನು ವಿಪುಲವಾಗಿ ಬಳಸಿದ್ದರೂ, ಸ್ಥೂಲವಾಗಿ ಚಿತ್ರಿತವಾದ ರೇಖೆಗಳನ್ನು ಪ್ರಮುಖವಾಗಿ ಕಾಣಬಹುದಾಗಿದೆ.

ಭಾರತೀಯ ಚಿತ್ರಕಲಾ ಸಂದರ್ಭದಲ್ಲಿ ವರ್ಣಚಿತ್ರ ಬೇರೆ, ರೇಖಾಚಿತ್ರ ಬೇರೆ ಎಂದು ವಿಂಗಡಿಸಲು ಸಾಧ್ಯವಿಲ್ಲದಂಥ ಅವಿನಾಭಾವ ಸಂಬಂಧವಿರುತ್ತದೆ. ಕೆಲವು ಕಲಾವಿದರು ತಮ್ಮ ಪ್ರತಿಭಾಪೂರ್ಣ ಕಲಾಕೃತಿಗಳನ್ನು ರೇಖಾಚಿತ್ರಗಳಿಂದಲೇ ರಚಿಸಿ ಚಿತ್ರಕಲಾ ಕ್ಷೇತ್ರದಲ್ಲಿ ಪ್ರಸಿದ್ಧಿ ಹೊಂದಿರುವುದು ದಾಖಲೆಗಳಿಂದ ತಿಳಿಯಬಹುದಾಗಿದೆ.

ಭೂದೃಶ್ಯಗಳು

ಗ್ರಾಮೀಣ ನೆಲಕ್ಕೆ ಅಥವಾ ಪ್ರಕೃತಿಗೆ ಹತ್ತಿರವಾದ ಅಭಿವ್ಯಕ್ತಿಗೆ ಲ್ಯಾಂಡ್‌ಸ್ಕೇಪ್

ಎಂದು ೧೫ನೇಯ ಶತಮಾನದಿಂದ ಕರೆಯಲಾಗುತ್ತದೆ. ಗ್ರಾಮೀಣದೃಶ್ಯ ಎಂಬರ್ಥದ ಡಚ್ ಪದದಿಂದ ಕನ್ನಡದಲ್ಲಿ (*Landscape*) ಪದ ಹುಟ್ಟಿಕೊಂಡಿದೆ. ದೃಶ್ಯಗಳ ಅಲಂಕೃತ ಚಿತ್ರಣಗಳಂಥ ಇಂದು ನಾವು (*Landscape*) ಎಂದು ಕರೆಯುವ ಭೂದೃಶ್ಯ ರೋಮನ್ನರ ಕಾಲದಿಂದಲೂ ಕಾಣಿಸಿಕೊಂಡಿವೆ.

ಮಧ್ಯಕಾಲೀನ ಯುಗದಲ್ಲೂ ಮುಂದುವರಿದ ಈ ಚಿತ್ರಗಳು ಶತಶತಮಾನಗಳ ಸ್ಥಿತ್ಯಾಂತರದಲ್ಲಿಯೂ ಕೆಲವೇ ಮಾತ್ರ ಉಳಿದುಕೊಂಡಿದೆ. ಆದರೆ ಭೂದೃಶ್ಯ ಚಿತ್ರಣದ ತನ್ನದೇ ಆದ ಪೂರ್ಣ ಸ್ವತಂತ್ರ ಅಸ್ತಿತ್ವವನ್ನು ಕಂಡುಕೊಂಡದ್ದು ಪುನರುಜ್ಜೀವನ (೧೫-೧೬ನೆಯ ಶತಮಾನ) ಕಾಲದಲ್ಲಿ. ಡಚ್ ಭಾವಚಿತ್ರಗಳ ಹಿನ್ನಲೆಯಲ್ಲಿ ಭೂ ದೃಶ್ಯಗಳನ್ನು ಚಿತ್ರಿಸಿ ಆನಂದಿಸುವ ಅಭ್ಯಾಸ ಆರಂಭವಾಗಿದ್ದು ೧೬ನೆಯ ಶತಮಾನದಲ್ಲಿ ಡಚ್ ಕಲಾವಿದರು ಭೂದೃಶ್ಯಗಳನ್ನೇ ವಿಶೇಷವಾಗಿ ಚಿತ್ರಿಸುವ ಪರಿಣತಿ ಪಡೆಯಲು ಪ್ರಯತ್ನಿಸಿದರೆನ್ನಬಹುದು.

೧೭ನೆಯ ಶತಮಾನದಲ್ಲಿ ಡಚ್ ಕಲಾವಿದರಾದ ರೇಸ್‌ಡೇಲ್ ಮತ್ತು ಕುಯ್ಪಿ ಹಾಗೂ ಫ್ರೆಂಚ್ ಸಂಜಾತರಾಗಿ ಇಟಲಿಯಲ್ಲಿ ನೆಲೆಗೊಂಡಿದ ಕ್ಲಾಡೆ ಮತ್ತು ಪೇರ್ಸಿಸ್ ಅಂದಿನ ಸಾಹಿತ್ಯದ ಸಂದರ್ಭಗಳ ಭೂದೃಶ್ಯಗಳನ್ನು ಚಿತ್ರಿಸಿದರು. ೧೮ನೇ ಶತಮಾನದಲ್ಲಿ ಇವುಗಳ ಪ್ರಾಮುಖ್ಯತೆ ಹೆಚ್ಚಿತು. ಭಾವಚಿತ್ರಗಳ ಹಿನ್ನೆಲೆಗೆ ಸುಂದರ ಭೂದೃಶ್ಯಗಳು ಪ್ರೆಟ್ರೇಟ್ ಲ್ಯಾಂಡ್‌ಸ್ಕೇಪ್ ಸಂಯೋಜಿಸಲ್ಪಟ್ಟಿರುತ್ತಿದ್ದವು.

ಇಂಥ ಭೂದೃಶ್ಯ ವಿಭಾಗ ಇಟಲಿಯ ಕಲಾವಿದರಾದ ಕಾನ್‌ಲೆಟ್ಟೋ, ಪಾಣಿನಿ, ಗುಆರ್ಡಿ ಜರ್ಮನಿಯ ಬಾಕೋಬ್ ಫಿಲಿಪ್ ಹಾರ್ಕರ್ಟ, ಫ್ರಾನ್ಸಿಸ್ ಹ್ಯೂಬರ್ಟ್ ರಾಬರ್ಟ್ ಮತ್ತು ಕ್ಲಾಡೆ ಜೊಸೆಫ್ ವೆರ್‌ನೆಟಕವರುಗಳಲ್ಲಿ ಕಾಣಿಸಿಕೊಂಡಿತ್ತು. ಭೂದೃಶ್ಯ ಚಿತ್ರ ವಿಭಾಗದ ಸಂಪೂರ್ಣ ಫಲ ೧೮ನೆಯ ಶತಮಾನದ ಅಂತಿಮ ದಶಕಗಳಲ್ಲಿ ಹಾಗೂ ೧೯ನೆಯ ಶತಮಾನದ ಉದ್ದಕ್ಕೂ ಕಾಣಿಸಿಕೊಂಡಿತ್ತು. ಇಂಗ್ಲೆಂಡಿನ ಕಾನ್ಸ್‌ಟೆಬಲ್ ಟರ್ನ್‌ರ್, ಜರ್ಮನಿಯ ಫೆಡ್ರಿಕ್ ಮತ್ತು ಇಂಪ್ರೆಷನಿಸ್ಟ ಕಲಾವಿದರನ್ನು ಉದಾಹರಿಸಬಹುದು.

೧೯ನೆಯ ಶತಮಾನದ ಪಶ್ಚಿಮ ರಾಷ್ಟ್ರಗಳ ಹಾಗೂ ನಮ್ಮ ದೇಶದ ಚಿತ್ರಾಲಂಕೃತ ಹಸ್ತಪ್ರತಿಗಳಲ್ಲಿ ಭೂ ದೃಶ್ಯಗಳನ್ನು ಮಾನವಾವತಾರಗಳ ಹಿನ್ನೆಲೆಗೆ ತೊಡಗಿಸಿಕೊಳ್ಳಲಾಗಿದೆ. ನಮ್ಮ ಮಿನಯೇಚರ ಚಿತ್ರಗಳಲ್ಲಿ ಭೂದೃಶ್ಯಗಳು ಸುಂದರವಾಗಿ ವೈವಿಧ್ಯಮಯವಾಗಿ ಕಾಣಿಸಿಕೊಂಡಿದೆ. ೧೯ನೆಯ ಶತಮಾನದ ಅಂತ್ಯ ಹಾಗೂ ೨೦ನೇ ಶತಮಾನದ ಆರಂಭದಲ್ಲಿ ಭಾರತದ ರಾಜಾ ರವಿವರ್ಮನ ತೈಲವರ್ಣ ಚಿತ್ರಗಳೇ ಅಲ್ಲದೆ ಓಲಿಯೋಗ್ರಾಫ್ ಕೃತಿಗಳಲ್ಲೂ ಭೂದೃಶ್ಯಕಲೆ ವೈಭವೀಕರಣಗೊಂಡಿದೆ. ಆದರೆ ಇಲ್ಲೂ ಮಾನವ ರೂಪಗಳ ಹಿನ್ನೆಲೆಯಲ್ಲಿ ಭೂದೃಶ್ಯಗಳು ಕಾಣಿಸಿಕೊಂಡವು.

ಬಂಗಾಳದ ಪುನರುಜ್ಜೀವನ ಕಾಲದ ಕಲೆಯಲ್ಲೂ ನಂತರದ ಪಶ್ಚಿಮದ ಪ್ರಭಾವ ದೇಶಿಯ ಕಲಾವಿದರ ಮೇಲೂ ಆಯಿತು. ಇದೇ ರೀತಿ ಬಸವಕಲ್ಯಾಣದ ವಸ್ತು ಸಂಗ್ರಹಾಲಯದಲ್ಲಿಯು ಕೂಡಾ ಭೂದೃಶ್ಯಗಳ ಕಲಾಕೃತಿಗಳನ್ನು ಸಂಗ್ರಹಿಸಲಾಗಿದೆ.[೨] ಈ ಕಲಾಕೃತಿಯು ತೈಲವರ್ಣದಾಗಿದ್ದು ಅಲ್ಲಿನ ಭೂದೃಶ್ಯಗಳನ್ನು ಚಿತ್ರಿಸಲಾಗಿದೆ.

ಬಸವಕಲ್ಯಾಣದ ವಸ್ತು ಸಂಗ್ರಹಾಲಯದಲ್ಲಿನ ಆಕರ್ಷಕ ಭೂದೃಶ್ಯ ಚಿತ್ರಗಳಲ್ಲಿ ಕರ್ನಾಟಕದ ಹೆಸರಾಂತ ಕಲಾವಿದ ಶ್ರೀ ರುಮಾಲೆ ಚನ್ನಬಸವಯ್ಯ, ಹಳದಿ ಹೂವಿನ ವೃಕ್ಷ ಪ್ರಧಾನವಾಗಿ ಕಾಣುವ ಚಿತ್ರ ಇದಾಗಿದ್ದು, ಬಿಸಿಲಿನ ಜಳದಲ್ಲಿ ನೆರಳು ಬೆಳಕಿನ ಪ್ರಭಾವ ಹಿನ್ನೆಲೆಯಲ್ಲಿ ದೂರದ ಮರಗಳ ರಚನೆ ಉತ್ತಮವಾಗಿ ಸಂಯೋಜನೆಯಾಗಿದೆ. ಚಿತ್ರದ ಕೇಂದ್ರದಲ್ಲಿ ಹಳದಿ ಹೂವಿನ ಮರದ ಚಿತ್ರವಿದ್ದು, ಕುಂಚದ ಹೊಡೆತಗಳಲ್ಲಿ ನಿರೂಪಿಸಿರುವ ಅವರ ತಂತ್ರಗಾರಿಕೆ ಮೆಚ್ಚುವಂತಹದು ಮರದ ಕೆಳಭಾಗದ ನೆರಳು ಬೆಳಕಿನ ಚೆಲ್ಲಾಟ ಬಳಸಿದ ವಿವಿಧ ಹಳದಿ ವರ್ಣ ಬಿಸಿಲಿನ ನಿರೂಪಣೆ ಜೊತೆಗೆ ನೆರಳಿನ ಭಾಗಕ್ಕೆ ನೇರಳೆ ವರ್ಣವನ್ನು ಯಶಸ್ವಿಯಾಗಿ ಬಳಸಲಾಗಿದೆ.

ಈ ಕಲಾಕೃತಿ ನೋಡಿದೊಡನೆ ಪಾಶ್ಚಾತ್ಯ ಇಂಪ್ರೆಷನಿಸಂ, ಕಲಾವಿದನಾದ ವ್ಯಾನಗಾಗ್ ಕಲಾಕೃತಿಗಳ ನೆನಪು ಬರುತ್ತದೆ. ಇಲ್ಲಿ ಬಳಸಿದ ಹಳದಿ ವರ್ಣಗಳ ವೈವಿಧ್ಯತೆ, ಕುಂಚದ ಬೀಸುವಿನೊಡನೆ ಬಿಸಿಲು ನೆರಳಿನ ಕಣ್ಣಾಮುಚ್ಚಾಲೆಯನ್ನು ಚಿತ್ರಿಸಿರುವ

ರೀತಿ, ಪಾಶ್ಚಾತ್ಯ ಕಲಾವಿದನಾದ ವ್ಯಾನ್‌ಗಾಗ್‌ನ ಗೋದಿಹೊಲ, ಸೂರ್ಯಕಾಂತಿ, ನೇಪ್ರಸ್, ಮತ್ತು ನಕ್ಷತ್ರಗಳು ತುಂಬಿದ ರಾತ್ರಿಯಂತಹ ಕಲಾಕೃತಿಗಳ ತಂತ್ರಗಾರಿಕೆ ಇಲ್ಲಿ ನೋಡುಗನಿಗೆ ಮರುಕಳುಹಿಸುವಂತೆ ಮಾಡಿದೆ ಎನ್ನಬಹುದು. ಒಟ್ಟಾರೆ ಕರ್ನಾಟಕ ಕಲಾವಿದರಾದ ರುಮಾಲೆಯವರ ಅನೇಕ ಹೆಸರಾಂತ ಕಲಾಕೃತಿಗಳಲ್ಲಿ ಇದು ಒಂದು ಹೆಚ್ಚು ನೆನಪಿನಲ್ಲಿ ಉಳಿಯುವಂತಹುದೆನ್ನಬಹುದು.

೨. ಬಸವ ಕಲ್ಯಾಣದ ವಸ್ತು ಸಂಗ್ರಹಾಲಯದಲ್ಲಿನ ಮತ್ತೊಂದು ಚಿತ್ರಕಲಾಕೃತಿ ಎಸ್.ಕೃಷ್ಣಪ್ಪನವರು ರಚಿಸಿದ ಕಲಾಕೃತಿಯು, ಗಾಢ ನೇರಳೆ ವರ್ಣದ ಮಧುಮಗಳೋರ್ವಳು ಕಿತ್ತಳೆ ವರ್ಣದ ರವಿಕೆ ಮತ್ತು ತೆಳು ಗುಲಾಬಿ ವರ್ಣದ ಉಡುಪುಧರಿಸಿ ನಾಚಿಕೊಂಡಂತೆ ಕಾಣುವ ಮುಖದ ಭಾವನೆ, ಎಡ ಮೊಳಕಾಲನ್ನು ಮಡಚಿ ಅಪ್ಪಿ ಹಿಡಿದು ನಾಚಿ ಕುಳಿತ ಭಂಗಿಯಲ್ಲಿದೆ. ಈಕೆಯ ತಲೆಯಿಂದ ಕಾಲಿನವರೆಗೆ ಆವರಿಸಿದ ಕೆಂಪು ವರ್ಣದ ಮೇಲು ಹೊದಿಕೆ ದಾವಣಿ ಪಾರದರ್ಶಕವಾಗಿದ್ದು ಆಕೆಯ ಮುಡಿಯಿಂದ ಪಾದದವರೆಗೂ ಇರುವ ಅಂಗಸೌಸ್ಯವವನ್ನು ಈ ಕೃತಿಯಲ್ಲಿ ಕಾಣಬಹುದಾಗಿದೆ.

ಆಕೆಯ ಹಿಂಭಾಗದಲ್ಲಿ ಶುಭಸೂಚಕವಾದ ಮತ್ತು ಆರು ಮಡಕೆಗಳ ಮೇಲೆ ಇರಿಸಿದ ತೆಂಗಿನ ಕಾಯಿಯ ರಚನೆ ಹಾಗೂ ಆಕೆಯ ಮುಂಭಾಗದಲ್ಲಿನ ತಟ್ಟೆಯೊಂದರಲ್ಲಿರುವ ಕಾಯಿ, ವೀಳ್ಯದೆಲೆಗಳಿಂದ ಕೂಡಿರುವ ಕಳಸದ ರಚನೆಯನ್ನು ಗಮನಿಸಿದಾಗ ಅದರ ಮತ್ತೊಂದು ಪಕ್ಕದಲ್ಲಿ ಬಾಳೆ ಕಂಬವಿರುವ ಹಾಗೆ ರಚಿಸಿರುವುದು ಮದುವಣಗಿತ್ತಿಯೇನೋ ಎಂಬ ಭ್ರಮೆ ಬರುತ್ತದೆ. ಚಿತ್ರದಲ್ಲಿನ ರೇಖಾ ಲಾಲಿತ್ಯ ಆಕೆಯ ಕೈ ಬೆರಳುಗಳ ರಚನೆ ಬಂಗಾಳದ ಕಲಾವಿದರ ವಾಷ್‌ತಂತ್ರಗಾರಿಕೆ ಹಾಗೂ ಅಜಂತಾದ ಚಿತ್ರಶೈಲಿಯನ್ನು ನೆನಪಿಸುವಂತಿದೆ. ಒಟ್ಟಿನಲ್ಲಿ ಚಿತ್ರದರಚನೆ ನೋಡುಗನನ್ನು ಮಂತ್ರ–ಮುಗ್ಧನಾಗಿಸುವಲ್ಲಿ ಎರಡು ಮಾತಿಲ್ಲ.

೩. ಬಸವಕಲ್ಯಾಣದ ವಸ್ತುಸಂಗ್ರಹಾಲಯದಲ್ಲಿನ ಮತ್ತೊಂದು ಆಕರ್ಷಕ ಜಲವರ್ಣ ಮಾಧ್ಯಮದ ಭೂದೃಶ್ಯ ಶಿಥಿಲಗೊಂಡ ಹಾಳು ಹಂಪೆಯ ದೇವಾಲಯವೊಂದರ

ದೃಶ್ಯ ಇದಾಗಿದೆ. ಬಿಸಿಲಿನ ಪ್ರಭಾವ ಅಲ್ಲಿನ ಕಲ್ಲು ಇಟ್ಟಿಗೆಗಳ ಮೇಲೆ ಚೆಲ್ಲಿದಂತಿದ್ದರೇ ಅದರ ಮುಂದಿನ ಹಾಳು ಮಂಟಪಗಳ ಮೇಲೆ ಬಿದ್ದ ಬಿಸಿಲಿನ ಜಳ ಮತ್ತದರ ನೆರಳು ಅಲ್ಲಲ್ಲಿ ಹರಡಿದಂತೆ ಬಿದ್ದಿರುವ ತುಂಡು ಕಲ್ಲುಗಳು, ಇವುಗಳ ನಡುವೆ ಬೆಳೆದ ಹುಲ್ಲು, ಕಾಡುಗಿಡಗಳು, ಇವೆಲ್ಲದರ ಮುಂದೆ ಸಾಗುತ್ತಿರುವ ಕೆಂಪು ಸೀರೆಯ ಮಹಿಳೆಯೋರ್ವಳ ಚಲನಶೀಲ ನಡೆ, ಆ ನಡೆಯಂತೆಯೇ ಅನುಸರಿಸುತ್ತಿರುವ ನೆರಳು, ಕಲಾವಿದನಲ್ಲಿನ ಕುಂಚ ಪ್ರಜ್ಞೆ ರಚನೆಯಲ್ಲಿನ ಅವನ ಹಿಡಿತ ಮನೋಜ್ಞವಾಗಿದೆ ಎನ್ನಬಹುದು.

೪. ಇದೇ ವಸ್ತುಸಂಗ್ರಹಾಲಯದ ಮತ್ತೊಂದು ಕ್ಯಾನ್ವಾಸ್‌ನ ಕಲಾಕೃತಿಯಲ್ಲಿ ಬಸವಣ್ಣನ ಎರಡು ಕಿವಿಗಳ ನಡುವಿನಿಂದ ಶಿವಲಿಂಗವನ್ನು ಕಾಣುವ ಒಂದು ಸಂಪ್ರದಾಯ ನೋಟದ ಚಿತ್ರ ಇದಾಗಿದೆ. ಆಯಾತಾಕಾರದ ಈ ಚಿತ್ರ ಹಳದಿ ಮತ್ತು ಕಿತ್ತಲೆ ಬಣ್ಣ ಪ್ರಧಾನವಾಗಿ ಹೊಂದಿದ್ದು ನೇರಳೆ ಮತ್ತು ನೀಲಿ ಬಣ್ಣ ಪ್ರಧಾನವಾಗಿ ಇಲ್ಲಿ ಬಳಸಲಾಗಿದೆ.

ಶಿವಲಿಂಗದ ಜ್ಯಾಮಿತಿಕ ರಚನೆ ಇಲ್ಲಿನ ಕಮಾನು ಆಯತ ಚೌಕಗಳ ರಚನೆ ಪೂರಕವಾಗಿ ರೇಖಾ ಪ್ರಧಾನವಾದ ಈ ಚಿತ್ರದಲ್ಲಿ ಚಪ್ಪಟೆ ವಿನ್ಯಾಸದ ವರ್ಣಗಾರಿಕೆ ಈ ಕಲಾಕೃತಿಯನ್ನು ಜಾನಪದ ಶೈಲಿಗೆ ಸೇರಿಸುತ್ತದೆ. ಉತ್ತಮ ಹೊರರೇಖೆಗಳು ಚಪ್ಪಟೆ ಹಾಗೂ ಕೆಲವೇ ಮಂದವರ್ಣಗಳ ಬಳಕೆಯಲ್ಲಿ ಈ ಕಲಾಕೃತಿ ಸರಳತೆಯಿಂದ ಕೂಡಿದೆ. ಆದರೆ ಚಿತ್ರದ ಹೆಚ್ಚಿನ ಭಾಗ ಶಿಥಿಲವಾಗಿದ್ದು, ಉಳಿದ ಚಿತ್ರ ಮತ್ತು ಸಂಗ್ರಹಾಲಯದ ಬಗ್ಗೆ ಗಮನಹರಿಸಬೇಕಿದೆ.

೫. ಈ ವಸ್ತು ಸಂಗ್ರಹಾಲಯದಲ್ಲಿನ ಮತ್ತೊಂದು ಹೆಸರಾಂತ ಕಲಾವಿದರಾದ ರುಮಾಲೆಯವರ ಕಲಾಕೃತಿಯಿದ್ದು, ಜೋಡಿ ಮರಗಳ ಕೆಳಗೆ ನಾಗರಕಲ್ಲುಗಳ ರಚನೆ, ಸಂಯೋಜನೆ, ವರ್ಣಗಾರಿಕೆ, ಸ್ಥಳಾವಕಾಶವನ್ನು ಯಶಸ್ವಿಯಾಗಿ ಬಳಸಿಕೊಂಡ ರೀತಿಯು ನೋಡುಗನಲ್ಲಿ ಹೆಚ್ಚು ನೆನಪಿನಲ್ಲಿ ಉಳಿಯುವಂತಿದೆ.

ರುಮಾಲೆಯವರ ಮತ್ತದೆ ನೆರಳಿನ ಚೆಲ್ಲಾಟ ಈ ಜೋಡಿ ಮರದ ಕೊಂಬೆ

ಮತ್ತು ಎಲೆಗಳ ರಚನೆಯಲ್ಲಿ ಹಾಗೂ ನೆಲದ ಮೇಲಿನ ನೆರಳು ಬೆಳಕಿನ ರಚನೆಯಲ್ಲಿ ಕಾಣುತ್ತೇವೆ. ಭೂಪ್ರದೇಶದ ಉಬ್ಬು-ತಗ್ಗುಗಳ ನಡುವೆ ಹಸಿರಿನ ನೆಲದ ಹಾಸು, ಹೊಲದಲ್ಲಿ ಕಾಣುವ ಕಾಲು ಹಾದಿ ಇವೆಲ್ಲವನ್ನು ಗಮನಿಸದಾಗ ಇಂಪ್ರೆಷನಿಸಂ ಶೈಲಿ ರಚನೆಯನ್ನು ಮೈಗೂಡಿಸಿಕೊಂಡಿದ್ದ ರುಮಾಲೆಯವರು ನಮ್ಮ ಮನದಾಳದಲ್ಲಿ ಅಚ್ಚಳಿಯದೇ ಉಳಿಯುತ್ತಾರೆ.

೬. ಈ ವಸ್ತು ಸಂಗ್ರಹಾಲಯದ ಮತ್ತೊಂದು ವರ್ಣ ಕಲಾಕೃತಿ ಇದಾಗಿದ್ದು ವಿಭಿನ್ನ ವಸ್ತು ಹಾಗೂ ಅಪರೂಪದ ಸಂಯೋಜನಾ ವಿಧಾನವನ್ನು ಸರಳವಾಗಿ ನಿರೂಪಿಸಲಾಗಿದೆ. ಅಜ್ಞಾತ ಕಲಾವಿದನೊಬ್ಬನು ಕಲಾಕೃತಿಯಲ್ಲಿ ಶಿಥಿಲಗೊಂಡ ಕಿಟಕಿಯಿಂದ ನೋಡುವ ಹೊರದೃಶ್ಯದಂತೆ ಇದು ರಚನೆಯಾಗಿದೆ. ಹೊರ ಆವರಣದ ಗೋಡೆ ಅದರ ಮೂಲಕ ಕಾಣುವ ಸಸ್ಯರಾಶಿಯನ್ನು ಕಲಾವಿದ ವಿಭಿನ್ನವಾಗಿ ರಚಿಸಿದ್ದಾನೆ.

ಚಿತ್ರದ ಎಡಭಾಗ ಮತ್ತು ಬಲಭಾಗದ ಮೇಲ್ಭಾಗದ ಸ್ಥಳಗಳಲ್ಲಿ ಕಲಾವಿದನು ತಂತ್ರಗಾರಿಕೆಯಲ್ಲಿ ಹೊಸತನ ತೋರಲು ಪ್ರಯತ್ನಿಸಿದ್ದಾನೆ. ಇಡೀ ಚಿತ್ರ ನಾಲ್ಕು ಭಾಗಗಳಾಗಿ ಕಿಟಕಿಯಲ್ಲಿ ಅಳವಡಿಸಲಾದ ಮರದ ಹಲಗೆಗಳಿಂದ ರೂಪಿಸಲಾಗಿದೆ. ಆದೇ ಚಿತ್ರದ ಸೌಂದರ್ಯಕ್ಕೆ ಧಕ್ಕೆ ಬಾರದ ರೀತಿಯಲ್ಲಿ ಅದನ್ನು ಬಳಸಿದ ರೀತಿ ಎಲೆಗಳ ರಚನೆ ಚಿತ್ರದ ಕೇಂದ್ರಕ್ಕೆ ಪೂರಕವಾದ ಹಗ್ಗ ಒಂದನ್ನು ನೈಜವಾಗಿ ಬಿದ್ದ ರೀತಿಯಲ್ಲಿ ಕಲಾವಿದನ ಜಾಣ್ಮೆಯನ್ನು ಕಾಣುತ್ತೇವೆ.

ಮಂದವರ್ಣದಲ್ಲಿ ಇಡೀ ಕಲಾಕೃತಿ ಜೀವಂತ ಎನಿಸಿದರೂ ಕಲಾಕೃತಿಯ ಉಳಿವಿನ ಬಗ್ಗೆ ಸಂಗ್ರಹಾಲಯದವರು ಗಮನ ಹರಿಸುವ ಅವಶ್ಯಕತೆ ಇದೆ. ಪ್ರಸ್ತುತ ಮುಂಬೈನ ಹೆಸರಾಂತ ಕಲಾವಿದ ಸುಹಾಸ್ ಬಾಹುಳ್‌ಕರ್‌ರವರ ಕಲಾಕೃತಿಯನ್ನು ನೆನಪಿಸುವಂತಹ ಹಳೆಯ ಕಲಾಕೃತಿ ಇದಾಗಿದೆ.

೭. ಈ ವಸ್ತು ಸಂಗ್ರಹಾಲಯದ ಮತ್ತೊಂದು ವರ್ಣಚಿತ್ರ ತಿಳಿ ಹಳದಿ ಮತ್ತು

ಹಸಿರಿನ ಹಿನ್ನೆಲೆಯಲ್ಲಿ ಕಪ್ಪು ಗಾಢವರ್ಣದ ಗೂಳಿಯೊಂದರ ಕಲಾತ್ಮಕ, ಸೃಜನಾತ್ಮಕವಾಗಿ ರಚಿಸಿದ ಚಿತ್ರ ಇದಾಗಿದ್ದು, ಚಿತ್ರದಲ್ಲಿ ಗೂಳಿಯ ಶಕ್ತಿ ಗಾಂಭಿರ್ಯ ಮುಂತಾದ ಅಂಶಗಳು ಎದ್ದು ಕಾಣುವಂತಹ ರೇಖಾ ಪ್ರಧಾನ ಚಿತ್ರ ಇದಾಗಿದೆ. ಕಪ್ಪುಬಿಳಿಯನ್ನು ಕಲಾವಿದ ಇಲ್ಲಿ ಸೂಕ್ಷ್ಮವಾಗಿ ಯಶಸ್ವಿಯಾಗಿ ಹಾಗೂ ಅಷ್ಟು ಪರಿಣಾಮಕಾರಿಯಾಗಿ ಬಳಸಿರುವುದು ಗಮನಾರ್ಹ ಅಂಶವಾಗಿದೆ.

ದಪ್ಪಗೆರೆಯಲ್ಲಿ ರಚಿಸಿದ ನೀಳಕೊರಳಿನ ಗೂಳಿಯ ಡುಬ್ಬ ಹಾಗೂ ಕೊರಳಲ್ಲಿನ ನರಿಗೆಗಳು, ಗೂಳಿಯ ಶಕ್ತಿ ಸೌಂದರ್ಯವನ್ನು ಪ್ರದರ್ಶಿಸುವಂತಹ ನಿಂತ ನಿಲುವು, ಅದಕ್ಕೆ ಪೂರಕವಾದ ಬಾಲ, ನಿಮಿರಿನಿಂತ ಅದರ ಲಿಂಗ ಆಕರ್ಷಿಸುತ್ತಿದ್ದು, ಮೆಸಪಟೋಮಿಯಾ, ಹರಪ್ಪಾ, ಮೆಹೆಂಜೋದಾರೊ, ಮಾಯಾ ಮತ್ತು ಈಜಿಪ್ಟಿನ ನಾಗರಿಕತೆಗಳ ಗೂಳಿಯನ್ನು ಇಲ್ಲಿ ನೆನಪಿಸುವಂತಿದೆ.

ಅಧ್ಯಾಯ - ಐದು

ಬಸವಕಲ್ಯಾಣದ ವಸ್ತು ಸಂಗ್ರಹಾಲಯದ ಶಿಲ್ಪಕಲಾಕೃತಿಗಳು

ಅಧ್ಯಾಯ - ಐದು

ಬಸವಕಲ್ಯಾಣದ ವಸ್ತು ಸಂಗ್ರಹಾಲಯದ ಶಿಲ್ಪಕಲಾಕೃತಿಗಳು

'ಶಿಲ್ಪ' ಎಂಬ ಸಂಸ್ಕೃತ ಪದಕ್ಕೆ ಮೂರ್ತಿಶಿಲ್ಪ, ವರ್ಣಚಿತ್ರ, ಫಲಕ ಮುಂತಾದ ಅನೇಕ ಅರ್ಥಗಳು ಇರುವುದಲ್ಲದೆ, ಗೀತ, ವಾದ್ಯ, ನೃತ್ಯ ಮುಂತಾದ ಲಲಿತಕಲೆಗಳೆಲ್ಲವೂ ಅದರ ಅರ್ಥವ್ಯಾಪ್ತಿಯಲ್ಲಿ ಸೇರುತ್ತವೆ. ಧಾರ್ಮಿಕ ಆಚರಣೆಗಳ ಮೂಲ ಅರ್ಥವನ್ನು ಅರಿಯುವಲ್ಲಿ ಶಿಲ್ಪದ ಅರ್ಥವ್ಯಾಪ್ತಿಯೊಂದಿಗೆ ವಾಸ್ತುರಚನೆಯ ಅವಲೋಕನವೂ ಅತ್ಯಾವಶ್ಯಕವಾಗಿದ್ದು, ಇಲ್ಲಿ ವಾಸ್ತುರಚನೆಯನ್ನು ತುಸು ಗಮನಿಸಿ ಅಧ್ಯಯನ ಮಾಡಬೇಕಾಗುತ್ತದೆ. ಈ ಅವಲೋಕನದಿಂದ ಬಹುದೇವೋಪಾಸನೆಯ ಆಚರಣೆಯಲ್ಲಿ ಪರೋಕ್ಷವಾಗಿ 'ಏಕದೇವ ಪಾರಮ್ಯತೆಯು' ಪ್ರತಿಫಲಿತವಾಗುವುದನ್ನು ಕಾಣಬಹುದು.

ಭಾರತೀಯ ಶಿಲ್ಪಕಲಾ ಸಂಪತ್ತು ಅಸಾಮಾನ್ಯವಾದದ್ದು ಹಾಗೂ ಸಾದೃಶ್ಯವಾದದ್ದು. ಶಿಲ್ಪತಯಾರಿಕೆಯಲ್ಲಿ ಭಾರತೀಯರು ತೋರಿರುವಷ್ಟು ಉತ್ಸಾಹ, ಕಾಳಜಿ, ಪ್ರಯತ್ನ ಪ್ರಾಯಶಃ ಪ್ರಪಂಚದ ಇನ್ನಾವುದೇ ಶಿಲ್ಪಕಲೆಯಲ್ಲಿ ಕಂಡುಬರುವುದಿಲ್ಲವೆನ್ನುವ ವಿಚಾರ ನಿಜಕ್ಕೂ ಆಶ್ಚರ್ಯಕರ. ಭಾರತೀಯರು ತಯಾರಿಸಿರುವ ಶಿಲಾಶಿಲ್ಪಗಳು, ಲೋಹ ಶಿಲ್ಪಗಳು, ಅವುಗಳ ಸಂಖ್ಯೆಯಲ್ಲಿ ಭಾರತವು ಪ್ರಪಂಚದ ಯಾವುದೇ ರಾಷ್ಟ್ರ ಶಿಲ್ಪಗಳಿಗಿಂತ ಹೆಚ್ಚಿನ

ಸಂಖ್ಯೆಯಲ್ಲಿದೆ ಎಂಬುದು ಗಮನಾರ್ಹ ಅಂಶ. ಇಷ್ಟೊಂದು ಅಗಾಧವಾದ ಶಿಲ್ಪ ಸಂಖ್ಯೆಯನ್ನೂ, ದೀರ್ಘವಾದ ಪರಂಪರೆಯನ್ನು ಭಾರತೀಯ ಶಿಲ್ಪಕಲೆ ಹೊಂದಿದೆ ಎಂದರೆ ಅದು ನಾವೆಲ್ಲರೂ ಹೆಮ್ಮೆಪಡಬೇಕಾದ ಅಂಶ.

"ಭಾರತೀಯ ಶಿಲ್ಪದ ಉಗಮ ಮತ್ತು ವಿಕಾಸಗಳಿಗೆ ಇಲ್ಲಿನ ಧಾರ್ಮಿಕ ಭೂಮಿಕೆಯು ಮಹತ್ತರವಾದ ಕಾಣಿಕೆಯನ್ನು ನೀಡಿದೆ. ಪ್ರಮುಖವಾಗಿ ಆಯಾ ಕಾಲದ ಧಾರ್ಮಿಕ ಅವಶ್ಯಕತೆಗಳನ್ನು ಪೂರೈಸುವ ವಸ್ತುಗಳಾಗಿ ರೂಪುಗೊಂಡಿವೆ. ಶಿಲ್ಪದ ನಿರೂಪಣೆಗೆ ಆಯಾಕಾಲದ ಧಾರ್ಮಿಕ ಸಾಹಿತ್ಯ, ಕಲಾತ್ಮಕತೆ ಮತ್ತು ತಂತ್ರಜ್ಞತೆಗಳು ಪ್ರತ್ಯಕ್ಷವಾಗಿ ಪ್ರಭಾವ ಬೀರುತ್ತವೆ. ಅಂತೆಯೇ, ಧರ್ಮ ಮತ್ತು ಕಲೆಗಳು ಒಂದು ನಾಣ್ಯದ ಎರಡು ಮುಖಗಳಿದ್ದಂತೆ. 'ಕಲೆ' ಎಂಬ ಮಹಾವೃಕ್ಷವನ್ನು ನೀರೆರೆದು ಪೋಷಿಸಿ, ಬೆಳೆಸಿದ ಅಮೃತವಾಹಿನಿಯೇ 'ಧರ್ಮ'. ಧರ್ಮವು ತನ್ನ ಅಸೀಮ ಕಲ್ಪನೆಯಿಂದ ಅಪಾರ ಸಾಹಿತ್ಯವನ್ನು ನೀಡಿ ಕಲಾಕ್ಷೇತ್ರವನ್ನು ಬೆಳೆಸಿ ಪೋಷಿಸಿದೆ.

ಅಂತೆಯೇ ಅಮೂರ್ತವಾದ ಧಾರ್ಮಿಕ ಭಾವನೆ-ಕಲ್ಪನೆಗಳಿಗೆ ಸಾಕಾರರೂಪವನ್ನು ನೀಡುವಲ್ಲಿ ಕಲೆಯ ಪಾತ್ರ ಬಹು ಹಿರಿದು. ಭಾರತದ ಮಟ್ಟಿಗಂತೂ, ಕಲೆಯ ಹಲವು ಮಜಲುಗಳನ್ನು ನೀರೆರೆದು ಪೋಷಿಸಿದುದು ಧರ್ಮವೇ ಎಂಬುದು ನಿರ್ವಿವಾದ. ಶಿಲ್ಪ, ವಾಸ್ತು, ಸಂಗೀತ ಮತ್ತು ನೃತ್ಯ ಮುಂತಾದ ವಿವಿಧ ಕ್ಷೇತ್ರಗಳಿಗೆ ಧಾರ್ಮಿಕ ಸಾಹಿತ್ಯವು ಅಪಾರ ವಸ್ತುವನ್ನು ಒದಗಿಸಿದೆ. ಅಂತೆಯೇ ಭಾರತೀಯ ಕಲೆಯು ಭಕ್ತಿಯ ಅಂತರ್ಯವನ್ನು ಹೊಂದಿದ್ದು, ವಿಶ್ವದ ಇತರ ರಾಷ್ಟ್ರಗಳ ಕಲೆಗಳಂತೆ ಕೇವಲ ಮನೋರಂಜಕ ಸಾಧನವಾಗದೆ ಆರಾಧನೆಯ ಒಂದು ಪ್ರಕಾರವಾಗಿ ರೂಪುತಳೆದಿದೆ.

ಮಾನವನ ಬದುಕಿನ ಅನೇಕ ಪರಿಣಾಮಕಾರಿ ಕ್ಷೇತ್ರಗಳಲ್ಲಿ 'ಕಲೆ ಮತ್ತು ಧರ್ಮ' ಬಹು ಪ್ರಭಾವಶಾಲಿಯಾದ ಅಭಿವ್ಯಕ್ತಿಗಳು. ಪ್ರಖ್ಯಾತ ಕಲಾಮೀಮಾಂಸಕರಾದ 'ಆನೆಸಾಕಿ'ಯವರು ಕಲೆ ಮತ್ತು ಧರ್ಮದ ಬಗೆಗೆ ಬರೆಯುತ್ತಾ, 'ಕಲೆ ಮತ್ತು ಧರ್ಮ'ಗಳು ಮಾನವನ ಬದುಕಿನ ಬಹು ಸತ್ವಶಾಲಿ ಪ್ರಕಾರಗಳು. ಧರ್ಮವೆಂಬುದು ಮಾನವನ

ಅಂತಸ್ಸತ್ವವನ್ನು ಪ್ರಚೋದಿಸಿ ಅದನ್ನು ಪ್ರೇರೇಪಿಸಿ ಜೀವಂತಿಕೆಯತ್ತ ಕೊಂಡೊಯ್ಯುತ್ತದೆ. ಕ್ರಿ.ಶ. ೫–೬ನೇ ಶತಮಾನಗಳ ಗಣಿತಶಾಸ್ತ್ರಜ್ಞನಾದ 'ವರಾಹಮಿಹಿರ'ನು ತನ್ನ 'ಬೃಹತ್‌ಸಂಹಿತಾ' ಎಂಬ ಗ್ರಂಥದಲ್ಲಿ 'ಶಿಲ್ಪಗಳಲ್ಲಿ ದೇಶ–ಕಾಲಗಳ ಉಡುಗೆ ತೊಡುಗೆಗಳು ಸಂಭವನೀಯ' ಎಂದು ಹೇಳುವ ಮಾತುಗಳು ಆಧುನಿಕ ಇತಿಹಾಸಜ್ಞರೂ ಮೆಚ್ಚಬೇಕಾದ ಅಂಶವಾಗಿದೆ. ಸುದೀರ್ಘ ಇತಿಹಾಸವನ್ನು ಹೊಂದಿರುವ ಭಾರತೀಯ ಶಿಲ್ಪ ಪರಂಪರೆ ವಿಸ್ತೃತ ಅಧ್ಯಯನವನ್ನು ನಾವು ಅದಕ್ಕೆ ಸಲ್ಲಬೇಕಾದ ರೀತಿಯಲ್ಲಿ ಮಾಡಿಲ್ಲವೆಂದೇ ಹೇಳಬೇಕು.

ಕ್ರಿ.ಶ.೧೯-೨೦ನೇ ಶತಮಾನಗಳಲ್ಲಿ ಪಾಶ್ಚಾತ್ಯ ವಿದ್ವಾಂಸರು ಭಾರತೀಯ ಶಿಲ್ಪಗಳ ಅಧ್ಯಯನವನ್ನು ಅವರದ್ದೇ ಆದ ರೀತಿಯಲ್ಲಿ ಮಾಡಿದರು ಅವರು ಅನುಸರಿಸಿದ ಹಾದಿಯನ್ನೇ ಭಾರತೀಯ ವಿದ್ವಾಂಸರು ಸಹ ತುಳಿದು ಅಥವಾ ತುಳಿಯುತ್ತಾ ಭಾರತೀಯ ಶಿಲ್ಪಕಲೆಯ ಅಧ್ಯಯನವನ್ನು ಮಾಡಿದ್ದಾರೆ, ಈಗಲೂ ಮಾಡುತ್ತಾ ಬಂದಿದ್ದಾರೆ.

ಈ ಎಲ್ಲಾ ಅಧ್ಯಯನಗಳೂ ಕೇವಲ ಸಾಂಪ್ರದಾಯಿಕ ರೀತಿಯದ್ದೆನಿಸುತ್ತದೆ. ಸಾಂಪ್ರದಾಯಿಕ ಅಧ್ಯಯನ ರೀತಿಯೆಂದರೆ ಶಿಲ್ಪಗಳನ್ನು ಅವುಗಳ ಕಂಡ ವಿಧಾನದ ಮೇಲೆ, ವಸ್ತು ವಿಷಯದ ಆಧಾರದ ಮೇಲೆ, ಕಾಲ, ದೇಶ, ಪ್ರಾಂತ್ಯಗಳ ಆಧಾರದ ಮೇಲೆ, ಅವುಗಳ ತಯಾರಾದ ಕಾಲದ ರಾಜವಂಶಗಳ ಹೆಸರಿನ ಆಧಾರದ ಮೇಲೆ, ಅವುಗಳ ಜಾತಿ ಪಂಥಗಳ ಆಧಾರದ ಮೇಲೆ, ಹೀಗೆ ವಿವಿಧ ಉಪಾಧಿಗಳನ್ನಿಟ್ಟುಕೊಂಡು ಅಧ್ಯಯನ ಮಾಡಿದ್ದಾರೆ.

ಭಾರತೀಯ ಸಂಸ್ಕೃತಿಯ ಬಹುಪಾಲು ಶಿಲ್ಪಗಳಲ್ಲಿ ಸ್ವೀಕೃತವಾಗಿರುವ ಧಾರ್ಮಿಕ ಸಿದ್ಧಾಂತವು (ಆಗಮ, ಸಿದ್ಧಾಂತ ಮುಂತಾದ ನಿಯಂತ್ರಣಗಳ ಪ್ರಭಾವವು) ಪ್ರತಿಫಲನ ಗೊಳ್ಳುತ್ತದಾದರೂ, ಅದರಲ್ಲಿ ಶಿಲ್ಪಿಯ ಸ್ವಂತಿಕೆ ಹಾಗೂ ಸಮಕಾಲೀನ ಕಲಾತ್ಮಕ ದೃಷ್ಟಿಕೋನಗಳಿಗೂ ಸ್ವಲ್ಪಮಟ್ಟಿನ ಸ್ವಾತಂತ್ರ್ಯವಿರುವುದು ವ್ಯಕ್ತವಾಗುತ್ತದೆ. ಆದರೆ, ಇಲ್ಲಿ ಸ್ವಾತಂತ್ರ್ಯಕ್ಕಿಂತ ಸ್ವೀಕೃತ ಧಾರ್ಮಿಕ ಸಿದ್ಧಾಂತಕ್ಕೆ ಪ್ರಥಮ ಪ್ರಾಶಸ್ತ್ಯ ಎನ್ನುವುದನ್ನು

ಮರೆಯುವಂತಿಲ್ಲ. ಆದರೂ ತನ್ನ ಸ್ವಂತಿಕೆಯ ಸಿಂಚನದಿಂದ ಶಿಲ್ಪದಲ್ಲಿ ಹೊಸತನ ಮೂಡಿಸುವ ಶಿಲ್ಪಿಯ ಪ್ರಯತ್ನವು ಶಿಲ್ಪದ 'ಶೈಲಿಯ' ವಿಕಾಸಕ್ಕೆ ಕಾರಣವಾಗುತ್ತದೆ. ಈ ವಿಕಾಸವು ಆಯಾ ವಿಕಸನದ ಕಾಲಘಟ್ಟಗಳನ್ನೂ ಪರೋಕ್ಷವಾಗಿ ಪ್ರತಿಫಲಿಸುತ್ತದೆ.

ಅನೇಕ ವೇಳೆ ಈ ವಿಕಾಸಗಳು ದೇಶ-ಕಾಲಗಳ ಹಾಗೂ ಶಿಲಾಮಾಧ್ಯಮ ಮತ್ತು ತಂತ್ರಜ್ಞತೆಗಳ ಎರಕದಲ್ಲಿ ರೂಪುಗೊಂಡು ಹೊಸ ಶೈಲಿಗಳಾಗಿ ಕಾಣಿಸಿಕೊಳ್ಳುತ್ತವೆ. ಇಂತಹ ಶೈಲಿಗಳು ದಿಢೀರನೆ ಹುಟ್ಟಿಕೊಳ್ಳಲು ಸಾಧ್ಯವಿಲ್ಲ, ಇದು ಒಂದು ದೇಶದ ಭಾಷೆ ಮತ್ತು ಲಿಪಿಗಳಂತೆ ನಿರಂತರ ವಿಕಾಸದಿಂದ ರೂಪುಗೊಳ್ಳುವ ಅಂಶವಾಗಿದೆ.

ಒಟ್ಟಾರೆ ಶಿಲ್ಪಗಳು ಕೇವಲ ಮೇಲುನೋಟಕ್ಕೆ ಕಾಣುವ ನಿರ್ಜೀವ ಪ್ರತಿಮೆ-ಗಳಾಗಿರದೆ, ಸಮಕಾಲೀನ ಧಾರ್ಮಿಕ ಮತ್ತು ಸಾಮಾಜಿಕ ಆಶಯಗಳನ್ನು ಪ್ರತಿಫಲಿಸುವ ಐತಿಹಾಸಿಕ ಆಕರಗಳಾಗಿರುವುದು ವ್ಯಕ್ತವಾಗುತ್ತದೆ.

"ಕರ್ನಾಟಕದ ಇತಿಹಾಸ ಮತ್ತು ಪರಂಪರೆಯಲ್ಲಿ ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪಗಳಿಗೆ ಒಂದು ಮಹತ್ವದ ಸ್ಥಾನವಿದೆ. ಯಾವುದೇ ಸಂಸ್ಕೃತಿ ಅಥವಾ ಪರಂಪರೆಗೆ ಮೂಲಭೂತವಾಗಿ ಎರಡು ಮುಖಗಳಿರುತ್ತವೆ. ಅವುಗಳೆಂದರೆ, ೧. ಅಮೂರ್ತ ಮತ್ತು ೨. ಮೂರ್ತ ರೂಪಗಳು.

ಒಂದು ಸಂಸ್ಕೃತಿಯಲ್ಲಿ ಭಾವನೆಗಳು ಅಮೂರ್ತ ರೂಪದಲ್ಲಿ ಮೊದಲು ಕಾಣಿಸಿಕೊಳ್ಳುತ್ತವೆ. 'ಅಮೂರ್ತ ರೂಪಗಳನ್ನು ಸಾಕಾರಗೊಳಿಸಿ, ಅವುಗಳಿಗೆ ಮೂರ್ತರೂಪಗಳನ್ನು ನೀಡುವುದೇ ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪಗಳ ಪ್ರಮುಖ ಗುರಿ' ಎಂದು ಹೇಳಬಹುದು. ಅಂದರೆ, ಯಾವುದೇ ಮೂರ್ತಿಶಿಲ್ಪದ ಅಧ್ಯಯನದ ಹಿನ್ನೆಲೆಯಲ್ಲಿ ಭಾವನೆಗಳ ಸಮುಚ್ಚಯ ಅಮೂರ್ತವಾಗಿ ಅಡಗಿರುತ್ತದೆ ಎಂದಾಯಿತು. ಆದುದರಿಂದ ಆಸಕ್ತಿಯುಳ್ಳವರು ಒಂದು ಪರಂಪರೆಯ ಮೂರ್ತಿಶಿಲ್ಪದ ಅಧ್ಯಯನವನ್ನು ಮಾಡುವಾಗ ಆಯಾ ಕಾಲ, ಪರಿಸರ, ಸಾಮಾಜಿಕ ನಂಬಿಕೆಗಳು, ಆಚರಣೆಗಳು ಮತ್ತು

ಇತರ ಅನೇಕ ಅಂಶಗಳನ್ನು ಗಮನಿಸಬೇಕಾದುದು ಅವಶ್ಯ. ಮೂರ್ತಿಶಿಲ್ಪದ ಅಧ್ಯಯನವು ಅದರ ಐತಿಹಾಸಿಕ ಮತ್ತು ಪಾರಂಪರಿಕ ಹಿನ್ನೆಲೆಯಲ್ಲಿಯೇ ನಡೆಯಬೇಕಾದುದು ಅನಿವಾರ್ಯ."

ಈ ಎಲ್ಲಾ ಶಿಲ್ಪಗಳ ಅಧ್ಯಯನವು ಧಾರ್ಮಿಕ ಶಿಲ್ಪಗಳಿಗೆ ಮಾತ್ರ ಮೀಸಲಾಗಿದೆ ಎನ್ನಬಹುದು. ಯಾವುದೇ ಒಂದು ಧರ್ಮದ ಶಿಲ್ಪಗಳನ್ನು ಆರಿಸಿಕೊಂಡು ಅದಕ್ಕೆ ಸಂಬಂಧಿಸಿದ ಶಾಸ್ತ್ರಗ್ರಂಥಗಳನ್ನು ಹುಡುಕಿ ಅವುಗಳಲ್ಲಿ ದೊರಕುವ ವಿವರಣೆಗಳನ್ನು ಸಂಗ್ರಹಿಸಿ ಪ್ರಸಕ್ತ ಶಿಲ್ಪದೊಂದಿಗೆ ತುಲನೆ ಮಾಡಿ ಅವುಗಳ ನಡುವಿನ ಸಾಮ್ಯವನ್ನು ಮತ್ತು ವ್ಯತ್ಯಾಸವನ್ನು ಪಟ್ಟಿಮಾಡಿ ತುಲನಾತ್ಮಕ ಅಧ್ಯಯನ ಮಾಡುವದು ಪ್ರಾಂತೀಯ ವೈಲಕ್ಷಣ ವಿಭಿನ್ನತೆಗಳನ್ನು ಗುರುತಿಸುವದು, ಶಿಲ್ಪಕಲಾ ಶೈಲಿಯ ವಿಶೇಷತೆಗಳನ್ನು ಹೇಳುವದು ಪರಸ್ಪರ ಶೈಲಾತ್ಮಕ ಭಾವಗಳನ್ನು ಅಧ್ಯಯನ ಮಾಡುವದು, ವಿವರಿಸುವದು, ಶಿಲ್ಪಕಲಾ ಬೆಳವಣಿಗೆಯನ್ನು ಕಾಲದ ಆಧಾರದ ಮೇಲೆ ನಿಗದಿಪಡಿಸುವುದು. ಕೊನೆಯದಾಗಿ ಸೌಂದರ್ಯದ ದೃಷ್ಟಿಯಿಂದ ಶಿಲ್ಪದ ಗುಣಮಟ್ಟವನ್ನು ನಿಷ್ಕರ್ಷೆ ಮಾಡುವುದು. ಇವೇ ನಮ್ಮ ಇದುವರೆಗಿನ ಶಿಲ್ಪಕಲೆಯ ಅಧ್ಯಯನದ ಮುಖ್ಯ ಉದ್ದೇಶಗಳಾಗಿವೆ ಎನ್ನಬಹುದು.

ಹೊರನಾಡಿನಿಂದ ಬಂದು ಭಾರತೀಯ ಸಂಸ್ಕೃತಿಯ ಕೇವಲ ಹೊರ ಪದರದ ಸ್ವರೂಪವನ್ನು ಮಾತ್ರವೇ ಗ್ರಹಿಸಿದ್ದ ಅಥವಾ ಅರ್ಥಮಾಡಿಕೊಂಡಿದ್ದ ಪಾಶ್ಚಾತ್ಯ ವಿದ್ವಾಂಸರ ಶಿಲ್ಪಕಲಾ ಅಧ್ಯಯನದ ಈ ರೀತಿಯ ಪರಿಕಲ್ಪನೆ ಅಂತರ ಅಧ್ಯಯನ ದೃಷ್ಟಿಯ ಮಟ್ಟಿಗೆ ಸರಿ ಎನ್ನಿಸಬಹುದು. ನರನಾಡಿಗಳಲ್ಲಿ ಭಾರತೀಯ ರಕ್ತವನ್ನು ಹೊಂದಿರುವ ನಮ್ಮ ವಿದ್ವಾಂಸರ ಶಿಲ್ಪಕಲಾ ಅಧ್ಯಯನ ಬೇರೆಯದೇ ರೀತಿಯದ್ದಾಗಿರಬೇಕಾಗುತ್ತದೆ ಎಂಬುದು ಇಲ್ಲಿ ಗಮನಿಸಬೇಕಾದ ಅಂಶ.

ಪಾಶ್ಚಾತ್ಯಕಲೆಯ ಅಧ್ಯಯನದಲ್ಲಿ ಇರುವಂತೆ ನಮ್ಮ ಶಿಲ್ಪ ಸಂಪತ್ತಿನ ಅಧ್ಯಯನವೂ ಸಹ ವೈವಿಧ್ಯಮಯ ದೃಷ್ಟಿಕೋನವನ್ನು ಹೊಂದಿರಬೇಕಾಗುತ್ತದೆ. ಮೇಲೆ ತಿಳಿಸಿದ ರೀತಿಯ ಅಧ್ಯಯನಗಳು ತೀರಾ ಸಂಪ್ರದಾಯಿಕವೆನಿಸಿದರೆ ಹೊಸ ರೀತಿಯ ಅಧ್ಯಯನದಿಂದ

ಶಿಲ್ಪಕ್ಕೆ, ಶಿಲ್ಪಿಗೆ, ಶಿಲ್ಪರಚನಾ ವಿಧಾನಕ್ಕೆ ಶಿಲ್ಪದ ಉದ್ದೇಶಕ್ಕೆ ಹಾಗೂ ಇನ್ನೂ ಅನೇಕ ತರವಾದ ವಿಷಯ ಸಂಗ್ರಹಕ್ಕೆ ಅನುಕೂಲವಾಗುತ್ತದೆ.

ಕೇವಲ ಧರ್ಮ, ಜಾತಿ, ಲೌಕಿಕ, ಸಾಮಾಜಿಕ, ಚಾರಿತ್ರಿಕ, ಧಾರ್ಮಿಕ ಮುಂತಾದ ಇನ್ನೂ ಅನೇಕ ವಿಷಯಗಳಿಗೆ ಸಂಬಂಧಿಸಿದ ಸಾಂಕೇತಿಕ ಹಾಗೂ ನಗೂಢ ಮಾಹಿತಿಗಳನ್ನು ಹೊಸ ರೀತಿಯ ಅಧ್ಯಯನ ವಿಧಾನಗಳಿಂದ ತಿಳಿಯಬಹುದಾಗಿದೆ. ಈ ಹೊಸ ರೀತಿಯ ಅಧ್ಯಯನದ ಕೆಲವೊಂದು ಮಾರ್ಗಗಳನ್ನು ವಿಧಾನಗಳನ್ನು ಈ ಕೆಳಗೆ ಪಟ್ಟಿ ಮಾಡುವ ಪ್ರಯತ್ನಮಾಡಲಾಗಿದೆ.

ಶಿಲ್ಪಕೆತ್ತನೆಯ ತಾಂತ್ರಿಕ ಅಂಶಗಳು

ಯಾವುದೇ ಒಂದು ವಸ್ತುವಿನ ತಯಾರಿಕೆಯ ಹಿಂದಿನ ತಾಂತ್ರಿಕ ಜ್ಞಾನ ಅತ್ಯಂತ ಮುಖ್ಯ. ಶಿಲ್ಪವನ್ನು ಕೆತ್ತನೆ ಮಾಡುವಾಗ ಶಿಲ್ಪದ ಸಂಪೂರ್ಣ ಗುಣಲಕ್ಷಣದ ಕಲ್ಪನೆ ಶಿಲ್ಪಿಗಿರಬೇಕು. ಅದಕ್ಕಾಗಿ ಪ್ರಾರಂಭದ ಹಂತದಿಂದಲೂ ಆತನು ಮುಂದಾ-ಲೋಚನೆಯಿಂದ ಮುನ್ನೆಚ್ಚರಿಕೆಯಿಂದ ಕಾರ್ಯನಿರ್ವಹಿಸಬೇಕು. ಎಲ್ಲರಿಗೂ ತಿಳಿದಿರುವಂತೆಯೇ ಶಿಲ್ಪ ಕೆತ್ತನೆಯ ವಿಧಾನದಲ್ಲಿ ಉಬ್ಬು ಶಿಲ್ಪ, ಪೂರ್ಣಶಿಲ್ಪ ವಿಧಾನಗಳು ಬಹಳ ಮುಖ್ಯವಾದುವು.

ಉಬ್ಬು ಶಿಲ್ಪದ ಕೆತ್ತನೆಯಲ್ಲಿ ತಾಂತ್ರಿಕ ಮುಂದಾಲೋಚನೆ ಸ್ವಲ್ಪಮಟ್ಟಿಗೆ ಕಡಿಮೆ ಏಕೆಂದರೆ ಇದರಿಂದಾಗಿ ಮುಂದೆ ಎದುರಾಗುವ ಎಡರು-ತೊಡರು ಅಲ್ಪ. ತ್ರೀ-ಆಯಾಮ(*3D*)ದ ಶಿಲ್ಪಗಳು ಕೆತ್ತನೆಯಲ್ಲಿ ಹೆಚ್ಚು ಪ್ರಯಾಸಕರ ಶಿಲ್ಪದ ಎತ್ತರ ಅಗಲಕ್ಕನುಗಣವಾಗಿ ಭಾವಭಂಗಿಗೆ ಅನುಗುಣವಾಗಿ ಅದರ ಆಳವೂ ವ್ಯತ್ಯಾಸವಾಗುತ್ತದೆ. ಶಿಲ್ಪಿಗೆ ಇದೆಲ್ಲದರ ಒಂದು ಪರಿಕಲ್ಪನೆ ಅತ್ಯವಶ್ಯಕ ಇದಕ್ಕೆ ಅನುಗುಣವಾಗಿ ಆತ ಕೆತ್ತನೆಯ ಕಾಯಕ ಪ್ರಾರಂಭಿಸಬೇಕಾಗುತ್ತದೆ. ಶ್ರವಣಬೆಳಗೊಳದ ಜಗದ್ವಿಖ್ಯಾತ ಬಾಹುಬಲಿ ೬೦ ಅಡಿ ಎತ್ತರದ ವಿಗ್ರಹ, ಬೃಹದಾಕಾರದ ಶಿಲ್ಪ ತಯಾರಿಕೆಯಲ್ಲಿ ಭಾರತೀಯ ಶಿಲ್ಪಿಗಳಿಗಿದ್ದ ಅಪ್ರತಿಮ ಕೌಶಲ್ಯಕ್ಕೆ ಸಾಕ್ಷಿಯಾಗಿದೆ.

ಕರ್ನಾಟಕ ರಾಜ್ಯದಲ್ಲಿ ಅನೇಕ ಪ್ರಖ್ಯಾತ ರಾಜವಂಶಗಳಿಗೆ ಸೇರಿದ ರಾಜ, ಮಹಾರಾಜ, ಚಕ್ರವರ್ತಿಗಳು ಆಳ್ವಿಕೆ ನಡೆಸಿದ್ದಾರೆ. ಕದಂಬ, ಗಂಗ, ಚಾಲುಕ್ಯ, ರಾಷ್ಟ್ರಕೂಟ, ಯಾದವ, ಹೊಯ್ಸಳ, ವಿಜಯನಗರ, ಕೆಳದಿ, ಮೈಸೂರು ಒಡೆಯರ ಮುಂತಾದ ರಾಜವಂಶಗಳ ರಾಜರು ತಮ್ಮ ಧೈರ್ಯ, ಶೌರ್ಯ, ರಸಿಕತೆ ಪ್ರಜಾಹಿತ ಆಡಳಿತ, ದಾನ ಧರ್ಮಕಾರ್ಯಗಳು, ಸಾಹಿತ್ಯ ಸಂಗೀತ, ವಾಸ್ತುಶಿಲ್ಪ ಇವುಗಳ ನಿರ್ಮಾಣ ಹೀಗೆ ಹಲವಾರು ರೀತಿಯ ಖೌರ್ಯಗಳಿಂದ ಜನರ ಮನಸ್ಸಿನಲ್ಲಿ ಅಚ್ಚಳಿಯದ ನೆನಪು, ಗೌರವ ಮೂಡಿಸಿದ್ದಾರೆ.

ರಾಜರುಗಳೇ ಅಲ್ಲದೇ ಸಾಮಂತರು, ಅಧಿಕಾರಿಗಳು, ಸಿರಿವಂತ ಪ್ರಜೆಗಳು ದೈವಭಕ್ತಿಯುಳ್ಳ ಸಾಮಾನ್ಯ ಜನರು ಅನೇಕ ಜನೋಪಕಾರಿ ಕಾರ್ಯಗಳನ್ನು ಎಸಗಿದುದೇ ಅಲ್ಲದೇ ಹಿಂದು, ಜೈನ, ಬೌದ್ಧ ಮುಂತಾದ ವಿವಿಧ ಧರ್ಮಗಳಿಗೆ ಸೇರಿದ ಪ್ರಜಾ ಸ್ಥಳಗಳನ್ನು ನಿರ್ಮಿಸಿದ್ದಾರೆ. ವಾಸ್ತು ಮತ್ತು ಶಿಲ್ಪಗಳ ಉತ್ಕೃಷ್ಟತೆಯ ಕೋನದಿಂದ ನೋಡಿದಾಗ, ಅನೇಕ ದೇವಾಲಯಗಳು ನೋಡುವವರನ್ನು ಅಚ್ಚರಿಗೊಳಿಸುತ್ತವೆ.

ಈ ರಾಜ್ಯವನ್ನು ಆಳಿದ ಹಲವಾರು ಪ್ರಮುಖ ರಾಜವಂಶಗಳಲ್ಲಿ ಕಲ್ಯಾಣಚಾಲುಕ್ಯರು ಒಬ್ಬರು ಕ್ರಿ.ಶ.೯೭೩ರಿಂದ ಕ್ರಿ.ಶ.೧೧೨೬ರವರೆಗೂ ಸುಮಾರು ಎರಡು ಶತಮಾನಗಳ ಕಾಲ ಆಳ್ವಿಕೆ ನಡೆಸಿದ ಈ ವಂಶದ ಅರಸರು ರಾಜಕೀಯ ಮತ್ತು ಸಾಂಸ್ಕೃತಿಕ ದೃಷ್ಟಿಯಿಂದ ಭಾರತದ ಇತಿಹಾಸದ ಪುಟಗಳಲ್ಲಿ ಅಳಿಸಲಾಗದ ಹೆಜ್ಜೆಗುರುತುಗಳನ್ನು ಮೂಡಿಸಿದ್ದಾರೆ.

ಈ ಅವಧಿಯಲ್ಲಿ ಇವರ ಸಾಮ್ರಾಜ್ಯದ ದಕ್ಷಿಣಕ್ಕಿದ್ದ ಚೋಳರೊಂದಿಗೆ ಕದನಗಳಲ್ಲಿ ನಿರತರಾಗಿದ್ದರೂ ಸಹ ಸಾಮ್ರಾಜ್ಯದಲ್ಲಿ ಶಾಂತಿ, ಸಮೃದ್ಧಿ ನೆಲಸುವಂತೆ ಮಾಡಿದ ಕಾರ್ಯಗಳಿಗೆ, ಅದರಲ್ಲೂ ಸಾಂಸ್ಕೃತಿಕ ಕ್ಷೇತ್ರದಲ್ಲಿ ಗಾಢವಾದ ಚಟುವಟಿಕೆಗಳಿಗೋಸ್ಕರ ಪ್ರಖ್ಯಾತರಾಗಿದ್ದಾರೆ. ಈ ಅವಧಿಯಲ್ಲಿ ರಾಜರೇ ಅಲ್ಲದೇ ರಾಜ್ಯದ ಶ್ರೀಮಂತರು ಮತ್ತು ಗಣ್ಯರು ಪುಣ್ಯ ಸಂಪಾದನೆ ಗಳಿಸಬೇಕೆಂಬ ತೀವ್ರವಾದ ಇಚ್ಛೆಯಿಂದ ಅನೇಕ ಪ್ರಜಾಸ್ಥಳಗಳ

ನಿರ್ಮಾಣಕ್ಕೆ ಕಾರಣರಾದರು. ಪ್ರಜಾಸ್ಥಳಗಳ ನಿರ್ಮಾಣದ ಸಂಖ್ಯೆಯ ದೃಷ್ಟಿಯಿಂದ ಈ ಅವಧಿ ಮಹತ್ವವಾದದು. ಈ ರಾಜವಂಶೀಯರ ಆಳ್ವಿಕೆಯ ಕಾಲದ ಹಿಂದಿನದು ಹಾಗೂ ನಂತರದ ಅವಧಿಗಳಿಗಿಂತ ಅತಿ ಹೆಚ್ಚು ಸಂಖ್ಯೆಯ ನಿರ್ಮಾಣ ಒಂದು ದಾಖಲೆಯನ್ನೇ ಸೃಷ್ಟಿಸಿತು. ಪ್ರಜಾ ಸ್ಥಳಗಳು ಹಿಂದೂ ಜೈನ, ಬೌದ್ಧ ಪಂಥಗಳಿಗೆ ಸೇರಿದ್ದವು.

ಕರ್ನಾಟಕ ರಾಜ್ಯದ ಉದ್ದಗಲಕ್ಕೂ ಈ ಸಂಪ್ರದಾಯ ಶೈಲಿಯಲ್ಲಿ ನಿರ್ಮಿತವಾದ ಅನೇಕ ಪ್ರಜಾಸ್ಥಳಗಳಿವೆ. ಕುಕ್ಕನೂರಿನ ನವಲಿಂಗ ಮತ್ತು ಕಲ್ಲೇಶ್ವರ ದೇವಾಲಯಗಳು ಲಕ್ಕುಂಡಿಯಲ್ಲಿನ ಕಾಶಿ ವಿಶ್ವೇಶ್ವರ ದೇವಾಲಯ ಮತ್ತು ಜೈನ ಬಸದಿ ಬೀದರ ಜಿಲ್ಲೆಯ ಜಲಸಂಗಿಯ ಶಿವದೇವಾಲಯ, ಗುಲ್ಬರ್ಗ ಜಿಲ್ಲೆಯ ಅರಳೀಕಟ್ಟೆಯ ಹನುಮದೇವಾಲಯ ಇತ್ಯಾದಿ.

ಬಾದಾಮಿ ಚಾಲುಕ್ಯರ ಕಾಲದಲ್ಲಿ ನಿರ್ಮಿತವಾದ ದೇವಾಲಯಗಳಲ್ಲಿ ಹಲವೊಮ್ಮೆ ಮಿತವಾದ ಹಲವೊಮ್ಮೆ ಅತಿಯಾದ ಅಲಂಕರಣ ಕಾಣಬರುತ್ತದೆ. ಆದರೆ ಕ್ರಿ.ಶ.೧೧-೧೨ನೇ ಶತಮಾನಗಳಲ್ಲಿ ನಿರ್ಮಿತವಾದ ಕಲ್ಯಾಣ ಚಾಲುಕ್ಯರ ದೇವಾಲಯಗಳು ಅಲಂಕಾರ ರಹಿತವಾಗಿವೆ. ಸಾಮಾನ್ಯವಾಗಿ ಈ ಕಾಲದ ದೇವಾಲಯಗಳನ್ನು ವೇಸರ ಹಾಗೂ ನಾಗರ ಶೈಲಿಯಲ್ಲಿ ನಿರ್ಮಿಸಿದೆ. ಆದರೆ ಹತ್ತರ್ಗಿಯ ಶಿವ ದೇವಾಲಯ ಹಾನಗಲ್ಲಿನ ಗಣೇಶ ದೇವಾಲಯಗಳು ರೇಖಾ ನಾಗರ ಶೈಲಿಯಲ್ಲಿವೆ.

ರಾಷ್ಟ್ರಕೂಟರ ಆಳ್ವಿಕೆಯ ನಂತರ ಕಲ್ಯಾಣಚಾಲುಕ್ಯರ ಆಳ್ವಿಕೆ ಪ್ರಾರಂಭವಾಯಿತು. ಈ ಕಾರಣದಿಂದ ರಾಷ್ಟ್ರಕೂಟ ಶೈಲಿಯ ನಂತರ ತಕ್ಷಣವೇ ಕಲ್ಯಾಣ ಚಾಲುಕ್ಯ ಶೈಲಿ ಆರಂಭವಾಯಿತಾದರೂ ರಾಷ್ಟಕೂಟರ ಶೈಲಿಯ ಸಂಪ್ರದಾಯದಿಂದ ನಿಶ್ಚಿತ ರೂಪದ ಭಿನ್ನತೆ ಕಂಡುಬರುವುದು. ರಾಷ್ಟ್ರಕೂಟರ ಕಾಲದ ವೈಶಿಷ್ಟವಾದ ಬಂಡೆಗಳಿಂದ ಕಡೆದ ಶಿಲ್ಪ ತಯಾರಿಸುವ ರೀತಿ ನಿಂತಿತ್ತು. ಕಲ್ಯಾಣ ಚಾಲುಕ್ಯರಕಾಲದ ಶಿಲ್ಪಗಳು ಬಳಸುವ ಸಾಧನ ಹಾಗೂ ಶಿಲ್ಪತಯಾರಿಕೆಯ ಕ್ರಮದಲ್ಲಿ ಬದಲಾವಣೆಗಳನ್ನು ಬಳಸಿದರು. ಇದರಿಂದ ಈ ಶೈಲಿಯನ್ನು ಅನುಸರಿಸಿದ ಶಿಲ್ಪಿಗಳಿಗೆ ವಿಶಾಲವಾದ ಶಿಲ್ಪವನ್ನು ಸಂಯೋಜಿಸಲು

ಅನುಕೂಲಕರವಾದ ಅಂಶ ನಷ್ಟವಾಯಿತು. ಮತ್ತೊಂದು ಮಹತ್ವದ ಅಂಶವೆಂದರೆ ಈ ಶೈಲಿಯನ್ನು ಅನುಸರಿಸಿದ ಶಿಲ್ಪಿಗಳು ಶಿಲ್ಪಗಳ ಕಡೆಯುವಿಕೆಗೆ ಕಗ್ಗಲನ್ನು ಬಿಟ್ಟು ಕರಿಗಲ್ಲನ್ನು ಆಯ್ಕೆಮಾಡಿದ್ದು ಈ ಕಲ್ಲು ಮೆದುವಾಗಿರುವುದಲ್ಲದೇ ಉತ್ಕೃಷ್ಟವಾದ ಕಣಕಣಗಳ ರಚನೆ ಹೊಂದಿದೆ.

ಈ ಕಲ್ಲಿನ ಉಪಯೋಗ ಆರಂಭವಾದೊಡನೆ, ಶಿಲ್ಪರಚನೆಯಲ್ಲಿ ಒಂದು ಹೊಸತನ ಮೂಡಿ ಹೊಸ ಸಂಪ್ರದಾಯದ ಆರಂಭವಾಯಿತು. ಕರಿಗಲ್ಲಿನಲ್ಲಿ ಕಡೆದ ಮೂರ್ತಿಗಳು ಕಲ್ಲಿನಲ್ಲಿ ಕಡೆದ ಮೂರ್ತಿಗಳಿಗಿಂತ ಸಣ್ಣ ಪ್ರಮಾಣದ್ದಾದವು. ಸ್ತ್ರೀ ಅಥವಾ ದೇವತೆಗಳ ಬಿಡಿಮೂರ್ತಿಗಳು ಪ್ರಚಾರಕ್ಕೆ ಬಂದವು ಇದನ್ನು ಗಮನಿಸಿದವರಿಗೆ ಈ ಶೈಲಿ ರಾಷ್ಟ್ರಕೂಟರ ಕಾಲದ ಶೈಲಿಗಿಂತ ಸ್ಪಷ್ಟವಾಗಿ ಭಿನ್ನವಾಗಿರುವುದು ವೇದ್ಯವಾಗುತ್ತದೆ. ಈ ಮೆದು ಸ್ವಭಾವದ ಕಲ್ಲು ಶಿಲ್ಪಗಳು ಕೆತ್ತುವಿಕೆ, ಗೋರುವಿಕೆ ಮುಂತಾದವುಗಳನ್ನು ಸುಲಭವಾಗಿ ಸಾಧ್ಯವಾಗುವಂತೆ ಮಾಡಿದವು.

ಶಿಲ್ಪಿಗಳು ಸೂಕ್ಷ್ಮರೀತಿಯ ಕೆತ್ತನೆ ಕಡೆ ಒಲವು ತೋರಿದರು ಬಳಿಕ ಕೆಲಸದ ಅಲಂಕಾರದಂತೆ ಈ ಸೂಕ್ಷ್ಮ ಕೆತ್ತನೆ ಕಂಡುಬಂತು ಮೂರ್ತಿಗಳ ಶಿಲ್ಪದಲ್ಲಿ ಆಭರಣಗಳಿಲ್ಲದ ಹೊರಮೈಯ ಭಾಗಗಳಿಗೆ ಮೆರಗು ಕೊಡುವ ಪದ್ಧತಿ ಭಾರತದ ಶಿಲ್ಪ ತಯಾರಿಕೆಯ ವಿಧಾನದಲ್ಲಿ ಮೊದಲ ಬಾರಿಗೆ ಕಲ್ಯಾಣ ಚಾಲುಕ್ಯರ ಕಾಲದ ಶಿಲ್ಪಗಳಿಂದ ಆರಂಭವಾಯಿತು.

ಕಲ್ಯಾಣ ಚಾಲುಕ್ಯರ ಕಾಲದ ಶಿಲ್ಪಗಳೆಲ್ಲಾ ಶಿಲೆಯಲ್ಲಿ ಕಡೆದವುಗಳು ಹಲವಾರು ಮೂರ್ತಿಗಳನ್ನು ಅವಲೋಕಿಸಿದಾಗ ಅಂದಿನ ಶಿಲ್ಪಿಗಳು ಈ ಮೂರ್ತಿಗಳನ್ನು ಕಡೆದಾಗ, ಕೆಳಗೆ ಸೂಚಿಸಿದ ಅಭಿಪ್ರಾಯವನ್ನು ಹೊಂದಿದ್ದರೆಂದು ನಮಗೆ ಮನವರಿಕೆಯಾಗುತ್ತದೆ.

೦೧. ಪ್ರಜಾ ಸ್ಥಳಗಳಲ್ಲಿ ಹಾಗೂ ಗೋಡೆಗಳಲ್ಲಿನ ಗೂಡುಗಳಲ್ಲಿ ಬಳಸುವಿಕೆ.

೦೨. ಗೋಡೆಗಳ ಮೇಲೆ, ಕಂಬಗಳ ಮೇಲೆ ಹಾಗೂ ಮೇಲ್ಛಾವಣಿಗಳಲ್ಲಿನ ಮೂರ್ತಿಗಳು.

೦೩. ದೇವಸ್ಥಾನಗಳ ಹೊರಗಿನ ಗೋಡೆಗಳಲ್ಲಿ ಚಿತ್ರಿತವಾದ ಮಾನವ ಮೂರ್ತಿಗಳು.

ಉದಾ:- ಗುಲ್ಬರ್ಗ ಜಿಲ್ಲೆಯ ಮಡಕಿನ ರಾಮೇಶ್ವರ ದೇವಾಲಯ, ಬೀದರ ಜಿಲ್ಲೆಯ ಜಲಸಂಗಿಯ ಶಿವದೇವಾಲಯ ಇವುಗಳಲ್ಲಿ ಹೆಚ್ಚಾಗಿ ಸ್ತ್ರೀ ಮೂರ್ತಿಗಳಿವೆ.

೦೪. ಸಾಂಪ್ರದಾಯಿಕ ಕಥೆಗಳ ನಿರೂಪಣೆಯಿರುವ ಪಟ್ಟಿಕೆಗಳು.

೦೫. ಕೀರ್ತಿಮುಖ ಹಾಗೂ ಹೂವುಬಳ್ಳಿಗಳಿಂದ ಅಲಂಕೃತವಾದ ಶಿಲ್ಪಗಳು.

ಪ್ರಜಾ ಸ್ಥಳಗಳಲ್ಲಿ ಹಿಂದೂ, ಜೈನ, ಬೌದ್ಧಮೂರ್ತಿಗಳಿವೆ. ಹಿಂದೂ ಧರ್ಮಕ್ಕೆ ಸೇರಿದ ದೇವದೇವತೆಗಳ ಮೂರ್ತಿಗಳು ಅತಿ ಹೆಚ್ಚು ಸಂಖ್ಯೆಯಲ್ಲಿವೆ. ಸಾಕಷ್ಟು ಮೂರ್ತಿಗಳಿವೆ. ಆದರೆ ಬೌದ್ಧ ಧರ್ಮಕ್ಕೆ ಸಂಬಂಧಿಸಿದ ಮೂರ್ತಿಗಳು ವಿರಳವಾಗಿವೆ. ಕಿವಿ ಆಭರಣ ಕಂಠಿಹಾರ, ಶಿರಸ್ತ್ರಾಣ ಮೊದಲಾದವು. ಕಲ್ಯಾಣ ಚಾಲುಕ್ಯ ಶಿಲ್ಪಕಲೆಯ ವೈಶಿಷ್ಟ್ಯತೆಯಾಗಿದೆ. ಕಿರೀಟ ಹಾಗೂ ಜಟಾಮುಕುಟಗಳೂ ಸಹಾ ಸುಂದರವಾದ ವಿನ್ಯಾಸಗಳು ರಚಿಸಲಾಗಿದೆ. ಹೀರೇಮನ್ನೂರಿನ ವಿಷ್ಣುಮೂರ್ತಿ, ಕರುವತ್ತಿಯಲ್ಲಿನ ಅನೇಕ ಮದನಿಕಾ ಮೂರ್ತಿಗಳು, ಜಲಸಂಗಿಯ ಶಾಸನ ಸುಂದರಿ, ಮಡಿಹಾಳದ ಆನೆ ಮುಂತಾದವು ಈ ಕಾಲದ ಶಿಲ್ಪಗಳ ಕೌಶಲ್ಯದ ಸಾಕ್ಷಿಗಲು, ಈ ಕಾಲದಲ್ಲೇ ನಕ್ಷತ್ರಾಕಾರದ ಹೊರಭಿತ್ತಿ ಮತ್ತು ಒಳ ಭಿತ್ತಿಯಲ್ಲಿ ಕೋಷ್ಟಕಗಳು, ಶಿಲ್ಪಗಳು ಮತ್ತು ಉಬ್ಬು ಶಿಲ್ಪಗಳನ್ನು ನೋಡಬಹುದು.

ಕಲ್ಯಾಣ ಚಾಲುಕ್ಯರ ಶಿಲ್ಪಶೈಲಿಯಲ್ಲಿ ಬಾದಾಮಿ ಚಾಲುಕ್ಯರ ಶಿಲ್ಪ ಶೈಲಿಯಲ್ಲಿದ ತೇಜಸ್ಸು, ಚೈತನ್ಯ, ಸರಳತೆ ಶಕ್ತಿ, ಶೌರ್ಯದೊಂದಿಗೆ ಬೆಳವಣಿಗೆಯ ಹಂತವಾಗಿ ಅಲಂಕಾರಿಕ ಅಂಶಗಳು ಬಳ್ಳಿಗಳ ನಿರೂಪಣೆ ಮತ್ತು ಕೇಶವಿನ್ಯಾಸ ಆಭರಣಗಳ ರಚನೆಯಲ್ಲಿ ಕಂಡುಬಂದಿದ್ದು, ಹೊಳಪಿನಿಂದ ಕೂಡಿದ ಶಿಲ್ಪಗಳ ರಚನೆಯ ಪ್ರಾರಂಭಿಕ ಹಂತವನ್ನು ಇಲ್ಲಿ ಗುರುತಿಸುತ್ತಾರೆ.

ಕಾರಂತರು ತಮ್ಮ ಭಾರತೀಯ ಶಿಲ್ಪಕಲೆಯಲ್ಲಿ ಇದನ್ನು ಅವನ ಆಯ್ದು ಹಂತ ಎಂದು ಗುರುತಿಸಿದ್ದಾರೆ. ಕಲ್ಯಾಣ ಚಾಲುಕ್ಯರ ನಂತರ ಬಂದ ಹೊಯ್ಸಳರ ಶಿಲ್ಪಗಾರಿಕೆಯಲ್ಲಿ ಅತಿನಯಗಾರಿಕೆ ಹೊಳಪು ಮೂಡುವಂತೆ ಆಭರಣಗಳ ಹೇರುವಿಕೆ ಕುಸುರಿ ಕೆಲಸದ

ಹೆಚ್ಚಳ ಇಲ್ಲಿದ್ದು ಈ ಶಿಲ್ಪಗಳ ಮುಖಾಂತರ ಗುರುತಿಸಬಹುದು. ಈ ಸಂಗ್ರಹಾಲಯದಲ್ಲಿರುವ ಕಲ್ಯಾಣ ಚಾಲುಕ್ಯರ ಕಾಲದ ಹಲವು ಹಿಂದೂ, ಜೈನ ಶಿಲ್ಪಗಳಲ್ಲಿ ಈ ಮೇಲಿನ ಅಂಶಗಳನ್ನು ಗಮನಿಸಬಹುದು.

೧. ರೋಷಾ ವೇಷದ ಗಣಪ

ರೋಷಾವೇಷದ ಗಣಪ ಅಸುರನನ್ನು ಹಿಡಿದೆಳೆದು ಮಣಿಸುವ ದೃಶ್ಯ ಈ ಶಿಲ್ಪವು ಪುಂಜದಲ್ಲಿದೆ. ಅಪರೂಪದ ಚಲನೆಯಿಂದ ಕೂಡಿದ ಚೈತನ್ಯ ಮೂರ್ತಿ ಗಣೇಶ ಅಸುರನನ್ನು ತನ್ನ ಬಾಹು ಸೊಂಡಿಲುಗಳಿಂದ ಹಿಡಿದು ಬಂಧಿಸಿ ಆತನನ್ನು ದಮನಿಸುವ ರೀತಿ ಭಾರತದ ಶಿಲ್ಪವಿನ್ಯಾಸದಲ್ಲೇ ಅಪರೂಪದ್ದಾಗಿದೆ.

ಗಣೇಶನ ಕಾಲುಗಳ ರಚನೆ ದೇಹದ ವಿನ್ಯಾಸದಲ್ಲಿ ಆತನ ಶಕ್ತಿ ಶೌರ್ಯ ಎದ್ದು ಕಾಣುವಂತಿದೆ. ಹಿತಮಿತ ಆಭರಣಗಳು ಉಡುಗೆಯ ಹಾರಾಟ. ಎರಡು ಕೈಗಳಲ್ಲಿ ಕತ್ತಿ ಗುರಾಣಿ, ನಿಂತ ನಿಲುವಿನ ಆಕರ್ಷಕ ಭಂಗಿ ಆತನ ಅವಯವಗಳ ಚಲನೆ ಇಡೀ ಸಂಯೋಜನೆಗೆ ಪೂರಕವಾಗಿದೆ. ಇಲ್ಲಿ ಶಿಲ್ಪಿಯ ಜಾಣ್ಮೆಯನ್ನು ಆತ ಬಳಸಿದ ಕಿರುಗಾತ್ರದ ಶಿಲ್ಪಗಳ ಸಮತೋಲನೆ ಹಿನ್ನೆಲೆಯ ಕಲ್ಲಿನ ಮಂಟಪ ಕಂಬಗಳ ಸಾಂಕೇತಿಕ ಸಿಂಹಗಳ ರಚನೆ, ಕಲಾತ್ಮಕ ನಕ್ಷಾ ಬಳ್ಳಿಗಳು ರಚನೆಗಳನ್ನು ಕಾಣಬಹುದು.

ಈ ಶಿಲ್ಪ ಪುಂಜ ಸಂಪೂರ್ಣ ಶಿಥಿಲವಾಗಿದ್ದು ಅದರ ಮುಂದಿನ ಪಟ್ಟಿಕೆಯಲ್ಲಿ ಷಣ್ಮುಖನ ಅರೆಬರೆ ಶಿಲ್ಪ ಸ್ವಲ್ಪಕಾಣಬಹುದು. ಒಟ್ಟಿನಲ್ಲಿ ಇಡೀ ಶಿಲ್ಪರಚನೆಯಲ್ಲಿ ಚೈತನ್ಯ, ಆಂತರಿಕ ಶಕ್ತಿ ಸೇರಿದ್ದು ಶಿಲ್ಪಿಯ ತಾಳ್ಮೆ ಮತ್ತು ಜಾಣ್ಮೆಗೆ ಉತ್ತಮ ಉದಾಹರಣೆಯಾಗಿದೆ. ಸೂಕ್ಷ್ಮತೆಯನ್ನು ನೋಡುಗನು ಇಲ್ಲಿ ಕಾಣುತ್ತಾನೆ.

೨. ವರಾಹ ಶಿಲ್ಪ

ವರಾಹ ಮುಖದ ಶಿಲ್ಪ ಭೂದೇವಿ ಸಮೇತನಾಗಿ ಕಲಾತ್ಮಕವಾಗಿ ನಿಂತಭಂಗಿ

ಇದಾಗಿದೆ. ಬಾದಾಮಿ ಚಾಲುಕ್ಯರಿಗಿಂತ ಭಿನ್ನ ಶೈಲಿ ಇದಾಗಿದ್ದು, ಆಭರಣಗಳ ರಚನೆಗೆ ಹೆಚ್ಚು ಒತ್ತು ನೀಡಲಾಗಿದ್ದು ಗಧೆ, ಶಂಖು, ಮತ್ತಿತರ ಆಯುಧಗಳೊಂದಿಗೆ ದ್ವಿಭಂಗಿಯಲ್ಲಿ ನಿಂತ ವರಾಹ ಎಡಗಾಲನ್ನು ಕಲ್ಲೊಂದರ ಮೇಲೆ ತಾಗಿಸಿ ನಿಂತಂತೆ ರಚನೆಯಾಗಿದೆ.

ಗಾತ್ರದಲ್ಲಿ ಇದು ಚಿಕ್ಕದಿದ್ದರೂ ಗಡಸುಶಿಲೆಯಲ್ಲಿ ವಿವರ ಪೂರ್ಣ ಕೆತ್ತನೆಗೆ ತೊಡಗಿಸಿಕೊಂಡ ರೀತಿ ಇಲ್ಲಿ ವಿಶೇಷವೆನಿಸುತ್ತದೆ. ತನ್ನ ಎಡಭುಜದ ಮೇಲೆ ವಿಶೇಷ ಕೇಶ ವಿನ್ಯಾಸದೊಂದಿಗಿನ ಭೂದೇವಿ ಆಕೆಯನ್ನು ಗಮನಿಸಿರುವ ವರಾಹದ ಮುಖಭಾವನೆ ನಿಂತಭಂಗಿ ಈ ಶಿಲ್ಪದಲ್ಲಿ ವಿಭಿನ್ನವಾಗಿ ಕಂಡುಬರುತ್ತದೆ.

೩. ಶೇಷಶಯನ ವಿಷ್ಣು ಶಿಲ್ಪ

ನೋಡುಗರಲ್ಲಿ ಹೆಚ್ಚಿನ ಆಸಕ್ತಿಯುಂಟು ಮಾಡುವ ಈ ಶಿಲ್ಪವು ಚಿಕ್ಕದಾಗಿದ್ದರೂ ಅಪರೂಪದ ಕೃತಿ ಇದಾಗಿದೆ. ದಶಾವತಾರದ ಹಿನ್ನೆಲೆ ಲಕ್ಷ್ಮಿ ಮತ್ತು ಆಕೆಯ ಸಖಿ ವಿಷ್ಣುವಿನ ಕಾಲಬಳಿ ಕುಳಿತಭಂಗಿ ಆತನ ಎಡಗಾಲನ್ನು ಬಲಗಾಲಿನ ಮೇಲಿಂದ ಹಾಯಿಸಿ ಇಟ್ಟ ರೀತಿ ಅಪರೂಪ ಎನಿಸುತ್ತದೆ. ವಿವರಪೂರ್ಣ ಶಿಲ್ಪ ಇದಾಗಿದ್ದು, ಆತನ ಕಿರೀಟ ಆಭರಣಗಳ ರಚನೆಯಲ್ಲಿ ಅಲಂಕಾರಿಕ ಅಂಶಗಳು ಹೆಚ್ಚಾಗಿರುವುದನ್ನು ಗಮನಿಸಬಹುದು.

೪. ಸಮಭಂಗಿಯಲ್ಲಿ ನಿಂತಿರುವ ಶಿಲ್ಪ

ಸಮಭಂಗಿಯಲ್ಲಿ ನಿಂತ ಮತ್ತೊಂದು ಶಿಲ್ಪ ಇದಾಗಿದ್ದು ಕರಿಯ ಕಲ್ಲಿನ ಸಪೂರದೇಹ ವಿನ್ಯಾಸದೊಂದಿಗೆ ರಚನೆಯಾಗಿದೆ. ಬಾದಾಮಿ ಚಾಲುಕ್ಯ ಶೈಲಿಗಿಂತ ಭಿನ್ನವಾದ ಅಂಶಗಳು ಇಲ್ಲಿ ಎದ್ದು ಕಾಣುತ್ತದೆ. ಆತನ ಮುಖ ನಡು ಮತ್ತು ಹೊಟ್ಟೆಯ ಭಾಗ ಶಿಲೆಯನ್ನು ಹೊಳಪಾಗಿಸುವ ತಂತ್ರ ಶಿರಭಾಗದ ಹಿನ್ನೆಲೆಯ ಸೂಕ್ಷ್ಮವಿನ್ಯಾಸದ ನಯಗಾರಿಕೆ ಕಾಲುಗಳ ಬಳಿಯಿರುವ ಕಿರುಗಾತ್ರದ ಸೇವಕ ಶಿಲ್ಪಗಳ ರಚನೆಯಿದೆ.

ಕಲ್ಯಾಣ ಚಾಲುಕ್ಯರ ಶೈಲಿಯಾಗಿ ಮುಂದೆ ಹೊಯ್ಸಳರಿಗೆ ಪ್ರೇರಣೆಯಾಗಿರ–

ಬಹುದಾದ ಈ ಶಿಲ್ಪವಾಗಿದೆ. ಇಲ್ಲಿ ಅತಿಯಾದ ಆಭರಣಗಳ ಸೂಕ್ಷ್ಮಕೆತ್ತನೆ ಕಾಣುತ್ತೇವೆ. ಶಂಖ ಚಕ್ರದಲ್ಲಿ ಸೂಕ್ಷ್ಮರಚನೆ ಕಾಣಬಹುದು. ಇದರ ನಿಂತ ಭಂಗಿ ಸಂಯೋಜನೆಯು ಉತ್ತಮವಾಗಿದೆ.

೫.೧. ಸಮಭಂಗಿಯಲ್ಲಿ ನಿಂತ ವಿಷ್ಣುವಿನ ಶಿಲ್ಪಗಳು ಗಡಸು ಶಿಲೆಯಲ್ಲಿ ಮೂಡಿ ಬಂದಿದೆ.

* ಸಮಭಂಗಿಯಲ್ಲಿ ನಿಂತರಾಮನ ಗಡಸು ಶಿಲೆಯ ಶಿಲ್ಪ ಅಪರೂಪದಾಗಿದ್ದು, ಆಭರಣ ಮತ್ತು ಉಡುಪುಗಳ ಕೆತ್ತನೆ ಸಾಧಾರಣ ನೆಲೆಯಲ್ಲಿದೆ.
* ಕಾಲಬಳಿಯ ಕಿರುಗಾತ್ರದ ಆಕೃತಿಗಳು ಇಡೀ ಸಂಯೋಜನೆಗೆ ಪೂರಕವಾಗಿದೆ.
* ಸಮಭಂಗಿಯ ಶಿವ ಒರಟಾದ ಶಿಲೆಯಲ್ಲಿ ರಚನೆಯಾಗಿದ್ದು ನಾಲ್ಕು ಕೈಗಳಲ್ಲಿ ಆಯುಧಗಳು, ಜಪಮಣಿ, ಹಾವು ಮುಂತಾದವುಗಳನ್ನು ಹೊಂದಿದ್ದು ಕಿರೀಟ, ಆಭರಣ ಕಾಲಬಳಿಯ ಕಿರು ಆಕೃತಿಯಲ್ಲಿ ಗೂಳಿ ಶಿಲ್ಪ ವಿಶೇಷ ಎನಿಸುತ್ತದೆ.

೭. ಕಲ್ಯಾಣ ಚಾಲುಕ್ಯರ ಅಪರೂಪದ ಶಿಲ್ಪ

ಪುಂಜಗಳಲ್ಲಿ ಕಲಾ ತುಣುಕು ಒಂದಾಗಿದ್ದು ವ್ಯಕ್ತಿಯೊಬ್ಬನ ಭುಜದ ಮೇಲೆ ಪುರುಷ ಸ್ತ್ರೀ ಆಕೃತಿಗಳು ಇದ್ದು ಅವರ ಕಾಲುಗಳಿಗೆ ಭಕ್ತಿಯಿಂದ ತನ್ನ ಬಲಗೈಯಲ್ಲಿ ಆನಿಸಿ ಹಿಡಿದ ರೀತಿ ಇವರ ಹಿಂದೆ ಎರಡು ಕುಬ್ಜ ಆಕೃತಿಗಳು ಆಯುಧ, ಪ್ರಾಣಿಗಳಾಗಿ ಹೊರಟ ರೀತಿ ಅವರ ಹಿನ್ನೆಲೆಯಲ್ಲಿ ಸ್ತ್ರೀ ಆಕೃತಿಯೊಂದು ವಾದನ ಒಂದನ್ನು ನುಡಿಸುವ ರೀತಿ ಇಡೀ ಶಿಲ್ಪದ ಸಂಯೋಜನೆ ಒಟ್ಟಾರೆ ಒಂದಕ್ಕೊಂದು ಪೂರಕವಾಗಿ ಮೇಳೈಸಿದ್ದು, ಕೇಂದ್ರ ಬಿಂದುವಾದ ಆತನ ಭುಜದ ಮೇಲೆ ಕುರಿತ ಸ್ತ್ರೀಪುರುಷರ ಶಿಲ್ಪಗಳು ಲಕ್ಷ್ಮಿನಾರಾಯಣರು ಆಗಿದ್ದು. ಹೆಗಲೇರಿಸಿ ಹೊರಟ ಆಕೃತಿ ಗರುಡನ ಶಿಲ್ಪವಾಗಿರಬಹುದಾಗಿದೆ. ಆತನ ಭಾಗದಲ್ಲಿ ಚಿಕ್ಕವೃದ್ಧ ಆಕೃತಿಯೊಂದು ಛತ್ರಿಯನ್ನು ಹಿಡಿದಿರುವ ರೀತಿಯಲ್ಲಿ ಸಾಮರಸ್ಯವನ್ನು ಕಾಣುತ್ತೇವೆ. ಆಭರಣ ಮತ್ತು ಉಡುಪಿನ ರಚನೆ ಇಲ್ಲಿ ಸೂಕ್ಷ್ಮವಾಗಿ ನಿರೂಪಿಸಲಾಗಿದೆ.

೮. ಶಿವ ಮತ್ತು ಪಾರ್ವತಿಯು ಕುಳಿತ -ಭಂಗಿಯ ಶಿಲ್ಪ

ಶಿವ ಮತ್ತು ಪಾರ್ವತಿಯು ಕುಳಿತ ಭಂಗಿಯ ಶಿಲ್ಪ ಪುಂಜ ಇದಾಗಿದೆ. ಲೀಲಾಸನದಲ್ಲಿ ಕುಳಿತ ಶಿವ ಆತನ ಎಡತೊಡೆಯ ಮೇಲೆ ಪಾರ್ವತಿಯು ಲೀಲಾಸನದಲ್ಲಿ ಕುಳಿತಿದ್ದು ಶಿವನ ಎಡಗೈಯೊಂದರಲ್ಲಿ ಹಿಡಿದ ಹಾವು ಅವರಿಬ್ಬರ ಆಕೃತಿಗಳ ನಡುವೆ ವಿಶೇಷವೆನಿಸುತ್ತದೆ. ಶಿವನ ಕಾಲಬಳಿ ಬಸವನ ಶಿಲ್ಪವಿದ್ದು ಅದರ ಮುಖದ ರಚನೆ ಶಿಥಿಲಗೊಂಡಿದೆ. ಒಟ್ಟಾರೆ ಸಂಯೋಜನೆ ಆಕರ್ಷಕವಾಗಿದೆ.

೯. ಮದನಿಕಾ ಶಿಲ್ಪಗಳು

ಈ ಸಂಗ್ರಹಾಲಯದಲ್ಲಿ ಈ ಎರಡು ಉತ್ತಮ ಸ್ಥಿತಿಯಲ್ಲಿದ್ದು ಸ್ತಂಭವೊಂದರಲ್ಲಿ ರಚನೆಯಾದಂತಿದೆ. ಕೇಶವಿನ್ಯಾಸ ತೆಳುವಾದ ನಡು, ನೀಳವಾದ ಕೈಕಾಲುಗಳ ರಚನೆ ಆಭರಣಗಳ ರಚನೆ ಇಲ್ಲಿ ವಿಶೇಷ ಎನಿಸುತ್ತದೆ. ಶಿಲ್ಪದ ಮೇಲ್ಭಾಗ ಹೂಬಳ್ಳಿಗಳ ರಚನೆ ಹೊಂದಿದ್ದು ಬಳ್ಳಿಯೊಂದನ್ನು ಹಿಡಿದು ನಿಂತಮದನಕಾ ಶಿಲ್ಪಗಳು ಇದಾಗಿವೆ. ಮದನಿಕಾ ಶಿಲ್ಪಗಳು ಮುಂದೇ ಹೊಯ್ಸಳ ಶೈಲಿಯಲ್ಲಿ ಈ ವಸ್ತು ಮತ್ತು ಶೈಲಿಗಳು ಇನ್ನೂ ಅಧಿಕಗೊಂಡಿರುವುದನ್ನು ಇಲ್ಲಿ ಸ್ಮರಿಸಬಹುದು.

೧೦. ಸಲಗ

ಚಿಕ್ಕ ಹಾಗೂ ಚೊಕ್ಕ ಪಟ್ಟಿಕೆಯೊಂದರಲ್ಲಿ ಚೈತನ್ಯ ಭರಿತವಾದ ೨ ಸಲಗಗಳ ಹೋರಾಟ ದೃಶ್ಯವಿದೆ. ಅವುಗಳ ಕಾಲುಗಳ ರಚನೆ ಆಕ್ರಮಣಕಾರಿ ಹಾಗೂ ಅದನ್ನು ತಪ್ಪಿಸಿಕೊಳ್ಳುವ ಮತ್ತೊಂದು ಸಲಗದ ಹಾವಭಾವ ರೀತಿಗಳು ಇಲ್ಲಿ ಉತ್ತಮವಾದ ಸಂಯೋಜನೆಯಲ್ಲಿ ರಚನೆಯಾಗಿದೆ.

೧೧. ಯಾಳಿ

ಈ ಶಿಲ್ಪವು ಹಿಂದೂಪುರಾಣದ ಊಹಾತ್ಮಕ ಮೃಗ ಇದಾಗಿದ್ದು ಇಲ್ಲಿ ಮೊಸಳೆ,

ಆನೆ, ಸಿಂಹ, ಹಾಗೂ ನವಿಲಿನ ಅಂಶಗಳು ಒಟ್ಟಾರೆ ಉತ್ತಮವಾಗಿ ಮೇಳೈಸಿ ಒಂದು ಕಾಲ್ಪನಿಕ ಮೃಗವಾಗಿ, ಕಲ್ಯಾಣ ಚಾಲುಕ್ಯರು ಮುಂದೇ ಹೊಯ್ಸಳರ ಶಿಲ್ಪಗಳಲ್ಲಿ ಕಲಾತ್ಮಕವಾಗಿ ಮೂಡಿಬಂದಿದೆ. ಈ ಶಿಲ್ಪದ ಮೇಲಿನ ನಕ್ಷೆಗಳ ಆಭರಣರಚನೆ ಉತ್ತಮವಾಗಿದ್ದು ಕಲಾವಿದನ ಕಲ್ಪನಾ ಶಕ್ತಿಯನ್ನು ಕೈಚಳಕವನ್ನು ಈ ಕಿರುಗಾತ್ರದ ಯಾಳಿ ಶಿಲ್ಪವನ್ನು ಗುರುತಿಸಬಹುದು.

೧೨. ನಟರಾಜ

ಸುಳುವಿನ ನಕ್ಷೆಗಳಿರುವ ಸ್ತಂಭವೊಂದರಲ್ಲಿ ರಚನೆಯಾದ ಮಂಟಪದಲ್ಲಿ ನಾಟ್ಯ ಶಿವನನ್ನು ನಟರಾಜನ ರೂಪದಲ್ಲಿ ನಿರೂಪಿಸಲಾಗಿದೆ. ಇಡೀ ಅವಕಾಶವನ್ನು ಬಳಸಿ ಶಿವನ ರೌದ್ರ ನೃತ್ಯವನ್ನು ತೋರಲಾಗಿದೆ. ಆತನ ಬಲಗಾಲ ಕೆಳಗೆ ಅಪಸ್ಮಾರಕ ರಕ್ಕಸನನ್ನು ಮಗುವಿನಂತೆ ಚಿತ್ರಿಸಲಾಗಿದೆ. ಮತ್ತಿಬ್ಬರು ಗಣಗಳ ಕಿರುಗಾತ್ರದ ಆಕೃತಿಗಳು ಆತನ ಕಾಲಬಳಿ ಚೈತನ್ಯಮಯವಾಗಿ ರಚನೆಯಾಗಿದೆ. ಆಯುಧ ಪಾಣಿಯಾದ ಎಂಟು ಕೈಗಳ ಶಿವ ಸಂಪೂರ್ಣ ಶಿಥಿಲ ಅವಸ್ಥೆಯಲ್ಲಿರುವದು ಒಂದು ದುರಾದೃಷ್ಟಕರ ಸಂಗತಿಯಾಗಿದೆ.

೧೩. ದೈವದಂಪತಿಗಳ ಶಿಲ್ಪ

ಬಸವಕಲ್ಯಾಣದ ವಸ್ತುಸಂಗ್ರಹಾಲಯದ ಮತ್ತೊಂದು ಆಕರ್ಷಕ ಶಿಲ್ಪ ಪುಂಜವಾಗಿ ಎರಡು ದೈವದಂಪತಿಗಳ ಶಿಲ್ಪಗಳನ್ನು ನೋಡಬಹುದು ಇವೆರಡು ದಂಪತಿಗಳ ನಡುವಿನ ಭಾಗದಲ್ಲಿ ಪರಿಚಾರಿಕೆಯ ಶಿಲ್ಪ ಈ ಸಂಯೋಜನೆಯನ್ನು ವಿಭಜಿಸುತ್ತದೆ. ಈ ದಂಪತಿಗಳ ಹಿಂಭಾಗದಲ್ಲಿ ಎರಡು ಸಿಂಹಗಳನ್ನು ಒಗ್ಗೂಡಿಸಿದ ನಕ್ಷಾವಿನ್ಯಾಸ ಕಲಾತ್ಮಕವಾದ ರಚನೆಯಾಗಿದೆ. ಇದು ಲಕ್ಷ್ಮಿ ಮತ್ತು ವಿಷ್ಣುವಿನ ವಿವಿಧ ಭಂಗಿಗಳಾಗಿವೆ. ಪುರುಷ ಶಿಲ್ಪಗಳು, ಸ್ತ್ರೀ ಶಿಲ್ಪಗಳು ತಮದೇ ಆದ ಹಾವಭಾವಗಳಲ್ಲಿ ತ್ರಿಭಂಗಿ ರೂಪದಲ್ಲಿ ನಿಂತ ರೀತಿ ನೋಡುಗರನ್ನು ಆಕರ್ಷಿಸುವಂತಿದೆ. ನೀಳ ಕೈಕಾಲುಗಳು ಆಭರಣ, ಮತ್ತು ಉಡುಪಿನ ರಚನೆ ಇಲ್ಲಿ ಸೂಕ್ಷ್ಮವಾಗಿ ರೂಪಿಸಲಾಗಿದೆ.

೧೪. ನೃತ್ಯಭಂಗಿಯ ಶಿವ

ಈ ವಸ್ತು ಸಂಗ್ರಹಾಲಯದಲ್ಲಿ ಕಂಡು ಬರುವ ಏಕ ಶಿಲಾ ಸ್ತಂಭದಲ್ಲಿ ನಕ್ಷೆ ಮತ್ತು ಶಿವನ ನೃತ್ಯಭಂಗಿ ಸೂಕ್ಷ್ಮರಚನೆಯೊಂದಿಗೆ ಕಂಡುಬಂದಿದೆ. ಆತನ ಕಾಲಬಳಿಯ ಆಕೃತಿಗಳು ಪೂರಕವಾಗಿದೆ. ಇನ್ನೂ ಹಲವು ಸ್ತಂಭದ ಮೇಲಿನ ಪೀಠಗಳು ಕಂಡು ಬಂದಿವೆ.

೧೫. ಸ್ತ್ರೀಯ ಶಿಲ್ಪ

ಕಲಾತ್ಮಕ ನಕ್ಷೆಯ ನಡುವೆ ನಿಂತ ಸ್ತ್ರೀಯ ಶಿಲ್ಪ ಇಲ್ಲಿದ್ದು, ಈ ಶಿಲ್ಪದ ಶೇಷಭಾಗ ಸಂಪೂರ್ಣ ನಶಿಸಿದೆ. ಆಕೃತಿಯ ಹಿನ್ನೆಲೆಯಲ್ಲಿ ಕಂಡುಬರುವ ವರ್ಣದಿಂದ ಬಾದಾಮಿ ಚಾಲುಕ್ಯರಂತೆ ಇವನ್ನು ಶಿಲ್ಪಗಳಿಗೆ ವರ್ಣಗಾರಿಕೆ ಮಾಡುವುದನ್ನು ಮುಂದುವರೆಸಿರುವ ಅಂಶವನ್ನು ಕಂಡುಬರುತ್ತದೆ. ಉದಾ:- ಬಾದಾಮಿಯ ಮೂರನೇ ವಿಷ್ಣು ಗುಹೆಯಲ್ಲಿನ ಶಿಲ್ಪಗಳನ್ನು ನೆನಪಿಸಿಕೊಳ್ಳಬಹುದು.

೧೬. ಕಲ್ಯಾಣಚಾಲುಕ್ಯರ ಉಬ್ಬು ಶಿಲ್ಪಗಳಲ್ಲಿ ಮೂಡಿಬಂದ ನಕ್ಷಾ ವಿಧಾನಗಳು

೧. ಕಲಾತ್ಮಕ ವೃಕ್ಷವೊಂದರ ಕೆಳಗೆ ಲಾಲಿತ್ಯಮಯವಾಗಿ ನಿಂತ ಸ್ತ್ರೀಶಿಲ್ಪ, ಸ್ತ್ರೀಶಿಲ್ಪದಲ್ಲಿ ಕೇಶವಿನ್ಯಾಸ ಕಲಾತ್ಮಕ ವೃಕ್ಷ, ಆಕೆ ನಿಂತ ಹಾವಭಾವ ಉಡುಪಿನ ರಚನೆ ಏಕಶಿಲೆಯಲ್ಲಿ ಮೂಡಿದ್ದು ಕಮಲದ ಪೀಠವೊಂದರ ಮೇಲೆ ನಿಂತ ಸ್ತ್ರೀ ಶಿಲ್ಪ ಕಪ್ಪುಶಿಲೆಯಿಂದ ಕೂಡಿದ ನುಣುಪುಗಾರಿಕೆ ಈ ಶಿಲ್ಪಶೈಲಿಯ ವಿಶೇಷತೆಯಾಗಿದೆ.

ಪ್ಲಾಸ್ಟರ್ ಆಫ್ ಪ್ಯಾರಿಸ್ ಮಾಧ್ಯಮದ ಶಿಲ್ಪಗಳು

ಎಲ್ಲಾ ವಸ್ತುಸಂಗ್ರಹಾಲಯದಲ್ಲಿರುವಂತೆ ಇಲ್ಲಿಯು ಪುರಾತನ ಕಲಾತ್ಮಕವಾದ ಹಾಗೂ ಅಮೂಲ್ಯವಾದ ವಸ್ತುಗಳ ಸಂಗ್ರಹವಿದ್ದು, ಹೆಚ್ಚಿನವು ಶಿಥಿಲವಸ್ಥೆಯಲ್ಲಿದ್ದರೂ

ಆಯಾಕಾಲಮಾನದ ರಾಜಕೀಯ, ಧಾರ್ಮಿಕ, ಆರ್ಥಿಕ, ಸಾಮಾಜಿಕ ಸ್ಥಿತಿಗಳನ್ನು ಕಟ್ಟಿಕೊಡುವಲ್ಲಿ ಪ್ರಮುಖ ಪಾತ್ರವಹಿಸಿದೆ.

೧. ಅಮೃತ ಶಿಲೆಯ ಜೈನ ತೀರ್ಥಂಕರುಗಳ ಶಿಲ್ಪಗಳು ಸಂಗ್ರಹಿಸಲಾಗಿದೆ. ಈ ಶಿಲ್ಪಗಳಲ್ಲಿ ಪ್ರಮಾಣ ಬದ್ಧ ಅಂಗವಿನ್ಯಾಸದಿಂದ ಕೂಡಿದ ಜೈನ ಮುನಿಗಳ ಧ್ಯಾನಾವಸ್ಥೆಯ ಶಿಲ್ಪಗಳು ಇವಾಗಿವೆ. ನಿರ್ಮಾಣ ಸ್ಥಿತಿಯಲ್ಲಿರುವ ಈ ಮುನಿಗಳನ್ನು ಅವರ ಪೀಠಗಳಲ್ಲಿನ ಸಂಕೇತಗಳ ಮೂಲಕ ಗುರುತಿಸಬಹುದಾಗಿದೆ.

೨. ಈ ಶಿಲ್ಪಗಳನ್ನು ಸಂಗ್ರಹಾಲಯದವರು ನಿರ್ಮಿಸಿರುವ ಸುಂದರಗಾಜಿನ ಕಪಾಟುಗಳಲ್ಲಿ ಇರಿಸಲಾಗಿದೆ. ಇದು ಕಲಾಕೃತಿಗಳ ಸ್ವಚ್ಛತೆ ಹಾಗೂ ಭದ್ರತೆಗೆ ಸಹಕಾರಿಯಾಗಿದೆ.

* ವಸ್ತುಸಂಗ್ರಹಾಲಯದ ನಾಲ್ಕನೇ ಕೋಣೆಯ ಎಡಭಾಗದಲ್ಲಿ ಇರಿಸಲಾಗಿದೆ.

* ಅದೇ ಸಾಲಿನಲ್ಲಿ ಮತ್ತೊಂದು ನೀಲ ಕಪಾಟಿನಲ್ಲಿ ಇರಿಸಲಾದ ಗಾಂಧಾರ ಶೈಲಿಯ ಬುದ್ಧನ ಶಿಲ್ಪದ ದೇಹ ಸಂಪೂರ್ಣ ಇಲ್ಲದಾಗಿದ್ದು. ಸುಣ್ಣದ ಕಲ್ಲಿನ ಈ ಶಿರೋಭಾಗ ನೋಡುಗರನ್ನು ತಲ್ಲೀನಗೊಳಿಸುವಂತಿದೆ. ಬುದ್ದನ ಸಾತ್ವಿಕ ಗುಣವನ್ನು ಬಿಂಬಿಸುತ್ತಿದೆ. ಈ ಶಿಲ್ಪದ ಕೆಳಭಾಗದಲ್ಲಿ ಮತ್ತೊಂದು ಸ್ತ್ರೀಶಿಲ್ಪವಿದ್ದು ನೋಡುಗನಿಗೆ ಸಂಪೂರ್ಣ ಬೆನ್ನುಹಾಕಿ ನಿಂತಿದ್ದರು. ನಡುವಿನಿಂದ ಮೇಲುಭಾಗ ಮಾತ್ರ ತಿರುಗಿಸಿ ಬರೆಯುವ ಭಂಗಿಯಲ್ಲಿ ಇರುವದು ವಿಶೇಷವೆನಿಸುತ್ತದೆ. ತಲೆಭಾಗಿಸಿ ಎಡಗೈಯಲ್ಲಿ ಹಿಡಿದ ಪತ್ರದ ನೆಲೆ ಬಲಗೈಯಲ್ಲಿ ಹಿಡಿದ ಕಂಠದಿಂದ ಬರೆಯುವ ಭಂಗಿಯನ್ನು 'ತ್ರಿಭಂಗಿ'ಗೆ ಹೋಲಿಸಬಹುದು.

* ಆಕೆಯ ಸ್ತ್ರೀವ್ಯಕ್ತಿತ್ವ ಶಿಲ್ಪದಲ್ಲಿ ಲಾಲಿತ್ಯಮಯವಾಗಿ ಮೂಡಿಬಂದಿದೆ. ಮುಖ, ಭುಜ, ತೋಳುಗಳು, ಎದೆಭಾಗ, ನಡು, ಎಲ್ಲಾ ಭಾಗಗಳು ದಷ್ಟಪುಷ್ಟವಾಗಿ ಮೂಡಿಬಂದಿದೆ. ಇಂತಹ ಅಪರೂಪದ ಭಂಗಿ ಭಾರತದ ಖಜರಾಹೋ ದೇವಾಲಯದ ಶಿಲ್ಪಗಳಲ್ಲಿ ಗುರುತಿಸಬಹುದು. ಇದು ಆ ಶೈಲಿಯ

ಪ್ರತಿಕೃತಿಯಾಗಿದೆ. ಆಕೆಯ ನಡುವಿನವರೆಗೆ ಬರುವ ಎತ್ತರಕ್ಕೆ ಸಖಿಯ ಶಿಲ್ಪವನ್ನು ಕಿರಿದಾಗಿ ತೋರಿದರು, ಇಡೀ ಶಿಲ್ಪ ಸಂಯೋಜನೆಗೆ ಉತ್ತಮ ಸಮತೋಲನೆ ನೀಡಿದೆ. ಒಟ್ಟಿನಲ್ಲಿ ಆಕೆ ನಿಂತ ಭಾವಭಂಗಿಗಳು ನೋಡುಗನನ್ನು ಹಿಡಿದು ನಿಲ್ಲಿಸುವಂತಿದೆ.

೩. ಇದೇ ವಸ್ತು ಸಂಗ್ರಹಾಲಯದ ಮತ್ತೊಂದು ಭಾಗದಲ್ಲಿ ಗಾಜಿನ ಕಪಾಟಿನಲ್ಲಿ ಜೋಡಿಸಲಾದ ಪ್ರದರ್ಶಿಸಲಾದ ಸುಣ್ಣದ ಕಲ್ಲಿನ ಗೂಳಿಯ ಶಿಲ್ಪ ಮೌರ್ಯಕಾಲದ ಸ್ತಂಭದ ಮೇಲಿನ ಪೀಠದಲ್ಲಿರುವ ಗೂಳಿಯ ಶಿಲ್ಪವಾಗಿದೆ. ಶಕ್ತಿಯುತ ಅಂಗಾಂಗಳ ರಚನೆ ಕಲಾವಿದನ ಜಾಣ್ಮೆಯನ್ನು ಅದರ ನಿರೂಪಣೆಯಲ್ಲಿ ಕಾಣಬಹುದು. ದಳಗಳ ಮೇಲ್ಭಾಗದಲ್ಲಿನ ದೀರ್ಘ ವೃತ್ತಾಕಾರದ ಪೀಠದ ಮೇಲೆ ಈ ಗೂಳಿಯ ಶಿಲ್ಪ ನಿರ್ಮಿಸಲಾದೆ. ಸಾರನಾಥ ಸಿಂಹದ ನಾಲ್ಕುತಲೆ ಶಿಲ್ಪದ ನಂತಹ ಇದು ಹೆಚ್ಚು ಪ್ರಸಿದ್ಧಿಯನ್ನು ಪಡೆದಿದೆ. ಅದರ ಎಡಭಾಗದಲ್ಲಿ ನಿಂತಿರುವ ಬುದ್ಧನ ಕಿರುಗಾತ್ರದ ಗಾಂಧಾರಶಿಲ್ಪ ಶೈಲಿಯಲ್ಲಿ ರಚನೆಯಾಗಿದೆ. ಅದೇಕಾಲಕ್ಕೆ ಸೇರಿದ ಇತರೆ ಕಿರುಗಾತ್ರದ ಶಿಲ್ಪಗಳು ಕಲಾತ್ಮಕವಾಗಿ ಕಂಡುಬರುತ್ತದೆ.

೪. ಈ ವಸ್ತು ಸಂಗ್ರಹಾಲಯದಲ್ಲಿರುವ ಇತರ ಶಿಲ್ಪಗಳು ಈ ಸಂಗ್ರಹಾಲಯದ ಮತ್ತೊಂದು ಆಕರ್ಷಣೆಯಾಗಿ ಕಲಾತ್ಮಕ ತೋಪೊಂದನ್ನು ಉದಾಹರಿಸಬಹುದು. ಮಿಶ್ರಲೋಹದಿಂದ ಮಾಡಿದ ಈ ತೋಪೊಂದರ ಮೇಲೆ ಅಲಂಕಾರಿಕ ಮೀನುಗಳ ರಚನೆ ಹಿಡಿಕೆಯ ರೂಪದಲ್ಲಿ ಪರ್ಶಿಯನ ಅಥವಾ ಆಫ್ಘನ್ನನ ಮೂಲದ ಲಿಪಿಗಾರಿಕೆ ಈ ಗಡಸು ಲೋಹದ ಮೇಲೆ ಕೊರೆದಿರುವದು ಅಚ್ಚರಿ ಮೂಡಿಸುತ್ತದೆ. ಲಿಪಿಗಳು ಸುಂದರವಾಗಿದ್ದು ನಕ್ಷೆಗಳಂತೆ ಕಾಣುತ್ತದೆ. ಈ ಕಾಲದಲ್ಲಿ ಇದರ ನಿರ್ಮಾಣ ಶೈಲಿಗಳ ಬಗ್ಗೆ ಅಚ್ಚರಿ ಮೂಡುತ್ತದೆ. ಸಂಗ್ರಹಾಲಯದವರು ಇದಕ್ಕೆ ಸೂಕ್ತವೇದಿಕೆ ಹಾಗೂ ರಕ್ಷಣೆ ನೀಡುವ ಕಡೆಗೆ ಗಮನಹರಿಸಬೇಕಿದೆ.

೫. ನೀಳವಾದ ಕಲಾತ್ಮಕ ತೋಪಿನ ಮತ್ತೊಂದು ಭಾಗ ಈ ಸಂಗ್ರಹಾಲಯದಲ್ಲಿದ್ದು

ನಿರಂತರವಾದ ಹೂಬಳ್ಳಿಗಳ ರಚನೆ ಇತರೆ ನಕ್ಷೆಗಳ ರಚನೆ ಹಿಂದೂ ಮತ್ತು ಮುಸ್ಲಿಂ ಮಿಶ್ರ ಶೈಲಿಯನ್ನು ಇಲ್ಲಿ ಕಾಣಬಹುದಾಗಿದೆ. ಇದಕ್ಕೂ ಕೂಡಾ ವಸ್ತು ಸಂಗ್ರಹಾಲಯದವರು ಸೂಕ್ತವೇದಿಕೆ ಹಾಗೂ ರಕ್ಷಣೆ ನೀಡುವ ಕಡೆಗೆ ಗಮನ ಹರಿಸಬೇಕಿದೆ.

೬. ಈ ವಸ್ತು ಸಂಗ್ರಹಾಲಯದಲ್ಲಿ ಅಪರೂಪವಾದ ಅಷ್ಟೇ ಕುತೂಹಲಕಾರಿಯಾದ ಪ್ರಾಚ್ಯ ಬೀಗಗಳು ಅದರ ಆಕಾರ ಹಾಗೂ ಉಪಯೋಗದ ಬಗ್ಗೆ ತಿಳಿಯಬಹುದು. ಕೋಟೆಯ ಸಂರಕ್ಷಣೆಗಾಗಿ ಬಳಸುತ್ತಿದ್ದಂತಹ ಬೀಗದ ರಚನೆ ಗಾತ್ರಗಳು ವಿಶೇಷಾಕಾರ, ಆಕೃತಿಗಳು, ಆಶ್ಚರ್ಯ ಮೂಡಿಸುವಂತಿದೆ. ಈ ಸಂಗ್ರಹಾಲಯದಲ್ಲಿ ಮೂರು ವಿಧದ ಬೀಗಗಳನ್ನು ಸಂಗ್ರಹಿಸಲಾಗಿದೆ. ಇದಕ್ಕೆ ಬಳಸಿದ ಅಚ್ಚುಗಾರಿಕೆ ಬಗ್ಗೆ ಇನ್ನೂ ಸಂಶೋಧನೆಗಳಾಗಬೇಕಿದೆ. ಅದರ ಕಾರ್ಯ ನಿರ್ವಹಣೆಗಳ ಬಗ್ಗೆ ಸಂಶೋಧನೆ ನಡೆಯಬೇಕಾಗಿದೆ.

೭. ಬಸವ ಕಲ್ಯಾಣದ ವಸ್ತುಸಂಗ್ರಹಾಲಯದ ಮತ್ತೊಂದು ಆಕರ್ಷಣೆಯಾಗಿದ್ದ ಅಂದಿನ ಸುಲ್ತಾನರಿಗಾಗಿ ಬಳಸುತ್ತಿದ್ದ ಸುಂದರ, ನವಿರಾದ ಹಾಗೂ ತೆರದ ಮಾದರಿಯ ಡೋಲಿ, ಇದ್ದು, ಇದು ಮರದ ರಚನೆಯಿಂದ ಕೂಡಿದ್ದು ಇಂದಿಗೂ ಸುಸ್ಥಿತಿಯಲ್ಲಿದೆ. ಒಟ್ಟಾರೆ ನಾಲ್ಕು ಜನರು ಹೊತ್ತೊಯ್ಯುವಂತಹ ಡೋಲಿ ಇದಾಗಿದೆ.

೮. ವಸ್ತುಸಂಗ್ರಹಾಲಯದ ಕೇಂದ್ರದಲ್ಲಿರುವ ಮತ್ತೊಂದು ಕುತೂಹಲಭರಿತ ಪಲ್ಲಕ್ಕಿ-ಯೊಂದನ್ನು ಸಂಗ್ರಹಿಸಿದ್ದು ಇದು ರಾಣಿಯರ ಪ್ರವಾಸಕ್ಕೆ ಬಳಸಲಾಗುತ್ತಿದ್ದು ಬೃಹತ್ ಪೆಟ್ಟಿಗೆ ಮಾದರಿಯ ಈ ಡೋಲಿ ಪಕ್ಕಕ್ಕೆ ಸರಿದಾಡಿಸುವ ಬಾಗಿಲು ಕಿಟಕಿಗಳನ್ನು ಹೊಂದಿದ್ದು ಕಿಟಕಿಗಳನ್ನು ಗಾಜಿನಿಂದ ನಿರ್ಮಿಸಲಾಗಿದೆ. ಇದರ ಪ್ರವೇಶದ್ವಾರ ಒಳಗಡೆ ಕಿರಿದಾಗಿರುವದರಿಂದ ಬಾಗಿ ಮುದುರಿ ಕುಳಿತುಕೊಳ್ಳಬೇಕಾದ ಸ್ಥಿತಿ ಆಶ್ಚರ್ಯಗೊಳಿಸುತ್ತದೆ.

೯. ಈ ವಸ್ತುಸಂಗ್ರಹಾಲಯದಲ್ಲಿ ಹಿಂದಿನ ಅರಸರು ಬಳಸಿದ ನೀಳವಾದ ಕತ್ತಿಗಳು ಇತರೆ ಆಯುಧಗಳು ಯುದ್ಧ ಸಾಮಗ್ರಿಗಳನ್ನು ಸಂಗ್ರಹಿಸಲಾಗಿದ್ದು ಈ ಕತ್ತಿಯ ಹಿಡಿಕೆ ಹಾಗೂ ಓರೆಗಳು ಕಲಾತ್ಮಕ ನಕ್ಷೆಗಳಿಂದ ಕೂಡಿದೆ.

೧೦. ಈ ವಸ್ತು ಸಂಗ್ರಹಾಲಯದ ಕೇಂದ್ರದಲ್ಲಿ ಹಿಂದಿನ ಅರಸರು ಬಳಸಿದ ಚೂಪಾದ ಮೊನೆಯ ಈಟಿ, ಭರ್ಜಿ ಮುಂತಾದ ಆಯುಧಗಳು ಮಿಶ್ರಲೋಹದಿಂದ ರಚನೆ ಮಾಡಲಾಗಿದೆ.

ಇವುಗಳೊಂದಿಗೆ ಲೋಹದ ಗುಂಡುಗಳ ಯುದ್ಧದಲ್ಲಿ ಬಳಸಬಹುದಾದ ಆಯುಧಗಳನ್ನು ಒಂದೆಡೆ ನೆಲದ ಮೇಲೆ ಪ್ರದರ್ಶನಕ್ಕೆ ಇಡಲಾಗಿದೆ. ಇವು ಆ ಕಾಲದ ರಾಜಕೀಯ, ಆರ್ಥಿಕ, ಸಾಮಾಜಿಕ ಸ್ಥಿತಿಗಳನ್ನು ತಿಳಿಸಿಕೊಡುವದರಲ್ಲಿ ಉತ್ತಮ ಸಾಕ್ಷಿಯಾಗಿದೆ. ಇಲ್ಲಿಯೂ ಕೂಡಾ ಸಂಗ್ರಹಾಲಯದ ಮತ್ತಷ್ಟು ಇದರ ರಕ್ಷಣೆ ಗಮನಹರಿಸಬೇಕಾಗಿದೆ. ಇದು ಕರ್ನಾಟಕದ ಆಸ್ತಿಯಾಗಿರುವುದರಿಂದ ಇದಕ್ಕೆ ಹೆಚ್ಚಿನ ಗಮನಹರಿಸಬೇಕಾಗಿದೆ.

ಅಧ್ಯಾಯ - ಆರು

ಬಸವಕಲ್ಯಾಣದ ವಸ್ತುಸಂಗ್ರಹಾಲಯದ ಸ್ಥಿತಿಗತಿ

ಅಧ್ಯಾಯ - ಆರು

ಬಸವಕಲ್ಯಾಣದ ವಸ್ತುಸಂಗ್ರಹಾಲಯದ ಸ್ಥಿತಿಗತಿ

ವಿಶ್ವವಿದ್ಯಾಲಯವಾಗಲಿ, ಅಕಾಡೆಮಿಗಳಾಗಲಿ, ಗ್ಯಾಲರಿಗಳಾಗಲಿ ಅಥವಾ ವಸ್ತು ಸಂಗ್ರಹಾಲಯಗಳಾಗಲಿ ಆರಂಭಿಸುವದು ಎಷ್ಟು ಕಷ್ಟದ ಕೆಲಸವಾಗಿರುತ್ತದೆ ಅಷ್ಟೇ ಕಷ್ಟದ ಕೆಲಸ ಅವುಗಳನ್ನು ನಿರಂತರವಾಗಿ ಕಾಪಾಡಿಕೊಳ್ಳುವುದರಲ್ಲಿರುತ್ತದೆ. ಇವುಗಳನ್ನು ಕೇವಲ ಸ್ಥಾಪಿಸಿ ಬಿಟ್ಟರೆ ನಡೆಯುವುದಿಲ್ಲ ಇವು ಸುವ್ಯವಸ್ಥಿತವಾಗಿ ಕಾಪಾಡಿಕೊಳ್ಳುವುದು ಬಹುಮುಖ್ಯವಾಗಿರುತ್ತದೆ. ಬಸವಕಲ್ಯಾಣದಲ್ಲಿ ಸ್ಥಾಪಿಸಿದ ವಸ್ತುಸಂಗ್ರಹಾಲಯದ ಸ್ಥಿತಿಗತಿ ಕುರಿತು ಈ ಮುಂದೆ ಚರ್ಚಿಸಲಾಗಿದೆ. ಏಕೆಂದರೆ ಈ ವಸ್ತು ಸಂಗ್ರಹಾಲಯದ ಕುರಿತು ಅಧ್ಯಯನ ಮಾಡುವಾಗ ಅವುಗಳ ಸ್ಥಿತಿಗತಿಯು ಅಷ್ಟೇ ಮಹತ್ವದ ಪಾತ್ರ ನಿರ್ವಹಿಸುತ್ತದೆ.

ಈ ವಸ್ತು ಸಂಗ್ರಹಾಲಯದಲ್ಲಿನ ಶಿಲ್ಪಕಲಾಕೃತಿಗಳು ಪ್ರದರ್ಶನಕ್ಕೆ ಪಾದಪೀಠ(ಪೆಡಸ್ಟಲ್) ಮೇಲೆ ಇಡಲಾಗಿದೆ. ಹಾಗೂ ಹಲವಾರು ಶಿಲ್ಪಕಲಾಕೃತಿಗಳು ವಸ್ತು ಸಂಗ್ರಹಾಲಯದ ಹೊರಾಂಗಣದಲ್ಲಿದ್ದು, ಅವುಗಳು ಸುಮಾರು ಒಂದು ನೂರಕ್ಕೂ ಹೆಚ್ಚು ಶಿಲ್ಪಕಲಾಕೃತಿಗಳಿಗೆ ಪಾದಪೀಠ(ಪೆಡಸ್ಟಲ್)ಗಳು ಬೇಕಾಗಿದ್ದು, ಅಲ್ಲಿ ಹಲವಾರು ಸಂಕೀರ್ಣ ವಸ್ತುಗಳನ್ನು ಎರಡು ಕೋಣೆಗಳಲ್ಲಿ ಮಾತ್ರ ಮಧ್ಯಭಾಗದಲ್ಲಿ ಸಂಗ್ರಹಿಸಲಾಗಿದೆ.

ಅಷ್ಟೇ ಅಲ್ಲದೆ ವಸ್ತು ಸಂಗ್ರಹಾಲಯದಲ್ಲಿ ಅರೇಬಿಕ್ ಅಥವಾ ಉರ್ದುಭಾಷೆಯಲ್ಲಿ ದೊಡ್ಡ ದೊಡ್ಡ ಗಂಟೆಗಳ ಮೇಲೆ ಬರೆದಂತಹ ಅಕ್ಷರಗಳನ್ನು ಕಾಣಬಹುದು. ಹಾಗೂ ಅಲ್ಲಿನ ಅರಸರು ಉಪಯೋಗಿಸುತ್ತಿದ್ದ ಡೋಲಿ ಇತ್ಯಾದಿ ವಸ್ತುಗಳನ್ನು ನೋಡಬಹುದು.

ಈ ವಸ್ತು ಸಂಗ್ರಹಾಲಯದ ಪಕ್ಕದಲ್ಲಿ ಅರಮನೆ ಆವರಣ ಇರುವುದರಿಂದ ಇಲ್ಲಿನ ವಸ್ತು ಸಂಗ್ರಹಾಲಯದಲ್ಲಿನ ವಸ್ತುಗಳು, ವರ್ಣಚಿತ್ರಗಳು, ಮತ್ತು ಶಿಲ್ಪಕಲಾಕೃತಿಗಳ ವೀಕ್ಷಣೆಗೆ ಅನೂಕೂಲವಾಗುತ್ತದೆ.

ಈ ವಸ್ತು ಸಂಗ್ರಹಾಲಯದ ಒಳಭಾಗದಲ್ಲಿ ೪ ನಾಲ್ಕು ಕೋಣೆಗಳನ್ನು ಕಾಣುತ್ತೇವೆ. ಒಂದರಲ್ಲಿ ಕಾರ್ಯಾಲಯ, ಮತ್ತೊಂದರಲ್ಲಿ ವರ್ಣಚಿತ್ರಗಳು ಹಾಳಾಗಿದ್ದು, ಇನ್ನೂ ಎರಡು ಮೂರು ಕೋಣೆಗಳಲ್ಲಿ ಶಿಲ್ಪಕಲಾಕೃತಿಗಳು ಕಾಣುತ್ತೇವೆ. ವಸ್ತುಸಂಗ್ರಹಾಲಯದ ಒಳಗಿನ ಎರಡು ಕೋಣೆಗಳಲ್ಲಿ ಶಿಲ್ಪಕಲಾಕೃತಿಗಳು ಕಾಣುತ್ತೇವೆ. ಈ ಶಿಲ್ಪಗಳನ್ನು ಬೀದರ ಹಾಗೂ ಬಸವಕಲ್ಯಾಣದ ಸುತ್ತಮುತ್ತಲಿನ ಹಳ್ಳಿ ಹಾಗೂ ನಾನಾ ಕಡೆಗಳಿಂದ ಸಂಗ್ರಹಿಸಿಕೊಂಡು ಈ ವಸ್ತು ಸಂಗ್ರಹಾಲಯದಲ್ಲಿ ಇರಿಸಲಾಗಿದೆ. ವಸ್ತು ಸಂಗ್ರಹಾಲಯದಲ್ಲಿ-ರುವಂತಹ ಎಲ್ಲಾ ಶಿಲ್ಪಕಲಾಕೃತಿಗಳನ್ನು ಪಾದಪೀಠ(ಪೆಡಸ್ಟಲ್) ಮೇಲೆ ಇಡಲಾಗಿದೆ. ಅದೇ ರೀತಿ ಇನ್ನೂ ಹಲವಾರು ಶಿಲ್ಪ ಕಲಾಕೃತಿಗಳನ್ನು ಹೊರಾಂಗಣದಲ್ಲಿ ಸಂಗ್ರಹಿಸಲಾಗಿದ್ದು, ಅವುಗಳಿಗೆ ಪಾದಪೀಠ(ಪೆಡಸ್ಟಲ್)ಗಳ ಅವಶ್ಯಕತೆಯಿದೆ.

ಹಳೆಯ ಕಾಲದ ಈ ಚಿತ್ರಗಳು ಆಗಿನ ಸಮಯ ಪರಿಚಯಿಸುವ ಹಾಗೂ ಆ ಸಮಯದ ಸ್ಥಿತಿಗತಿ ಮತ್ತು ಇನ್ನಿತರ ವಿಷಯಗಳು ತಿಳಿಸಿಕೊಡುವ ವರ್ಣಚಿತ್ರಗಳನ್ನು ಮಾತ್ರ ಇಲ್ಲಿ ಸುವ್ಯವಸ್ಥಿತವಾಗಿ ಪ್ರದರ್ಶನ ಮಾಡಿಲ್ಲವೆಂದು ನನ್ನ ಭಾವನೆ. ಈ ವಸ್ತುಸಂಗ್ರಹಾಲಯದಲ್ಲಿ ಇದರ ಬಗ್ಗೆ ಮೇಲ್ವಿಚಾರಕರು ಮತ್ತು ಪುರಾತತ್ವ ಇಲಾಖೆಯವರು ಹೆಚ್ಚು ಗಮನ ನೀಡಿಲ್ಲವೆನಿಸುತ್ತದೆ.

ಈ ವಸ್ತು ಸಂಗ್ರಹಾಲಯಕ್ಕೆ ಹೋಗುವ ಬಾಗಿಲಿನ ಪಕ್ಕದಲ್ಲಿಯೇ ತೋಪು

ಮತ್ತು ಇನ್ನಿತರ ಈಗ ತಾನೇ ದೊರಕಿರುವ ಶಿಲ್ಪಕಲಾಕೃತಿಗಳನ್ನು ನೋಡಬಹುದು. ಇಲ್ಲಿನ ಸಧ್ಯದ ಪರಿಸ್ಥಿತಿಯಲ್ಲಿ ಬಸವಕಲ್ಯಾಣದ ವಸ್ತುಸಂಗ್ರಹಾಲಯದ ಬಗ್ಗೆ ಪುಸ್ತಕಗಳು ಇಲ್ಲ, ಕೈಪಿಡಿ ಇಲ್ಲ, ಮತ್ತು ಗಣಕಯಂತ್ರದ ವ್ಯವಸ್ಥೆ ಇಲ್ಲ. ಇದನ್ನೆಲ್ಲ ಗಮನಿಸಬೇಕಾಗಿದೆ. ಹಾಗೂ ಮತ್ತೊಂದು ಮುಖ್ಯ ಅಂಶವೆಂದರೆ ಸುತ್ತಲಿನ ಶಾಲಾಮಕ್ಕಳಿಗೆ ವರ್ಷಕ್ಕೆ ಎರಡು ಬಾರಿಯಾದರೂ ವಸ್ತುಸಂಗ್ರಹಾಲಯದ ಭೇಟಿಗೆ ಅನುಕೂಲವಾಗುವಂತೆ ಸರ್ಕಾರ ಗಮನಹರಿಸಬೇಕಾಗುತ್ತದೆ.

ಸರ್ಕಾರ ವಸ್ತುಸಂಗ್ರಹಾಲಯದಲ್ಲಿ ಕಾಣುವಂತ ಇತರೇ ವಸ್ತುಗಳು ಕುರಿತು ಸಂಕೀರ್ಣವಾದಂತಹ ಹಲವಾರು ವಸ್ತುಗಳನ್ನು ವರ್ಣಚಿತ್ರಗಳ ಕೋಣೆಯ ಪಕ್ಕದಲ್ಲಿ ಇರಿಸಲಾಗಿದೆ. ಆದರೆ ಇವುಗಳು ಕೂಡಾ ಒಂದು ಕಡೆ ಸಂರಕ್ಷಣೆಯಾಗಿದ್ದರೂ ಸಹ ಸರಿಯಾದ ವ್ಯವಸ್ಥಿತವಾದ ಪ್ರದರ್ಶನ ಮಾಡಿಲ್ಲವೆಂಬ ನನ್ನ ಭಾವನೆ. ಇನ್ನೂ ಹಲವಾರು ವಸ್ತುಗಳ ಸಂಗ್ರಹವಿದ್ದರೂ ಅವುಗಳಿಗೆ ಸುವ್ಯವಸ್ಥಿತವಾದ ಪ್ರದರ್ಶನ ನೋಡುಗರನ್ನು ಕಾಡುತ್ತದೆ.

ಕೋಣೆಗಳಲ್ಲಿ ಕಳೆದ ದಶಕಗಳ ಹಿಂದೆ ವಸ್ತು ಸಂಗ್ರಹಾಲಯವನ್ನು ಅಷ್ಟು ಅಚ್ಚುಕಟ್ಟಾಗಿ ಸುವ್ಯವಸ್ಥಿತವಾಗಿ ಕಂಡು ಬಂದಿಲ್ಲ ಆದರೆ ಇಂದು ಅವುಗಳ ಕಡೆಗೆ ಮನ ಸೆಳೆಯುವಂತಾಗಿದೆ. ಈ ವಸ್ತುಸಂಗ್ರಹಾಲಯದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಶಿಲ್ಪಗಳ ಸಂಗ್ರಹಣೆ ಕಂಡುಬರುತ್ತದೆ.

ಅಧ್ಯಾಯ - ಏಳು

ಸಮಾರೋಪ

ಅಧ್ಯಾಯ - ಏಳು

ಸಮಾರೋಪ

ವಸ್ತುಸಂಗ್ರಹಾಲಯಗಳ ಬೆಳವಣಿಗೆಯ ಇತಿಹಾಸವನ್ನು ೨೦೦ ವರ್ಷಗಳಷ್ಟು ಹಿಂದಿನದು ಎಂದು ಗುರುತಿಸಲಾಗಿದೆ. ಸುಮಾರಾಗಿ ೧೨ನೇ ಶತಮಾನದ ಮಧ್ಯಭಾಗಕ್ಕೂ ೧೯ನೇ ಶತಮಾನದ ಆದಿಗೂ ಮಧ್ಯೆ ಜನತಾ ವಸ್ತು ಸಂಗ್ರಹಾಲಯ ಹೊಸ ಕಲ್ಪನೆ ಐರೋಪ್ಯ ಸಮಾಜದಿಂದ ರೂಪಿತವಾಯಿತು. ಕರ್ನಾಟಕದ ಐತಿಹಾಸಿಕ ಸ್ಥಳವಾದ ಬಸವಕಲ್ಯಾಣ ದೊಡ್ಡದಾದಂತಹ ಇತಿಹಾಸವನ್ನು ಹೊಂದಿದೆ. ವಸ್ತು ಸಂಗ್ರಹಾಲಯದ ಹೊಸ ವಿಚಾರಗಳು ಬೆಳಕಿಗೆ ಬರುತ್ತಿದ್ದು ಈಗ ಸಂಶೋಧನೆಯಲ್ಲೂ ತೊಡಗಿರುವವರ ಕಾಲದ ನಂತರವು ತನ್ನೊಳಗೆ ಅಡಗಿಕೊಂಡು ಮುಂದಿನ ಪೀಳಿಗೆಯನ್ನು ಆಹ್ವಾನಿಸುವ ಸಲುವಾಗಿ ನಿಂತಿರುತ್ತದೆ. ಬಸವಕಲ್ಯಾಣದ ಚಾರಿತ್ರಿಕ ಕಾಲದಿಂದಲೂ ಜನವಸತಿ ಇದ್ದು ಪ್ರಾಚೀನ ಸಮುದಾಯವಾಗಿ ಬೆಳೆದು ನಿಂತಿದೆ.

ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನವನ್ನು ಕೈಗೊಂಡಿರುವ ನನ್ನ ಉದ್ದೇಶ, ಅಧ್ಯಯನದ ಸ್ವರೂಪ, ಅಧ್ಯಯನದ ವ್ಯಾಪ್ತಿ ಮತ್ತು ಅಧ್ಯಯನದ ವೈಚಾರಿಕತೆಯನ್ನು ಇಲ್ಲಿ ಹೇಳಲಾಗಿದೆ.

ಎರಡನೇ ಅಧ್ಯಾಯದಲ್ಲಿ ಬಸವಕಲ್ಯಾಣದ ಐತಿಹಾಸಿಕ, ಸಾಂಸ್ಕೃತಿಕ, ಧಾರ್ಮಿಕ, ಹಾಗೂ ಚಾರಿತ್ರಿಕ ಹಿನ್ನೆಲೆಯನ್ನು ಇಲ್ಲಿ ವಿವರವಾಗಿ ವಿಂಗಡಿಸಲಾಗಿದೆ. ಬಸವಕಲ್ಯಾಣ ಎಂಬ ಹೆಸರು ಯಾವ ತರನಾಗಿ ಬಂದಿತು. ಆ ಕೋಟೆಯನ್ನು ಕಟ್ಟಿದವರಾರು, ಅದಕ್ಕೆ ಸಹಾಯ ಮಾಡಿದವರಾರು ಬಸವಕಲ್ಯಾಣದ ಸಂಸ್ಥಾನದ ಮೇಲೆ ಯಾರು ಯಾರು ಯುದ್ಧಕ್ಕೆ ಬಂದಿದ್ದರು ಎಂಬುದನ್ನು ತಿಳಿದು ಬರುತ್ತದೆ. ಇಲ್ಲಿ ಪ್ರಬಲವಾದಂತಹ ದೊರೆಗಳು ಇಲ್ಲಿನ ಆಳ್ವಿಕೆಯನ್ನು ವಿವರವಾಗಿ ವಿವರಿಸಲಾಗಿದೆ. ಅರಸನು ಸಾಧಿಸಿರುವಂತಹ ಸಾಧನೆ ಅಪೂರ್ವವಾದದ್ದು ಎಂದು ಇತಿಹಾಸದ ಮೂಲದಿಂದ ತಿಳಿದು ಬರುತ್ತದೆ.

ಮೂರನೇ ಅಧ್ಯಾಯದಲ್ಲಿ ಬಸವಕಲ್ಯಾಣದ ಪ್ರಾಚ್ಯವಸ್ತು ಸಂಗ್ರಹಾಲಯವು ಸ್ಥಾಪನೆ ಯಾರಿಂದ ಸ್ಥಾಪನೆಯಾಯಿತು? ಯಾವಾಗ ಸ್ಥಾಪನೆಯಾಯಿತು? ಇಲ್ಲಿ ಸಂಗ್ರಹವಾಗಿರುವಂತಹ ವಸ್ತುಗಳು ಇಲ್ಲಿ ಸಂಗ್ರಹಗೊಂಡಂತಹ ಶಿಲ್ಪಕಲಾಕೃತಿಗಳ ಮುಖ್ಯಾಂಶಗಳನ್ನು ಇಲ್ಲಿ ತಿಳಿಸಲಾಗಿದೆ.

ನಾಲ್ಕನೆ ಅಧ್ಯಾಯದಲ್ಲಿ ಬಸವಕಲ್ಯಾಣದ ವಸ್ತುಸಂಗ್ರಹಾಲಯದಲ್ಲಿರುವ ವರ್ಣಚಿತ್ರಗಳ, ರೇಖಾ ಚಿತ್ರಗಳ, ಕಿರುರೂಪಚಿತ್ರಗಳ ಬಗ್ಗೆ ವಿಮರ್ಶೆ ಮಾಡಲಾಗಿದೆ. ಈ ಎಲ್ಲಾ ಚಿತ್ರಗಳು ಬಸವಕಲ್ಯಾಣದಲ್ಲಿ ನಡೆದ ಘಟನೆಗಳನ್ನು ಆಧರಿಸಿ ಈ ಕಲಾಕೃತಿಗಳನ್ನು ರಚಿಸಲಾಗಿದೆ. ಇಲ್ಲಿ ವರ್ಣಚಿತ್ರಗಳು ಮತ್ತು ರೇಖಾಚಿತ್ರಗಳು ರಚನಾಕಾರನ ಹೆಸರು ತಿಳಿಸಲಾಗಿದೆ.

ಐದನೆಯ ಅಧ್ಯಾಯದಲ್ಲಿ ಬಸವಕಲ್ಯಾಣದ ವಸ್ತುಸಂಗ್ರಹಾಲಯದ ಶಿಲ್ಪಕಲಾಕೃತಿಗಳ ಬಗ್ಗೆ ವಿವರಿಸಲಾಗಿದೆ. ಇಲ್ಲಿ ಹಲವು ಕಡೆಗಳಿಂದ ಸಂಗ್ರಹಿಸಿರುವಂತಹ ಕಲಾಕೃತಿಗಳ ಬಗ್ಗೆ ವಿವರವಾಗಿ ಅಧ್ಯಯನವು ಕೈಗೊಂಡು ಈ ಶಿಲ್ಪಕೃತಿಗಳನ್ನು ವಿಮರ್ಶಿಸಲಾಗಿದೆ. ಹಾಗೂ ಬಸವಕಲ್ಯಾಣದ ವಸ್ತುಸಂಗ್ರಹಾಲಯದ ಇತರೆ ಸಂಕೀರ್ಣ ಕಲಾವಸ್ತುಗಳ ಬಗ್ಗೆ ಬರೆಯಲಾಗಿದೆ. ಇಲ್ಲಿ ಸೈನಿಕರು ಆಗಿನ ಕಾಲದಲ್ಲಿ ಉಪಯೋಗಿಸುತ್ತಿದ್ದಂತಹ ಕತ್ತಿಗಳು, ಗುರಾಣಿಗಳು, ಬೀಗ, ಡೋಲಿ ಇತ್ಯಾದಿಗಳ ಬಗ್ಗೆ ತಿಳಿಸಲಾಗಿದೆ.

ಆರನೆಯ ಅಧ್ಯಾಯದಲ್ಲಿ ಬಸವಕಲ್ಯಾಣದ ವಸ್ತುಸಂಗ್ರಹಾಲಯದ ಸ್ಥಿತಿಗತಿ ಅಂದರೆ ಪ್ರಾರಂಭಿಸಿದಾಗ ಯಾವ ರೀತಿಯ ತೊಂದರೆಗಳನ್ನು ಅನುಭವಿಸಿದರು ಅದೇ ರೀತಿಯಾಗಿ ಈ ಒಂದು ಕಾಲದಲ್ಲಿ ಆ ವಸ್ತು ಸಂಗ್ರಹಾಲಯವನ್ನು ಯಾವ ರೀತಿಯಾಗಿ ಮುನ್ನಡೆಸಿಕೊಂಡು ಹೋಗುತ್ತಾರೆಂಬುದನ್ನು ಈ ಅಧ್ಯಾಯದಲ್ಲಿ ಕಾಣಬಹುದಾಗಿದೆ.

ಅಧ್ಯಯನಕ್ಕೆ ಒಟ್ಟು ಏಳು ಅಧ್ಯಾಯಗಳನ್ನು ಮಾಡಲಾಗಿದೆ. ಇವುಗಳಲ್ಲಿ ಆರು ಅಧ್ಯಾಯಗಳ ಕೆಲವೊಂದು ಫಲಿತಗಳನ್ನು ಇಲ್ಲಿ ಉಲ್ಲೇಖಿಸಲಾಗಿದೆ.

ಅಧ್ಯಯನದ ಫಲಿತಗಳು

* ಒಬ್ಬ ಸಾಮಾನ್ಯ ಮನುಷ್ಯನು ವಸ್ತುಗಳು ಎಂದರೆ ಸಾಮಾನ್ಯ ವಸ್ತುಗಳೇ ಎಂದು ಅರಿತಿದ್ದನು ಆದರೆ ಚಿತ್ರಕಲಾ ವಿದ್ಯಾರ್ಥಿಗಳು ದೃಶ್ಯಕಲಾತ್ಮಕವಾಗಿ ನೋಡಿದಾಗ ಪ್ರಾಚ್ಯವಸ್ತುಗಳಾಗಿ ಕಂಡುಬರುತ್ತವೆ.
* ಬಸವ ಕಲ್ಯಾಣದ ಸಾಂಸ್ಕೃತಿಕ, ಐತಿಹಾಸಿಕ, ಧಾರ್ಮಿಕ ಹಿನ್ನೆಲೆಯ ಬಗ್ಗೆ ತಿಳಿಸಲಾಗಿದೆ.
* ಬಸವಕಲ್ಯಾಣದಲ್ಲಿ ಸಂಪೂರ್ಣ ಅಲ್ಲದಿದ್ದರೂ ಅಲ್ಪ ಸ್ವಲ್ಪ ಮಟ್ಟಿಗಾದರೂ ವಸ್ತು ಸಂಗ್ರಹಾಲಯದ ಮತ್ತು ಬಸವಕಲ್ಯಾಣದ ಇತಿಹಾಸದ ಬಗ್ಗೆ ಅರಮನೆಯ ಬಗ್ಗೆ ವೈಭವವನ್ನು ಸಂಗ್ರಹಿಸಲಾಗಿದೆ.
* ಬಸವಕಲ್ಯಾಣದ ವಸ್ತುಸಂಗ್ರಹಾಲಯವನ್ನು ಇನ್ನೂ ಉತ್ತಮ ರೀತಿಯಲ್ಲಿ ಕೊಂಡೊಯ್ಯಲು ದೃಶ್ಯಕಲಾ ಸಂಶೋಧನೆಗೆ ಸರ್ಕಾರದ ಎಲ್ಲಾ ರೀತಿಯ ಸಹಕಾರ ನೀಡಬೇಕೆಂದು ಹಾಗೂ ಪ್ರಾಚ್ಯವಸ್ತುಗಳ ಹಾಗೂ ವರ್ಣಚಿತ್ರಗಳ ಛಾಯಾಚಿತ್ರವಿರುವ ಪುಸ್ತಕ ಹೊರತರುವ ಪ್ರಯತ್ನವನ್ನು ಸರ್ಕಾರ ಮಾಡಬೇಕಿದೆ.
* ಬಸವಕಲ್ಯಾಣದ ವಸ್ತುಸಂಗ್ರಹಾಲಯದಲ್ಲಿ ಅನೇಕ ಕಡೆಗಳಿಂದ ಸಂಗ್ರಹಿಸಿದಂತಹ ಶಿಲ್ಪಕಲಾಕೃತಿಗಳನ್ನು ನೋಡಬಹುದು.

* ಬಸವಕಲ್ಯಾಣದ ವಸ್ತುಸಂಗ್ರಹಾಲಯದಲ್ಲಿ ವರ್ಣಚಿತ್ರಗಳು, ರೇಖಾಚಿತ್ರಗಳನ್ನು ನೋಡಬಹುದು.

* ಬಸವಕಲ್ಯಾಣದ ವಸ್ತುಸಂಗ್ರಹಾಲಯದಲ್ಲಿ ಸಂಕೀರ್ಣ ವಸ್ತುಗಳ ಬಗ್ಗೆ ಮಾಹಿತಿಯನ್ನು ನೀಡಲಾಗಿದೆ. ಬಸವಕಲ್ಯಾಣದ ವಸ್ತುಸಂಗ್ರಹಾಲಯದ ಸ್ಥಿತಿಗತಿಯ ಬಗ್ಗೆ ತಿಳಿಸಲಾಗಿದೆ.

ಅನುಬಂಧಗಳು

* ಸಂಕ್ಷೇಪಗಳು
* ಗ್ರಂಥಋಣ
* ಬೀದರ ಜಿಲ್ಲೆಯ ವಸ್ತುಸಂಗ್ರಹಾಲಯಗಳ ಪಟ್ಟಿ
* ನಕ್ಷೆಗಳು

ಅನುಬಂಧ-೧

ಸಂಕ್ಷೇಪಗಳು

೦೧. ಸಂ	–	ಸಂಪಾದಕರು
೦೨. ಪ್ರ.ಸಂ	–	ಪ್ರಧಾನ ಸಂಪಾದಕರು
೦೩. ಪು.ಸಂ	–	ಪುಟ ಸಂಖ್ಯೆ
೦೪. ಕಿ.ಪ್ರ.	–	ಕಿರುಪ್ರಬಂಧ
೦೫. ಸಂ.ಪ್ರ	–	ಸಂಪ್ರಬಂಧ
೦೬. ಮ.ಪ್ರ	–	ಮಹಾಪ್ರಬಂಧ
೦೭. ಚಿ.ಸಂ.	–	ಚಿತ್ರಸಂಖ್ಯೆ
೦೮. ಬೆಂ.ವಿ.ವಿ.	–	ಬೆಂಗಳೂರು ವಿಶ್ವವಿದ್ಯಾಲಯ
೦೯. ಮ.ವಿ.ವಿ	–	ಮಂಗಳೂರು ವಿಶ್ವವಿದ್ಯಾಲಯ
೧೦. ಮೈ.ವಿ.ವಿ	–	ಮೈಸೂರು ವಿಶ್ವವಿದ್ಯಾಲಯ
೧೧. ಕ.ವಿ.ವಿ.ಹಂ.	–	ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೨. ಕ.ವಿ.ವಿ – ಕರ್ನಾಟಕ ವಿಶ್ವವಿದ್ಯಾಲಯ

೧೩. ಗು.ವಿ.ವಿ – ಗುಲ್ಬರ್ಗಾ ವಿಶ್ವವಿದ್ಯಾಲಯ

೧೪. ಕ.ಲ.ಅ.ಬೆಂ – ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು

೧೫. ಅ.ಪ್ರ – ಅಪ್ರಕಟಿತ

೧೬. ಪ್ರ – ಪ್ರಕಟಿತ

೧೭. ಯೋ.ವ – ಯೋಜನಾ ವರದಿ

೧೮. ಕ.ಸಾ.ಪ – ಕನ್ನಡ ಸಾಹಿತ್ಯ ಪರಿಷತ್

೧೯. ಕ್ರಿ.ಪೂ – ಕ್ರಿಸ್ತ ಪೂರ್ವ

೨೦. ಕ್ರಿ.ಶ. – ಕ್ರಿಸ್ತಶಕ

೨೧. ಅನು – ಅನುವಾದ

೨೨. ಪ್ರೊ. – ಪ್ರೊಫೇಸರ್

ಅನುಬಂಧ-೨

ಗ್ರಂಥಋಣ

೦೧. ಕನ್ನಡ ಗ್ರಂಥಗಳು

೦೧. ಕನ್ನಡ ಸಾಹಿತ್ಯ ಚರಿತೆ (ಸಂಪುಟ–೪) — (ಸಂ.) ಹಾ. ಮಾ. ನಾಯಕ
ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು
ವಿಶ್ವವಿದ್ಯಾಲಯ, ಮೈಸೂರು.
೧೯೭೬–೭೭

೦೨. ಕನ್ನಡ ಹಸ್ತಪ್ರತಿಗಳು – ಒಂದು ಅಧ್ಯಯನ — ಡಾ. ಬಿ. ಕೆ. ಹಿರೇಮಠ
ವೀರಶೈವ ಅಧ್ಯಯನ ವೇದಿಕೆ, ಬಿಜಾಪುರ
೧೯೯೨

೦೩. ಕರ್ನಾಟಕದ ಜನಪದ ಚಿತ್ರಕಲೆ — ಡಾ. ಎಸ್. ಸಿ. ಪಾಟೀಲ
ವೀರಶೈವ ಅಧ್ಯಯನ ಸಂಸ್ಥೆ, ಗದಗ
೧೯೯೩

೦೪. ಕರ್ನಾಟಕದ ವಾಸ್ತು ಶಿಲ್ಪ ಮತ್ತು ಚಿತ್ರಕಲೆ — ಡಾ. ಸಿಂಧಗಿ ರಾಜಶೇಖರ
ಸುಜಾತ ಪಬ್ಲಿಕೇಷನ್ಸ್, ಧಾರವಾಡ
೧೯೯೮

೦೫. **ಕರ್ನಾಟಕದ ಸಂಸ್ಕೃತಿ ಸಮೀಕ್ಷೆ** — **ಡಾ. ಎಚ್. ತಿಪ್ಪೇರುದ್ರಸ್ವಾಮಿ**
ಡಿ. ವಿ. ಕೆ. ಮೂರ್ತಿ ಪ್ರಕಾಶಕರು,
ಮೈಸೂರು. ೨೦೦೧

೦೬. **ಕರ್ನಾಟಕದಲ್ಲಿ ಅರಸು ಮನೆತನಗಳು ಸಂ-೧** — **ಲಕ್ಷ್ಮೀನಾರಾಯಣರಾವ್, ಎಸ್.ಆರ್.ಪಂಚಮುಖಿ**
ಕರ್ನಾಟಕ ಇತಿಹಾಸ ಸಂಶೋಧನಾ ಮಂಡಳಿ
ಧಾರವಾಡ. ೧೯೪೬

೦೭. **ಕರ್ನಾಟಕದಲ್ಲಿ ಚಿತ್ರಕಲೆ** — **ಶಿವರಾಮ ಕಾರಂತ**
ಪ್ರಸಾರಂಗ ಮೈಸೂರು ವಿ.ವಿ.
ಮೈಸೂರು. ೧೯೭೮

೦೮. **ಕರಕುಶಲ ಕಲೆಗಳು** — **(ಸಂ) ಡಾ.ಕರಿಗೌಡ ಬೀಚನಹಳ್ಳಿ**
ಕನ್ನಡ ವಿಶ್ವವಿದ್ಯಾಲಯ, ಹಂಪಿ
೨೦೦೦

೦೯. **ಚಾಲುಕ್ಯ ಶಿಲ್ಪ** — **ಡಾ. ಶಿವರಾಮ ಕಾರಂತ**
ಮಂಗಳೂರು
೧೯೫೨

೧೦. **ಚಿತ್ರಕಲಾ ಪ್ರಪಂಚ** — **(ಸಂ) ಪಿ.ಆರ್.ತಿಪ್ಪೇಸ್ವಾಮಿ**
ಕರ್ನಾಟಕ ಲಲಿತಕಲಾ ಅಕಾಡೆಮಿ
ಬೆಂಗಳೂರು. ೧೯೯೩

೧೧. **ದೃಶ್ಯಕಲಾ** — **ಎನ್.ಮರಿಶಾಮಚಾರ್**
ಸಿ.ವಿ.ಎಸ್. ಪ್ರಕಾಶನ,
ಬೆಂಗಳೂರು. ೧೯೮೫

೧೨. **ದೃಶ್ಯಕಲಾ ಸಂವೇದನೆ** — **ಪ್ರೊ. ಎಸ್. ಸಿ. ಪಾಟೀಲ**
ರಾಷ್ಟ್ರೀಯ ದೃಶ್ಯಕಲಾ ಅಕಾಡೆಮಿ,
ಧಾರವಾಡ. ೨೦೧೬

೧೩. **ಧರ್ಮ (ವಿಶ್ವಕೋಶ)** — **(ಸಂ) ರಹಮತ್ ತರೀಕೆರೆ**
ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ,
ಹಂಪಿ. ೨೦೦೦

೧೪. **ಧರ್ಮ ಮತ್ತು ಸಮಾಜ** — **ಡಾ. ಜಿ.ಎಸ್. ಶಿವರುದ್ರಪ್ಪ**
ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಸಂಪುಟ–೨
ಬೆಂಗಳೂರು. ೧೯೭೪–೭೫

೧೫. **ನಿಜದ ನೆಲೆ** — **(ಸಂ) ಡಾ.ಎಸ್.ಸಿ.ಪಾಟೀಲ, ಸತ್ಯಾನಂದ ಪಾತ್ರೋಟ**
ಡಾ. ಬಿ. ಕೆ. ಹಿರೇಮಠ ಅಭಿನಂದನಾ ಗ್ರಂಥ
ಬಸವೇಶ್ವರ ವಿದ್ಯಾವರ್ಧಕ ಸಂಘ,
ಬಾಗಲಕೋಟೆ. ೨೦೦೩

೧೬. **ಪ್ರಾಚೀನ ಲೇಖನ ಸಾಮಗ್ರಿಗಳು** — **(ಮೂಲ) ಡಾ.ಅಲ್ಬರ್ಟನ್‌ಗೌರ್, (ಅನು) ಡಾ. ಶ್ರೀನಿವಾಸ್ ಹಾವನೂರು, ಡಾ.ಲಕ್ಷ್ಮೀನಾರಾಯಣ ಅರೋರ**
ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ,
ಹಂಪಿ. ೨೦೦೦

೧೭. **ಪ್ರಾಚ್ಯವಸ್ತು ಸಂಶೋಧನೆ** — **ಡಾ. ಅ. ಸುಂದರ**
ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ. ೧೯೮೮

೧೮. **ಮೂರ್ತಿಶಿಲ್ಪ–ನೆಲೆ ಹಿನ್ನೆಲೆ** — **ಪ್ರೊ.ಎಸ್.ಕೆ.ರಾಮಚಂದ್ರರಾವ್**
ಬೆಂಗಳೂರು.
೧೯೭೫

೧೯. **ಲಿಂಗಾಯತ ಧರ್ಮ–ಒಂದು ಅಧ್ಯಯನ ಭಾಗ–೧ ಮತ್ತು ೨** — **ಹಿರೇಮಲ್ಲೂರು ಈಶ್ವರನ್**
ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು
೧೯೯೭

೨೦. **ವಿಜಯನಗರದ ಗಾರೆಶಿಲ್ಪ** — **ಡಾ. ಸಿ.ಮಹಾದೇವ**
ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ,
ಹಂಪಿ. ೨೦೦೦

೨೧. **ವೀರಶೈವ ಪುರಾಣಗಳು–ಒಂದು ಅಧ್ಯಯನ** — **ಡಾ. ಎಸ್. ವಿದ್ಯಾಶಂಕರ್**
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
೧೯೮೨

೨೨. **ಶಿವತತ್ವ ಚಿಂತಾಮಣಿ** — **ಲಕ್ಕಣ ದಂಡೇಶ**
ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ,
ಲಾಸ್ಯ ರಂಜನ, ಮೈಸೂರು.

೨೩. **ಶಿಲ್ಪಕಲಾ ಪ್ರಪಂಚ** — **(ಸಂ) ಪಿ.ಆರ್.ತಿಪ್ಪೇಸ್ವಾಮಿ**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೧೯೯೪

೨೪. **ಸಂಶೋಧನ ಚತುರ್ಮುಖ** — **ಡಾ. ಬಿ. ವಿ. ಶಿರೂರು**
ವಿದ್ಯಾನಿಧಿ ಪ್ರಕಾಶನ, ಹುಬ್ಬಳ್ಳಿ
೨೦೦೬

೨೫. **ಸಂಶೋಧನಾ ಸ್ವರೂಪ** (೫ನೇ ಮುದ್ರಣ) — **ಡಾ. ಶಿರೂರ ಬಿ. ವಿ.**
ಅನ್ನಪೂರ್ಣ ಪ್ರಕಾಶನ, ಹುಬ್ಬಳ್ಳಿ,
೨೦೧೨

೨೬. ಸೃಷ್ಟಿ (ಲೇಖನ ಸಂಕಲನ) - ಡಾ. ಬಿ. ಕೆ. ಹಿರೇಮಠ
ಬಾಪೂಜಿ ಗ್ರಾಮೀಣ ಅಭಿವೃದ್ಧಿ ಸಂಸ್ಥೆ (ರಿ)
ಬಾಗಲಕೋಟೆ. ೨೦೦೩

೨೭. ಸೌಂದರ್ಯಶಾಸ್ತ್ರ ಅನು. ಡಾ. ಕಾಶೀನಾಥ ಅಂಬಲಿಗೆ
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು

೨೮. ಹೈದ್ರಾಬಾದ್ ಕರ್ನಾಟಕ ಸಾಂಸ್ಕೃತಿಕ ವಿಶ್ವಕೋಶ – ಲಲಿತಕಲೆಗಳ ಸಂಪುಟ (ಸಂ.) ಡಾ. ಪಿ. ಕೆ. ಖಂಡೋಬಾ, ಡಾ. ಎಸ್. ಸಿ. ಪಾಟೀಲ
ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ,
ಗುಲಬರ್ಗಾ. ೨೦೧೨

೨೯. ಹೊಯ್ಸಳ ವಾಸ್ತುಶಿಲ್ಪ ಶ್ರೀಕಂಠಶಾಸ್ತ್ರೀ ಎಸ್.
ಮೈಸೂರು
೧೯೬೫

೩೦. ಜ್ಞಾನಗಂಗೋತ್ರಿ (ಕಲೆ, ಸಾಹಿತ್ಯ) ಕಿರಿಯರ ವಿಶ್ವಕೋಶ–೫ ಸಂ. ನಿರಂಜನ ಕೆ.
ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ,
ಬೆಂಗಳೂರು.

೦೨. ಇಂಗ್ಲೀಷ್ ಗ್ರಂಥಗಳು

01. *Art Line of Karnataka Sculpture* — *Arokia Swamy M*
730-954

02. *A History of Karnataka* — *Desai P. B.*
Kannada Research Institute,
Karnataka University, Dharwad
1970

03. *Art and Architecture of Indian Temples Vol-2* — *Prof. S K.Ramchandra Rao*
Kalpatharu Research Academy,
Bangalore.
1993

04. *Mohenjadaro and Indus Civilisation* — *Marshall Sir John*
London,
1931

05. ***Sculptural Art of the Kalyan Chalukyas - an analysis and Appraisal, Tha Chalukyas of Kalyana.*** Bangalore. 1983 — ***Dr. S. Nagaraju***

06. ***A Guide to Halebid*** Mysore. 1951 — ***Narasimhachar L.***

07. ***The Kesava Temple at Somanathapur*** Mysore Archaeological Series, Architecture and Sculpture, Bangalore. 1917 — ***Narasimhachar R.***


08. ***History of Western Gangas*** Mysore. 1976 — ***Sheik Ali B.***

09. ***Early Temple Architecture in Karnataka and its Ramification,*** Kannada Research Institute, Karnataka University, Dharwad 1969 — ***Soundara Rajan K.V***

10. ***Indus Civilization 3rd Edition*** Cambridge, 1968 — ***Wheeler R.E.M.***

11. ***Myths and Symbols in Indian Art and Civilization*** New York, 1947

ಕರ್ನಾಟಕ ರಾಜ್ಯ




ಬಸವಕಲ್ಯಾಣ ತಾಲೂಕು






ನಿಸರ್ಗ ಚಿತ್ರಣ





ಸಂಗ್ರಹಾಲಯದಲ್ಲಿ ಸಂಗ್ರಹಗೊಂಡಿರುವ ಕಲಾಕೃತಿಗಳು



ಭಗ್ನಗೊಂಡಿರುವ ಶಿಲ್ಪ -೦೧



ಭಗ್ನಗೊಂಡಿರುವ ಶಿಲ್ಪ -೦೨



ಭಗ್ನಗೊಂಡಿರುವ ಶಿಲ್ಪ -೦೩




ಭಗ್ನಗೊಂಡಿರುವ ಶಿಲ್ಪ -೦೪



ಭಗ್ನಗೊಂಡಿರುವ ಶಿಲ್ಪ -೦೫

ಭಗ್ನಗೊಂಡಿರುವ ಶಿಲ್ಪ -೦೬, ೦೭ ಮತ್ತು ೦೮








ಭಗ್ನಗೊಂಡಿರುವ ಶಿಲ್ಪ -೦೯, ೧೦ ಮತ್ತು ೧೧









ಭಗ್ನಗೊಂಡಿರುವ ಶಿಲ್ಪ - ೧೨

ಭಗ್ನಗೊಂಡಿರುವ ಶಿಲ್ಪ - ೧೩





ಭಗ್ನಗೊಂಡಿರುವ ಶಿಲ್ಪ - ೧೪



ಭಗ್ನಗೊಂಡಿರುವ ಶಿಲ್ಪ - ೧೫




ಭಗ್ನಗೊಂಡಿರುವ ಶಿಲ್ಪ - ವಿಷ್ಣು



ಭಗ್ನಗೊಂಡಿರುವ ಶಿಲ್ಪ - ಚೌರಿ ಬೇರಕ್ಸ



ಭಗ್ನಗೊಂಡಿರುವ ಶಿಲ್ಪ - ಅರ್ಧನಾರೀಶ್ವರ



ಭಗ್ನಗೊಂಡಿರುವ ಶಿಲ್ಪ - ನಾಗದೇವತೆ




ಭಗ್ನಗೊಂಡಿರುವ ಶಿಲ್ಪ - ನಾಗದೇವತೆ

ಭಗ್ನಗೊಂಡಿರುವ ಶಿಲ್ಪ - ಗಣೇಶ





ಭಗ್ನಗೊಂಡಿರುವ ಶಿಲ್ಪ - ೧೬



ಭಗ್ನಗೊಂಡಿರುವ ಶಿಲ್ಪ - ವೀರಗಲ್ಲು



ಭಗ್ನಗೊಂಡಿರುವ ಶಿಲ್ಪ - ವೀರಗಲ್ಲು



ಭಗ್ನಗೊಂಡಿರುವ ಕಂಭ

ಗ್ನಗೊಂಡಿರುವ ಕಂಭ






ಭಗ್ನಗೊಂಡಿರುವ ಶಿಲ್ಪ - ಕುಬೇರ




ಭಗ್ನಗೊಂಡಿರುವ ಶಿಲ್ಪ - ವಿಷ್ಣು





ಭಗ್ನಗೊಂಡಿರುವ ಶಿಲ್ಪ- ವರಾಹ



ಲಿಂಗ ಮತ್ತು ನಂದಿಯ ಚಿತ್ರಕಲಾಕೃತಿ




ಕಲಾತ್ಮಕ ಗೂಳಿ ಚಿತ್ರ



ಕಲಾವಿದ ರುಮಾಲೆ ಚೆನ್ನಬಸವಯ್ಯನವರ ನಿಸರ್ಗ ಕಲಾಕೃತಿ



ನಿಸರ್ಗ ಕಲಾಕೃತಿ



ವೈ ಸುಬ್ರಹ್ಮಣ್ಯರಾಜು ಅವರ ನಿಸರ್ಗ ಕಲಾಕೃತಿ



ಸಮಭಂಗಿಯಲ್ಲಿ ನಿಂತ ರಾಮ



ಸಮಭಂಗಿಯ ಶಿವ



ಕಲ್ಯಾಣ ಚಾಲುಕ್ಯರ ಅಪರೂಪದ ಶಿಲ್ಪ



ಶೇಷಶಯನ



ಸಮಭಂಗಿಯಲ್ಲಿ ನಿಂತಿರುವ ರಾಮನ ಶಿಲ್ಪ



ಸಮಭಂಗಿಯಲ್ಲಿ ನಿಂತಿರುವ ರಾಮನ ಶಿಲ್ಪ



ನಟರಾಜ



ಮದನಿಕ ಶಿಲ್ಪ



ಶಿವ ಮತ್ತು ಪಾರ್ವತಿ ಕುಳಿತ ಭಂಗಿಯ ಶಿಲ್ಪಪುಂಜ



ರೋಷವೇಷದ ಗಣಪ



ಸಮಭಂಗಿಯ ರಾಮ ಶಿಲ್ಪ



ವರಾಹ



ಜೈನ ದೇವಾಲಯವೊಂದರ ಸಂಕೀರ್ಣ ಶಿಲ್ಪ



ದಂಪತಿಯ ಶಿಲ್ಪಗಳು



ಭಗ್ನಗೊಂಡ ನಟರಾಜನ ಶಿಲ್ಪ



ನಾಟ್ಯಶಿವ



ನಾಟ್ಯಶಿವ



ದೈವ ದಂಪತಿಗಳ ಶಿಲ್ಪ



ಸಲಗಗಳು



ಯಾಳಿ



ಕಿಟಕಿಯ ದೃಶ್ಯ (ತೈಲವರ್ಣ ಮಾಧ್ಯಮ)



ಕಲಾತ್ಮಕ ತೋರಣಗಳು



ಕಲಾತ್ಮಕ ತೋರಣಗಳು





ವಿವಿಧ ಆಕಾರದ ಮಿಶ್ರ ಲೋಹದ ಆಯುಧಗಳು



ರಾಜನನ್ನು ಹೊತ್ತೊಯ್ಯುವ ತೆರೆದ ಡೋಲಿ (ಪಲ್ಲಕ್ಕಿ)



ರಾಣಿಯನ್ನು ಹೊತ್ತೊಯ್ಯುವ ಮುಚ್ಚಿದ ಡೋಲಿ (ಪಲ್ಲಕ್ಕಿ)







ತೋಪುಗಳು

